ಲಂಕೇಶ್

ಮೇ 5, 2010 ರೂ. 12/-




ಸೆಕ್ಸಾನಂದ ಬಿಡುಗಡೆಯ ಬಂಧನ?



ಯುವಕನ ಕೊಲೆ ಹಿಂದೆ ಆಚಾರ್ಯನ ಶಿಷ್ಯ?

ಕಲಾಸಿಪಾಳ್ಯದ ವಂಚಕ ಸುಂದರಿ

ಬಾಂಬ್ ಬ್ಲಾಸ್ಟ್ ಮುಜಾಹಿದ್ದೀನ್ ಮಸಲತ್ತಾ?



ಕವಿಯೊಬ್ಬನ ದುರಂತ ಸಾವು

ರಂಜನೆ | ಬೋಧನೆ | ಪ್ರಚೋದನೆ
ಲಂಕೇಶ್

ಸೆನ್ಸಸ್-2010


ಜನಗಣತಿಯೋ? ಬೇಹುಗಾರಿಕೆಯೋ?!

ಭಾರತದ ಇತಿಹಾಸದಲ್ಲೇ ಏಕೆ ಮನುಕುಲದ ಇತಿಹಾಸದಲ್ಲೇ ಅತಿದೊಡ್ಡದಾದ ಜನಗಣತಿ ಕಾರ್ಯಾಚರಣೆಯು ಇದೇ ತಿಂಗಳಿಂದ ಭಾರತದಲ್ಲಿ ಪ್ರಾರಂಭವಾಗಿದೆ. ಸಾಮಾನ್ಯವಾಗಿ ಜನಗಣತಿಗಳು ತಮ್ಮ ದೇಶದಲ್ಲಿ ಇರುವ ಜನತೆಯ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಬಗ್ಗೆ ವಿವರಗಳನ್ನು ನೀಡಿ ಅವುಗಳನ್ನು ಉತ್ತಮಗೊಳಿಸಲು ಬೇಕಾದ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸುತ್ತವೆ. 1873ರಲ್ಲಿ ಬ್ರಿಟಿಷರು ಈ ದೇಶದಲ್ಲಿ ಜನಗಣತಿ ಆರಂಭಿಸಿದಾಗ ಅವರಿಗೆ ಈ ಉದ್ದೇಶವೇನೂ ಇರಲಿಲ್ಲ, ತಾವು ಆಳುತ್ತಿರುವ ದೇಶವನ್ನು ನಿರಾತಂಕವಾಗಿ ಸುಲಿಗೆ ಮಾಡಲು ಆ ದೇಶವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂಬ ಪಕ್ಕಾ ಬಂಡವಾಳಶಾಹಿ ಮನೋಭಾವವೇ ಅದರ ಹಿಂದಿದ್ದ ಪ್ರೇರಣೆ. ಆದ್ದರಿಂದಲೇ ಈ ದೇಶದ ಪ್ರಾಕೃತಿಕ ಸಂಪನ್ಮೂಲಗಳ ವಿವರವನ್ನು ಪಡೆಯಲು ಸರ್ವೆಯನ್ನು ಪ್ರಾರಂಭಿಸಿದಂತೆ ಸಮಾಜವನ್ನು ಅರ್ಥಮಾಡಿಕೊಳ್ಳಲು ಸೆನ್ಸಸ್ ಅನ್ನೂ ನಡೆಸುತ್ತಾ ಬಂದರು. ವಾಸ್ತವವಾಗಿ ಈ ಜನಗಣತಿಗಳ ವಿವರಗಳು ಹೊರಬಂದ ಮೇಲೆ ಬ್ರಿಟಿಷ್ ಭಾರತದ ರಾಜಕಾರಣದ ರೀತಿಯೇ ಬೇರೆ ದಿಕ್ಕು ಹಿಡಿದದ್ದು ಈಗ ಇತಿಹಾಸ.



ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇದು ಏಳನೇ ಬೃಹತ್ ಜನಗಣತಿ. ಈ ಜನಗಣತಿಯು ಇನ್ನೂ ಜನಸಮುದಾಯಗಳ ಪರವಾಗಿರಬೇಕೆಂದು ಆಗ್ರಹಿಸಿ ಅದರಲ್ಲಿ ಜಾತಿ ಕಾಲಂ ಸೇರಿಸಬೇಕೆಂಬ, ವೀರಶೈವ ಧರ್ಮವನ್ನು ಪ್ರತ್ಯೇಕ ಧರ್ಮವಾಗಿ ನೋಂದಣಿ ಮಾಡಬೇಕೆಂಬ ಹಲವು ಆಗ್ರಹಗಳು ಕೇಳಿಬರುತ್ತಿವೆ. ಆದರೆ ಜನರು ಈ ರೀತಿ ಜನಗಣತಿಯನ್ನು ಹೇಗೆ ಇನ್ನಷ್ಟು ಜನರ ಪರ ಮಾಡಬೇಕೆಂಬ ಯೋಚನೆಯಲ್ಲಿದ್ದರೆ ಸರ್ಕಾರ ಈ ಬಾರಿಯ ಜನಗಣತಿಯನ್ನು ಹೇಗೆ ಭಾರತವನ್ನು ಪ್ರಜಾಪ್ರಭುತ್ವದ ಬದಲಿಗೆ ಪೊಲೀಸ್ ಪ್ರಭುತ್ವವನ್ನಾಗಿ ಮಾಡಬಹುದೆಂಬ ಯೋಚನೆಯಲ್ಲಿದೆ. ಜನರಿಗೆ ಗೊತ್ತಿಲ್ಲದಂತೆ ಈ ಜನಗಣತಿಯನ್ನು ಜನರ ಮೇಲೆ ಬೇಹುಗಾರಿಕೆ ನಡೆಸಲು ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಲು ಬಳಸಿಕೊಳ್ಳುತ್ತಿದೆ.

ಈಗ ಪ್ರಾರಂಭವಾಗಿರುವ ಈ 15ನೇ ಜನಗಣತಿಯ ಉದ್ದೇಶ ಈ ದೇಶದ ಜನಸಂಖ್ಯೆ ಎಷ್ಟೆಂದು ತಿಳಿಯುವುದು ಮಾತ್ರವಲ್ಲ, ಭಾರತದ ಅಂದಾಜು 120 ಕೋಟಿ ಜನರ ಹೆಸರು, ಧರ್ಮ, ಲಿಂಗ ಇನ್ನಿತ್ಯಾದಿ ಮಾಮೂಲು ವಿವರಗಳನ್ನು ಕಲೆಹಾಕುವುದರ ಜೊತೆಗೆ 15 ವರ್ಷಕ್ಕೆ ಮೇಲ್ಪಟ್ಟ ಭಾರತೀಯರ ಬಯೋಮೆಟ್ರಿಕ್ ಅಂದರೆ ದೈಹಿಕ ಮತ್ತು ಜೈವಿಕ ಸಂಕೇತಗಳನ್ನು ಒಳಗೊಂಡ ನ್ಯಾಷನಲ್ ಪಾಪ್ಯುಲೇಷನ್ ರಿಜಿಸ್ಟ್ರಿಯನ್ನು - ರಾಷ್ಟ್ರೀಯ ಜನಸಂಖ್ಯಾ ರಿಜಿಸ್ಟರ್ (NPR) ಅನ್ನು - ತಯಾರಿಸುವುದೂ ಈ ಜನಗಣತಿಯ ಉದ್ದೇಶವಾಗಿದೆ. ಅಂದರೆ ಈ ಬಾರಿಯ ಜನಗಣತಿಯಲ್ಲಿ ಸಾಮಾನ್ಯ ವಿವರಗಳ ಜೊತೆಜೊತೆಗೆ ಜನರು ತಮ್ಮ ಫೋಟೋ ಹಾಗೂ ಬಯೋಮೆಟ್ರಿಕ್ ವಿವರಗಳಾದ ಹತ್ತೂ ಬೆರಳುಗಳ ಬೆರಳಚ್ಚು ಹಾಗೂ ಕಣ್ಣೊರೆಯ ಸ್ಕ್ಯಾನ್ ಪ್ರತಿ ಇವುಗಳನ್ನೆಲ್ಲಾ ಒದಗಿಸಬೇಕಾಗುತ್ತದೆ. ಇದರ ಉದ್ದೇಶವೇನು? ಸರ್ಕಾರದ ಪ್ರಕಾರ ಇದರ ಮೂಲಕ ಈ ದೇಶದ 64 ಕೋಟಿ ಪ್ರೌಢ ವಯಸ್ಕರಲ್ಲಿ ಪ್ರತಿಯೊಬ್ಬರ ಬೇರೆ ಯಾರೂ ನಕಲು ಮಾಡ ಲಾಗದಂಥ ನಿರ್ದಿಷ್ಟವಾದ ವಿವರಗಳು ದಾಖಲಾಗುತ್ತವೆ.



ಈ ವಿವರಗಳನ್ನು UIDAI- Unique Identity Card Authority of India- ಭಾರತೀಯ ಯುನೀಕ್ ಗುರುತು ಚೀಟಿ ಪ್ರಾಧಿಕಾರಕ್ಕೆ ನೀಡಲಾಗುತ್ತದೆ. NPR ನೀಡಿದ ವಿವರಗಳನ್ನು ಆಧರಿಸಿ ನಂದನ್ ನಿಲೇಕಣಿ ಸಾರಥ್ಯದಲ್ಲಿರುವ ಈ ಪ್ರಾಧಿಕಾರ ಪ್ರತಿಯೊಬ್ಬರಿಗೂ 16 ಸಂಖ್ಯೆಗಳನ್ನುಳ್ಳ ಬೇರೆ ಯಾರೂ ನಕಲು ಮಾಡಲು ಸಾಧ್ಯವಿಲ್ಲದ (ಯುನೀಕ್!) ಗುರುತು ಪತ್ರವನ್ನು ನೀಡುತ್ತದೆ. ಅದರಲ್ಲಿ ನಾವು ನಾವೇ ಹೊರತು ಬೇರೆ ಯಾರೂ ಅಲ್ಲ ಎಂದು ಗುರುತಿಸಲು ಅನುಕೂಲವಾಗುವಂತೆ ನಮ್ಮ ಬೆರಳಚ್ಚು ಫೋಟೋ ಮತ್ತು ಕಣ್ಣೊರೆಯ ಸ್ಕ್ಯಾನ್ ನಕಲು ಇರುತ್ತದೆ. ಇದರಿಂದ ಜನರಿಗೆ ಈವರೆಗೆ ಆಗುತ್ತಿರುವ ಅನ್ಯಾಯಗಳೆಲ್ಲಾ ನಿಂತುಹೋಗುತ್ತವೆ ಎಂದು ಭಾರತ ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ದೊಡ್ಡ ಧ್ವನಿಯಲ್ಲಿ ಪ್ರಚಾರ ನಡೆಸಿವೆ. ಇದರಿಂದಾಗಿ ಪಡಿತರ ಪದ್ಧತಿ ಮತ್ತು ಮಹಾತ್ಮಾ ಗಾಂಧಿ ರೋಜ್‌ಗಾರ್ ಯೋಜನಾದಂಥ ಯೋಜನೆಗಳಲ್ಲಿ ಅನರ್ಹರು ಲಾಭ ಪಡೆಯುವುದು ತಪ್ಪುತ್ತದೆ ಎಂಬುದು ಯೂನೀಕ್ ಕಾರ್ಡ್ ಯೋಜನೆಯ ಪರವಾಗಿ ಸರ್ಕಾರ ಮುಂದಿಡುತ್ತಿರುವ ಪ್ರಮುಖ ವಾದ.

ಆದರೆ ಈ ಎರಡೂ ಯೋಜನೆಗಳಲ್ಲಿ ಹೇರಾಫೇರಿ ನಡೆಯುತ್ತಿರುವುದಕ್ಕೆ ನಕಲಿ ಕಾರ್ಡುಗಳಿಗಿಂತ ಸರ್ಕಾರವು ಈ ಯೋಜನೆಗಳನ್ನು ರೂಪಿಸಿರುವ ರೀತಿ ಮತ್ತು ಅದಕ್ಕೆ ಪ್ರತಿವರ್ಷ ಧನಸಹಾಯ ಕಡಿತಗೊಳಿಸುತ್ತಿರುವುದೇ ಕಾರಣವೆಂದು ಈಗಾಗಲೇ ಹಲವು ಸರ್ಕಾರಿ ಸಮಿತಿಗಳೇ ಹೇಳಿವೆ. ಉದಾಹರಣೆಗೆ ಭಾರತದ ಗ್ರಾಮೀಣ ಪ್ರದೇಶದಲ್ಲಿ ಶೇ.70ಕ್ಕಿಂತ ಹೆಚ್ಚು ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಅರ್ಜುನ್ ಸೇನ್ ಗುಪ್ತಾ ವರದಿ ಹೇಳುತ್ತದೆ.



▶ ಶಿವಸುಂದರ್

ಅಂದರೆ ಇಡೀ ಹಳ್ಳಿಗೇ ರೇಷನ್ ಕಾರ್ಡುಗಳನ್ನು ಕೊಡಬೇಕೇ ಹೊರತು ಅವರಲ್ಲಿ ಬಡವ-ಕಡುಬಡವ ಎಂದು ಭೇದಭಾವ ಮಾಡಬಾರದು. ಆದರೆ ಎಲ್ಲಾ ಬಡವರಿಗೆ ರೇಷನ್ ಕೊಡಲಾಗದು ಎಂಬ ಕಾರಣಕ್ಕಾಗಿಯೇ ಅವರಲ್ಲಿ ಕಡುಬಡವರು ಎಂಬ ಹೊಸವರ್ಗವನ್ನೂ ಮತ್ತು ಅವರನ್ನು ಗುರುತಿಸುವ ಬಗೆಯನ್ನೂ ಹುಡುಕಲಾಗುತ್ತಿದೆ! ಹಳ್ಳಿಗಳಲ್ಲಿ ನಿಜವಾದ ಫಲಾನುಭವಿಗಳನ್ನು ಒಮ್ಮೆ ಗುರುತಿಸಿದ ನಂತರ ಅದನ್ನು ಪದೇಪದೇ ಪರೀಕ್ಷಿಸುವ ಸಂದರ್ಭವೇ ಒದಗುವುದಿಲ್ಲ, ಹೀಗಾಗಿ ಯುನೀಕ್ ಐಡೆಂಟಿಟಿ ಕಾರ್ಡು ಇಲ್ಲದಿರುವುದೇ ಗ್ರಾಮೀಣ ಬಡವರಿಗೆ ಪಡಿತರ ಅಥವಾ ರೋಜ್‌ಗಾರ್ ಕೆಲಸ ಸಿಗದೇ ಹೋಗಲು ಕಾರಣವಲ್ಲ, ಆದ್ದರಿಂದಲೇ ಯುನೀಕ್ ಕಾರ್ಡ್ ಕೊಟ್ಟರೂ ಈ ಸಮಸ್ಯೆ ಬಗೆಹರಿಯುವುದಿಲ್ಲ!

ವಾಸ್ತವವಾಗಿ ಈ ಜನಗಣತಿಯಲ್ಲಿ ನಾವು ಕಡ್ಡಾಯವಾಗಿ ಕೊಡಲೇಬೇಕಾದ ವಿವರಗಳನ್ನು ಮತ್ತು ಪ್ರತಿಯೊಬ್ಬರ ಬಯೋಮೆಟ್ರಿಕ್ ವಿವರಗಳನ್ನು ರಾಷ್ಟ್ರೀಯ ಜನಸಂಖ್ಯಾ ದಾಖಲಾತಿ(NPR)ಯಲ್ಲಿ ಸಂಗ್ರಹಿಸಿಡಲಾಗುತ್ತದೆ. ಈ NPRನಲ್ಲಿ ದಾಖಲಾದ ವಿವರಗಳನ್ನು ಕೇವಲ ಐಡೆಂಟಿಟಿ ಕಾರ್ಡ್‌ಗಾಗಿ ಮಾತ್ರವಲ್ಲದೆ ಅದನ್ನು ಸರ್ಕಾರವು ಹೊಸದಾಗಿ ರಚಿಸಿರುವ National Intelligence Grid - NATGRID- ರಾಷ್ಟ್ರೀಯ ಬೇಹುಗಾರಿಕಾ ಜಾಲಕ್ಕಾಗಿಯೂ ಕಲೆಹಾಕಲಾಗುತ್ತಿದೆ. ಈ ನ್ಯಾಟ್‌ಗ್ರಿಡ್ ಎಂಬ ಸಂಸ್ಥೆ ಗೃಹಮಂತ್ರಿಯ ನೇರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸಲಿದ್ದು ಇದರ ಕಾರ್ಯಕಲಾಪಗಳ ಬಗ್ಗೆ ಸಂಸತ್ತಿನಲ್ಲೂ ಚರ್ಚೆ ನಡೆಯುವಂತಿಲ್ಲ.

ಈ ಗ್ರಿಡ್‌ಗೆ ಕಡ್ಡಾಯವಾಗಿ ಇತರ 21 ಮೂಲಗಳಿಂದ ಈ ದೇಶದ ನಾಗರಿಕರ ಎಲ್ಲಾ ವಹಿವಾಟಿನ ಬಗೆಗೂ ಮಾಹಿತಿಗಳನ್ನು ಕಲೆಹಾಕಲಾಗುತ್ತದೆ. ರೈಲು, ವಿಮಾನಯಾನ ದಾಖಲೆಗಳು, ಬ್ಯಾಂಕ್ ಅಕೌಂಟುಗಳು, ಕ್ರೆಡಿಟ್ ಕಾರ್ಡು ವ್ಯವಹಾರಗಳು, ಪಾಸ್‌ಪೋರ್ಟ್, ವೀಸಾ ದಾಖಲೆಗಳು, PAN ಕಾರ್ಡು ಮಾಹಿತಿ, ಭೂಮಿ ಮತ್ತು ಇತರ ಆಸ್ತಿಪಾಸ್ತಿ ವ್ಯವಹಾರಗಳ ದಾಖಲೆಗಳು, ವಾಹನ ಖರೀದಿ ದಾಖಲೆಗಳು ಇನ್ನಿತ್ಯಾದಿ ನಾಗರಿಕ ಜೀವನದಲ್ಲಿ ನಡೆಯುವ ಎಲ್ಲಾ ವ್ಯವಹಾರದ ಮಾಹಿತಿಗಳನ್ನೂ ಆಯಾ ಕಚೇರಿಗಳು ಕಡ್ಡಾಯವಾಗಿ ಇನ್ನುಮುಂದೆ NATGRID ಕೊಡಲೇ ಬೇಕಾಗುತ್ತದೆ. ಅಲ್ಲದೆ ಎಲ್ಲಾ ಟೆಲಿಕಾಂ ಮತ್ತು ಇಂಟರ್‌ನೆಟ್ ಸೇವೆಗಳು ಕಡ್ಡಾಯವಾಗಿ ಈ NATGRIDಗೆ ಲಿಂಕ್‌ಅಪ್ ಆಗಲೇ ಬೇಕಾಗುತ್ತದೆ. ಇದಕ್ಕೆಂದೇ ಒಂದೆಡೆ ಯುನೀಕ್ ಕಾರ್ಡ್‌ಗಾಗಿ ತಯಾರಿ ಮಾಡಿಕೊಳ್ಳುತ್ತಿರುವಾಗಲೇ ಭಾರತದ ಸಂಸತ್ತು 2008ರ ಡಿಸೆಂಬರ್‌ನಲ್ಲಿ ಮಾಹಿತಿ ತಂತ್ರಜ್ಞಾನ ಕಾಯಿದೆ-2000ಕ್ಕೆ ಒಂದು ತಿದ್ದುಪಡಿಯನ್ನೂ ತಂದಿತು. ಈ ತಿದ್ದುಪಡಿಯ ಸೆಕ್ಷನ್ 69ರ ಪ್ರಕಾರ "ಭಾರತದ ಐಕ್ಯತೆ ಮತ್ತು ಸಮಗ್ರತೆಯ ಹಿತಾಸಕ್ತಿಯಿಂದ...ಯಾವುದೇ ಬಗೆಯ ಸಂಭವನೀಯ ಅಪರಾಧಗಳನ್ನು ತಡೆಗಟ್ಟುವ ಉದ್ದೇಶದಿಂದ ಅಥವಾ ಅಂಥ ಪ್ರಕರಣದ ತನಿಖೆಯ ಉದ್ದೇಶದಿಂದ ಯಾವುದೇ ಕೋರ್ಟಿನ ಆದೇಶವಿಲ್ಲದಿದ್ದರೂ ಯಾವುದೇ ಕಂಪ್ಯೂಟರ್ ಮೂಲಗಳ ಮೂಲಕ ನಡೆಯುತ್ತಿರುವ ಮಾಹಿತಿಯ ವಿನಿಮಯವನ್ನು ಗುಪ್ತವಾಗಿ ಪಡೆದುಕೊಳ್ಳುವ ಮತ್ತು ಅದರ ಉಸ್ತುವಾರಿ ಮಾಡುವ ಅಧಿಕಾರವನ್ನು ಸರ್ಕಾರ ಹೊಂದಿರುತ್ತದೆ."

ಹೀಗೆ ಒಬ್ಬ ನಾಗರಿಕನ ಎಲ್ಲಾ ಖಾಸಗಿ ಮತ್ತು ವ್ಯಾವಹಾರಿಕ ಮಾಹಿತಿಗಳನ್ನು ಕಲೆಹಾಕುವ ಮತ್ತು ನಾಗರಿಕರ ಜೀವನದ ಎಲ್ಲಾ ಆಯಾಮಗಳನ್ನು ಸರ್ಕಾರದ ಕಣ್ಗಾವಲಿನಲ್ಲೇ ನಡೆಯುವಂತೆ ಮಾಡುವ ಉದ್ದೇಶದಿಂದ ಈ NATGRID ಅನ್ನು ರಚಿಸಲಾಗಿದೆ. ಇವುಗಳಲ್ಲಿ ಶೇಖರಗೊಂಡ ಮಾಹಿತಿಯನ್ನು ಇಂಟೆಲಿಜೆನ್ಸ್ ಬ್ಯೂರೋ, ರಾ (ರಾಷ್ಟ್ರೀಯ ಬೇಹುಗಾರಿಕೆ ವಿಭಾಗ), ಸಿಬಿಐ, ರಾಷ್ಟ್ರೀಯ ರೆವೆನ್ಯೂ ಬೇಹುಗಾರಿಕಾ ಜಾಲ ಇನ್ನಿತ್ಯಾದಿ 11 ಸರ್ಕಾರಿ ಬೇಹುಗಾರಿಕಾ ವಿಭಾಗಗಳಿಗೆ ಕೊಡಲಾಗುವುದು, ಹೀಗಾಗಿ ಇನ್ನು ಮುಂದೆ ಭಾರತದ ನಾಗರಿಕರಿಗೆ ಖಾಸಗಿ ಜೀವನವೆಂಬುದೇ ಇರುವುದಿಲ್ಲ. ಜನರ ಪ್ರತಿಯೊಂದು ವಹಿವಾಟನ್ನೂ ಮೂರನೇ ಕಣ್ಣೊಂದು ಗಮನಿಸುತ್ತಿರುತ್ತದೆ! ಈಗ ನಡೆಯುತ್ತಿರುವ ಜನಗಣತಿ ಮತ್ತು NPR ಗಾಗಿ ಸಂಗ್ರಹಿಸುತ್ತಿರುವ ಬಯೋಮೆಟ್ರಿಕ್ ಮಾಹಿತಿಗಳು ಮತ್ತು ಅದನ್ನು ಆಧರಿಸಿ ಪ್ರತಿಯೊಬ್ಬರೂ ನಾಳೆ ಕಡ್ಡಾಯವಾಗಿ ಹೊಂದಲೇಬೇಕಿರುವ 16 ಸಂಖ್ಯೆಯ ಯುನೀಕ್ ಐಡೆಂಟಿಟಿ ಕಾರ್ಡುಗಳು ಈ ದೇಶದ ನಾಗರಿಕರನ್ನು ಕಡ್ಡಾಯವಾಗಿ ಈ ಬೇಹುಗಾರಿಕೆಗೆ ಒಳಪಡಿಸುತ್ತದೆ.

ಏಕೆಂದರೆ ಒಮ್ಮೆ ಯುನೀಕ್ ಐಡೆಂಟಿಟಿ ಕಾರ್ಡು ಹಂಚಿಕೆ ಆದನಂತರ ಸರ್ಕಾರದಿಂದ ಯಾವುದೇ ಸೌಲಭ್ಯ ಪಡೆಯಲೂ, ಬ್ಯಾಂಕ್ ಅಕೌಂಟ್ ತೆಗೆಯಲೂ ಅಥವಾ ವಾಹನ ಕೊಳ್ಳಲೂ ಈ 16 ನಂಬರಿನ ಕಾರ್ಡ್ ಕಡ್ಡಾಯ ಹಾಗೂ ಬ್ಯಾಂಕು, ವಿಮೆ ಕಚೇರಿ, ವಾಹನ ಕೇಂದ್ರ, ರೈಲು ಮತ್ತು ವಿಮಾನ ನಿಲ್ದಾಣ ಇತ್ಯಾದಿಗಳಲ್ಲಿ ಈ ನಂಬರನ್ನು ಬಳಸಿ ನಾವು ನಡೆಸುವ ಪ್ರತಿಯೊಂದು ವಹಿವಾಟು ಅಲ್ಲಿಯ ಕೇಂದ್ರೀಯ ಕಂಪ್ಯೂಟರಿನಲ್ಲಿ ಸಂಗ್ರಹವಾಗುತ್ತದೆ. ಈ ಕಂಪ್ಯೂಟರ್‌ಗಳು ನೇರವಾಗಿ ನ್ಯಾಟ್‌ಗ್ರಿಡ್‌ಗೆ ಲಿಂಕ್‌ಅಪ್ ಆಗಿರುತ್ತದೆ. ಹೀಗೆ ಒಂದು ಗುರುತು ಕಾರ್ಡನ್ನು ಕೊಡುವ ಮೂಲಕ ನಮ್ಮ ಇಡೀ ಜೀವನವನ್ನೇ ಸರ್ಕಾರದ ಬೇಹುಗಾರಿಕಾ ಕಣ್ಗಾವಲಿಗೆ ತಂದುಕೊಳ್ಳಲಾಗುತ್ತಿದೆ. ಇದಕ್ಕಾಗಿ ಜನಗಣತಿಯಂಥ ಪ್ರಕ್ರಿಯೆಯನ್ನು ಬಳಸಿಕೊಳ್ಳಲಾಗುತ್ತಿದೆ.

ವಾಸ್ತವವಾಗಿ ಭಾರತೀಯ ಜನಗಣತಿ ಪ್ರಕ್ರಿಯೆ ಭಾರತೀಯ ಸೆನ್ಸಸ್ ಆಕ್ಟ್-1948ರ ಪ್ರಕಾರ ನಡೆಯುತ್ತದೆ. ಅದರ ಸೆಕ್ಷನ್ 15 ಸ್ಪಷ್ಟಪಡಿಸುವಂತೆ ಇಲ್ಲಿ ಜನರು ಬಹಿರಂಗಪಡಿಸುವ ಮಾಹಿತಿಗಳು ಗೋಪ್ಯವಾದದ್ದು ಮತ್ತು ಯಾವ ಸಂಸ್ಥೆಗೂ ಕೊನೆಗೆ ನ್ಯಾಯಾಲಯಗಳಿಗೂ ಸಹ ಕೊಡಲಾಗುವುದಿಲ್ಲ. ಜನಗಣತಿಯನ್ನು ನಡೆಸುವುದು ಒಟ್ಟಾರೆ ದೇಶದ ಜನಸಂಖ್ಯಾ ಬೆಳವಣಿಗೆಯ ಗತಿಯನ್ನು ಗಮನಿಸಲೇ ವಿನಃ ಪ್ರತಿಯೊಬ್ಬ ಪ್ರಜೆಯ ಮೇಲೆ ನಿಗಾ

▶▶ 15

ನೋ ಕಾಮೆಂಟ್ಸ್

"ಈ ಹಿಂದೆ ದೇಶದ ಬಡಜನರ ಸಂಖ್ಯೆಯನ್ನು ಅಂದಾಜು ಮಾಡಲು ಜನರು ಎಷ್ಟು ಕ್ಯಾಲೋರಿಯಷ್ಟು ಆಹಾರ ಸೇವನೆ ಮಾಡುತ್ತಾರೆ ಎಂಬುದನ್ನು ಮಾತ್ರ ಮಾನದಂಡವನ್ನಾಗಿ ಬಳಸಲಾಗುತ್ತಿತ್ತು, ಆದರೆ ಈಗ ತೆಂಡೂಲ್ಕರ್ ಸಮಿತಿಯ ವರದಿಯು ಬಡತನದ ಅಂದಾಜು ಮಾಡಲು ಶಿಕ್ಷಣ ಮತ್ತು ಆರೋಗ್ಯದ ಮೇಲೆ ಮಾಡುವ ವೆಚ್ಚವನ್ನೂ ಮಾನದಂಡವನ್ನಾಗಿ ಸೇರಿಸಿಕೊಂಡಿದೆ. ಇದರಿಂದಾಗಿ ಹೊಸ ಅಂಕಿಅಂಶದ ಪ್ರಕಾರ ಈ ದೇಶದ ಬಡಜನರ ಪ್ರಮಾಣ ಶೇ.27.5 ಅಲ್ಲ, ಬದಲಿಗೆ ಶೇ.37.2! ಹಾಗೆಯೇ ಬಡತನ ರೇಖೆಯಿಂದ ಕೆಳಗಿರುವವರ ಸಂಖ್ಯೆ 6.5 ಕೋಟಿಯಲ್ಲ, 8.5 ಕೋಟಿ!"

- ಪತ್ರಿಕಾ ವರದಿ

"ಐಪಿಎಲ್ ಪಂದ್ಯಾವಳಿಗೆ ಭದ್ರತೆ ಒದಗಿಸಲು ಬೆಂಗಳೂರು ಪೊಲೀಸರಿಗೆ 33 ಲಕ್ಷ ರೂ. ಪಾವತಿಸಿದ್ದರೂ ಪೊಲೀಸರು ಸೂಕ್ತ ಭದ್ರತೆ ಒದಗಿಸದೇ ಇದ್ದುದರಿಂದ ಬೆಂಗಳೂರು ಪೊಲೀಸರು ಕ್ರಿಕೆಟ್ ಮಂಡಳಿಯ ಕೆಂಗಣ್ಣಿಗೆ ಗುರಿಯಾಗಿದ್ದಾರೆ."

- ಪತ್ರಿಕಾ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಐಪಿಎಲ್ ಪಂದ್ಯಾವಳಿಯ ಹಲವಾರು ಆಟಗಳಲ್ಲಿ ಮ್ಯಾಚ್‌ಫಿಕ್ಸಿಂಗ್ ಆಗಿರಬಹುದಾದ ಬಲವಾದ ಸಂಶಯಗಳು ವ್ಯಕ್ತವಾಗುತ್ತಿದೆ. ಅದರಲ್ಲೂ ಐಪಿಎಲ್ ಮುಖ್ಯಸ್ಥ ಲಲಿತ್ ಮೋದಿ ಬಹುಪಾಲು ಆಟಗಳ ಫಲಿತಾಂಶವನ್ನು ಮುಂಚಿತವಾಗಿಯೇ ಹೇಗೆ ಕರಾರುವಾಕ್ಕಾಗಿ ಊಹಿಸುತ್ತಿದ್ದರು ಎಂಬ ಬಗ್ಗೆ ಎಲ್ಲರಿಗೂ ಅನುಮಾನವಿದೆ. ಅಲ್ಲದೆ ಆಟದ ಮಧ್ಯದಲ್ಲಿ ಬಲವಂತವಾಗಿ ಹೇರಲ್ಪಟ್ಟಿರುವ ಎರಡು ಅವಧಿಯ ವಿರಾಮ ವೇಳೆಯಲ್ಲಿ ಮುಂದಿನ ಆಟವನ್ನು ಹೇಗೆ ಕೊಂಡೊಯ್ಯಬೇಕೆಂಬ ಬಗ್ಗೆ ಬುಕ್ಕಿಗಳ ಆದೇಶವನ್ನು ಆಟಗಾರರಿಗೆ ತಲುಪಿಸಲಾಗುತ್ತದೆ ಎಂದು ಭಾವಿಸಲಾಗುತ್ತಿದೆ."

- ಪತ್ರಿಕಾ ವರದಿ

"ಈ ಬಾರಿಯ ಐಪಿಎಲ್ ಪಂದ್ಯಾವಳಿ ಆಟಗಾರರಿಗೆ ತನ್ನ ದೇಶೀಯ ಕ್ರಿಕೆಟ್ಟಿಗಿಂತ ದುಪ್ಪಟ್ಟು ಹಣದ ಹೊಳೆಯನ್ನು ಹರಿಸುತ್ತಿದೆ. ಉದಾಹರಣೆಗೆ ನ್ಯೂಜಿಲೆಂಡ್ ಆಟಗಾರರಾದ ಡೇನಿಯಲ್ ವೆಟ್ಟೋರಿ, ರಾಸ್ ಟೇಲರ್, ಮ್ಯಾಕಲ್ಲಮ್‌ಗಳು ತಮ್ಮ ದೇಶದ ಪರವಾಗಿ ಆಡಿದ್ದಕ್ಕೆ ಇಡೀ ಪಂದ್ಯಕ್ಕೆ 14,650 ಡಾಲರ್‌ಗಳು ಸಂಭಾವನೆಯಾಗಿ ಪಡೆದಿದ್ದರು. ಆದರೆ ಐಪಿಎಲ್‌ನಲ್ಲಿ ಆಟಗಾರ ಹೊಡೆದ ಪ್ರತಿ ಸಿಕ್ಸರ್‌ಗೆ 25,000 ಡಾಲರ್ ಸಂಭಾವನೆ ಪಡೆಯಲಿದ್ದಾರೆ."

- ಪತ್ರಿಕಾ ವರದಿ

"ಯಡಿಯೂರಪ್ಪ ಆಧುನಿಕ ಶ್ರೀರಾಮಚಂದ್ರ ಇದ್ದ ಹಾಗೆ. ರೈತರ ಹೆಸರಲ್ಲಿ ಅಧಿಕಾರ ಸ್ವೀಕರಿಸಿ ರಾಜ್ಯವನ್ನು ಹಾಳು ಮಾಡುತ್ತಿದ್ದಾರೆ."

- ದೇವೇಗೌಡ

ಆದರೆ ಎರಡೂ ಕೇಂದ್ರಕ್ಕೂ ಶಕ್ತಿಯಿಲ್ಲ!

"ಕೆಪಿಸಿಸಿಗೆ ಎರಡು ಶಕ್ತಿ ಕೇಂದ್ರಗಳು ಬೇಡ. ಅದು ಕಾಂಗ್ರೆಸ್ ಸಂಸ್ಕೃತಿಗೆ ಒಗ್ಗಲ್ಲ, ಒಬ್ಬರಿದ್ದರೇ ಸಾಕು."

-ಮೋಟಮ್ಮ

ಹೋರಾಟ ಮಾಡಿದರೆ ಅಧಿಕಾರ ಸಿಗುತ್ತಾ ಅಂತ ನೀವು ಕೇಳ್ತೀರಿ!

"ಸಾಮಾಜಿಕ ಸಮಾನತೆ ಮತ್ತು ಸವಲತ್ತುಗಳು ಸಿಗಬೇಕೆಂದರೆ ಹೋರಾಟ ಅನಿವಾರ್ಯ. ಈಗಿನ ವ್ಯವಸ್ಥೆ ಮತ್ತು ರಾಜಕೀಯ ಪಕ್ಷಗಳು ಹೋರಾಟವನ್ನು ತುಳಿದುಹಾಕುತ್ತಿವೆ. ಹೋರಾಟ ಇದೆಯಾ ಎಂದರೆ ಊಟ ಇದೆಯಾ ಎಂದು ಕೇಳುವ ವಾತಾವರಣ ಇದೆ."

- ಕಾಗೋಡು ತಿಮ್ಮಪ್ಪ

ಶ್ರೀಮಂತ ಪುರುಷರಿಗಿಂತ ಹೆಚ್ಚು ಭ್ರಷ್ಟರಾಗಲು ಸಾಧ್ಯವೇ?

"ಮಹಿಳಾ ಮಸೂದೆ ಪಾಸಾದರೆ ಪಾರ್ಲಿಮೆಂಟಿಗೆ ಶ್ರೀಮಂತ ಮಹಿಳೆಯರೇ ಹೆಚ್ಚು ಆಯ್ಕೆ ಆಗುತ್ತಾರೆ. ಅದು ಚುನಾವಣಾ ಪ್ರಕ್ರಿಯೆಯನ್ನೇ ಭ್ರಷ್ಟಗೊಳಿಸುತ್ತದೆ ಮತ್ತು ದುಬಾರಿಗೊಳಿಸುತ್ತದೆ."


- ಮುಲಾಯಂ ಸಿಂಗ್ ಯಾದವ್

ಫ್ರಾಂಚೈಸಿಗಳ ಬಗ್ಗೆ ಇರುವಷ್ಟೇ ನಿಷ್ಠೆ ದೇಶದ ಬಗ್ಗೆಯೂ ಇದ್ದಿದ್ದರೆ!!

"ಐಪಿಎಲ್ ಆಟ ಬಹಳ ಟಫ್ ಆಟ. ನಾನು ಕೊನೆಯ ಕ್ಷಣದಲ್ಲಿ ಭಾವೋನ್ಮಾದದಿಂದ ಆಡಿದೆ. ಏಕೆಂದರೆ ನಮ್ಮ ಫ್ರಾಂಚೈಸಿಗಳು ಅಷ್ಟೊಂದು ಹಣ ಕೊಡುತ್ತಿರುವಾಗ ನಾವು ಕನಿಷ್ಠ ಸೆಮಿಫೈನಲ್‌ಗಾದರೂ ತಲುಪಲಿಲ್ಲ ಎಂದರೆ ಹೇಗೆ?"

- ಮಹೇಂದ್ರ ಸಿಂಗ್ ಧೋನಿ

'ಕುಮಾರಿ'ಯರಿಗೊಂದು ಕಿವಿಮಾತು



ಕಂಡಹಾಗೆ

ಗೌರಿ ಲಂಕೇಶ್
editorlankesh@gmail.com

"ಹಲೋ... ನಾನು ಕುಮಾರಿ ಅಂತ. ಗೌರಿ ಮೇಡಂ ಜೊತೆ ಮಾತನಾಡಬೇಕಿತ್ತು."

ಇಂತಹ ಹಲವಾರು ಕರೆಗಳು ಬರುತ್ತಲೇ ಇರುತ್ತವೆ. ದ್ದರಿಂದ ನಾನು "ಅವರು ತುಂಬಾ busy ಇದ್ದಾರೆ. ಾವುದರ ಬಗ್ಗೆ ಮಾತನಾಡಬೇಕಿತ್ತು?" ಅಂದೆ.

"ತುಂಬಾ ಪರ್ಸನಲ್ ವಿಷಯ. ನಾನು ದೊಡ್ಡ ಸಮಸ್ಯೆ ಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇನೆ. ಪ್ಲೀಸ್, ಅವರೊಂದಿಗೆ ಾತನಾಡಬೇಕು" ಎಂದಳು ಕುಮಾರಿ.

ಇಂತಹ 'ಪರ್ಸನಲ್' ಸಮಸ್ಯೆಗಳನ್ನು ಹೊತ್ತು ಬರುವ ೆಗಳಿಗೂ ಕೊರತೆ ಇಲ್ಲ. ಆಫೀಸಿನ ಸಮಸ್ಯೆ, ಗಂಡನ ಮಸ್ಯೆ, ಮಕ್ಕಳ ಸಮಸ್ಯೆ, ಪ್ರೀತಿಸಿದವರು ದ್ರೋಹ ಬಗೆದ ಮಸ್ಯೆ..... ಇಂತಹ ಸಮಸ್ಯೆಗಳನ್ನೆಲ್ಲ ಕೇಳಿಸಿಕೊಂಡು ಅವರಿಗೆ ವಾಗಲು ನಿಂತರೆ ನಾನು ಪತ್ರಿಕೆಯನ್ನು ಮುಚ್ಚಿ ಲ್‌ಟೈಮ್ 'ಸಮಸ್ಯೆ ಪರಿಹಾರಕಿ' ಆಗಬೇಕಾಗುತ್ತದೆ.

ಈ ಕುಮಾರಿ ಯಾರೂ ಏನು, ಒಂದು ಗೊತ್ತಿಲ್ಲ. ಹಿಂದೆ ಎಂದೂ ಆಕೆಯನ್ನು ಮಾತನಾಡಿಸಿಲ್ಲ, ಅವಳಿಗೆ ನ್ನ ಮೊಬೈಲ್ ನಂಬರ್ ಹೇಗೆ ಸಿಕ್ಕಿತೆಂದೂ ಗೊತ್ತಿಲ್ಲ. ತ್ತರ ಕರ್ನಾಟಕದ ಯಾವುದೋ ಜಿಲ್ಲೆಯಿಂದ ಕರೆ ಾಡಿದ್ದ ಕುಮಾರಿಯ ಸಮಸ್ಯೆಯನ್ನು ಫೋನ್ ಮೂಲಕ ಗೆಹರಿಸಲಾದೀತೆ? ಅದಕ್ಕೆ "ಏನು ವಿಷಯ ಅಂತ ೇಳಿದರೆ ಅವರನ್ನು ಕೇಳಿ ಹೇಳುತ್ತೇನೆ" ಅಂದೆ.

ಆದರೆ ಆಕೆ "ಅವರಲ್ಲದೆ ಬೇರೆ ಯಾರ ತ್ತಿರವೂ ನಾನು ಮಾತನಾಡುವುದಿಲ್ಲ, ಅವರಲ್ಲದೆ ೇರೆ ಯಾರಿಂದಲೂ ನನಗೆ ನೆರವು ಸಿಗುವುದಿಲ್ಲ" ದು ಹಠ ಹಿಡಿದಳು. ಇದೊಳ್ಳೆ ಸಮಸ್ಯೆ ಆಯಿತಲ್ಲ ನಳೊಂದಿಗೆ ಐದು ಹತ್ತು ನಿಮಿಷ ಮಾತಾಡಿ ತುಗಡೆ ಹೊಂದಬಹುದು ಎಂದು ನಿರ್ಧರಿಸಿ ಾನು ಗೌರಿ ಮಾತಾಡ್ತಿರೋದು, ಹೇಳು ಏನು ್ನ ಸಮಸ್ಯೆ?" ಅಂದೆ.

ನಾನೇ ಮಾತನಾಡುತ್ತಿರುವುದು ಎಂದು ಖಾತರಿ ಿಸಿಕೊಂಡ ಕುಮಾರಿ (ಅದು ಅವಳ ನಿಜವಾದ ಸರಲ್ಲ, ಬೇಕೆಂತಲೇ ಬದಲಾಯಿಸಿದ್ದೇನೆ). ತನ್ನ ಮಸ್ಯೆಯನ್ನು ವಿವರಿಸಿದಳು. ಅದು ಅಂತಹ ದೊಡ್ಡ ಸಮಸ್ಯೆಯಾಗಿ ಮೊದಮೊದಲು ಅನ್ನಿಸಲಿಲ್ಲ.

"ನಾನು ಒಬ್ಬರನ್ನು ಕಳೆದ ಐದು ವರ್ಷಗಳಿಂದ ್ರೀತಿಸುತ್ತಿದ್ದೇನೆ. ಅವರೂ ನನ್ನನ್ನು ಪ್ರೀತಿಸುತ್ತಿದ್ದಾರೆ. ದರೆ ಈಗ ನನ್ನ ಅಮ್ಮ ಬೇರೆಯವರೊಂದಿಗೆ ಮದುವೆ ಮಾಡುತ್ತಿದ್ದಾರೆ....."

ಜಾತಿ ಎಂಬುದು ನನಗೆ ಮುಖ್ಯ ಅಲ್ಲ. ದರೆ ಕುಮಾರಿ ಒಂದು ಸಣ್ಣ ಪಟ್ಟಣ ಳಾಗಿದ್ದರಿಂದ ಮತ್ತು ಆಕೆಯ ತಂದೆತಾಯಿಗಳಿಗೆ ು ಮುಖ್ಯವಾಗಿರುತ್ತಾದ್ದರಿಂದ "ನಿನ್ನ ಅವನ ತಿ ಯಾವುದು? ವಯಸ್ಸು, ಎಷ್ಟು ದ್ದೀಯಾ..." ಅಂತೆಲ್ಲಾ ವಿಚಾರಿಸಿದೆ.

"ನಾವಿಬ್ಬರೂ ಒಂದೇ ಜಾತಿಯವರು. ನಾನು ಿಎಡ್ ಓದಿದ್ದೇನೆ. ಆತ ರೈತ....."

"ಹಾಗಾದರೆ ಸಮಸ್ಯೆ ಏನು? ಮನೆಯವರನ್ನು ಸಲು ಸ್ವಲ್ಪ ಶ್ರಮಪಟ್ಟರೆ ಅವನೊಂದಿಗೇ ನಿನ್ನ ದುವೆ ಮಾಡಿಸಬಹುದು" ಅಂದೆ.

ಅದಕ್ಕೆ ಕುಮಾರಿ ಕೊಟ್ಟ ಉತ್ತರ: "ಆದರೆ ಅವರೀಗಾ ಮದುವೆ ಆಗಿ ಮಗಳೂ ಇದ್ದಾಳೆ...."

"ಅಲ್ಲಾ ಕುಮಾರಿ, ಆಗಲೇ ಮದುವೆ ಆಗಿರುವವರನ್ನು ಕೆ ಪ್ರೀತಿಸಿದೆ? ಅದು ನೀನು ಮಾಡಿದ ತಪ್ಪಲ್ಲವಾ?" ು ನಾನು ಸಿಟ್ಟುಗೊಂಡಾಗ ಆಕೆ ಕಣ್ಣೀರಿಡಲಾರಂಭಿ ು. ಹೀಗೆ ಮದುವೆ ಆಗಿರುವವನನ್ನು ಪ್ರೀತಿಸಿ ಲಾದ ಕುಮಾರಿ ತರಹದ ಅದೆಷ್ಟು ಹುಡುಗಿಯರನ್ನು ನೋಡಿಲ್ಲ.

ಇಂತಹ ಸಂಬಂಧಗಳೆಲ್ಲ ಒಂದು ರೀತಿಯಲ್ಲಿ ಶತಮಾನಗಳಿಂದ ಸಿದ್ಧಗೊಂಡಿರುವ ಸ್ಕ್ರಿಪ್ಟ್ ರೀತಿಯಲ್ಲೇ ನಡೆದಿರುತ್ತದೆ. ಅದಾಗಲೇ ಗೃಹಸ್ಥನಾಗಿರುವ ಪುರುಷ ಯುವತಿಯೊಬ್ಬಳಿಗೆ ಹೇಳುವ ಮಾತುಗಳೆಲ್ಲಾ ಬೇರೆ ಬೇರೆ ಪದಗಳಲ್ಲಿ ವ್ಯಕ್ತವಾಗಿದ್ದರೂ ಅವುಗಳ ಸಾರಾಂಶ ಹೀಗಿರುತ್ತದೆ: "ನನ್ನ ಹೆಂಡತಿಯೊಂದಿಗೆ ನನಗೆ ಮಾನಸಿಕ ಹೊಂದಾಣಿಕೆ ಇಲ್ಲ. ನಮಗೆ ಮಕ್ಕಳು/ಮಗ/ಮಗಳು ಇಲ್ಲದಿದ್ದರೆ ನಾನು ಎಂದೋ ಆಕೆಯನ್ನು ಬಿಟ್ಟು ಬಿಡುತ್ತಿದ್ದೆ. ಮಕ್ಕಳಿಗೆ ತಾಯಿ ಇರಬೇಕಲ್ಲಾ ಅದಕ್ಕೆ ನಾನು ಅವಳನ್ನು, ಅವಳ ಕಾಟವನ್ನು ಸಹಿಸಿಕೊಂಡು ಅದು ಹೇಗೋ ಜೀವನ ಸಾಗಿಸುತ್ತಿದ್ದೇನೆ."

ಇದನ್ನು ಯುವತಿ ನಂಬಿ ಆತನ ಬಗ್ಗೆ ಅನುಕಂಪ ಮತ್ತು ಕಾಳಜಿ ತೋರಿದಳೆಂದರೆ, ಅವರ ಸಂಬಂಧದ ಎರಡನೆ ಅಧ್ಯಾಯ ಆರಂಭವಾಗುತ್ತದೆ. ಆಗ ಆತ ಹೇಳುವ ಮಾತು: "ನಿನ್ನೊಂದಿಗೆ ನನಗೆಷ್ಟು ನೆಮ್ಮದಿ ಸಿಗುತ್ತೆ ಗೊತ್ತಾ? ನೀನು ನನ್ನ ಆತ್ಮದ ಸಂಗಾತಿ. ನಾನು ಅದ್ಯಾವ ಜನ್ಮದಲ್ಲಿ ಅದೇನು ಪಾಪ ಮಾಡಿದ್ದೆನೋ ನೀನು ನನ್ನ ಜೀವನದಲ್ಲಿ ಪ್ರವೇಶ ಮಾಡುವ ಮುನ್ನವೇ ನಾನು ಅವಳನ್ನು ಮದುವೆ ಆಗಿದ್ದೆ. ಆದರೆ ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ನೀನು ನನ್ನವಳಾಗು. ನಿನಗಾಗಿ ನಾನು ಎಲ್ಲವನ್ನೂ, ಎಲ್ಲರನ್ನೂ ತ್ಯಜಿಸಿ ಬರುತ್ತೇನೆ."

ವಿಪರ್ಯಾಸ ಯಾವುದೆಂದರೆ ಆತನಿಗೆ ತನ್ನ ಹೆಂಡತಿ,



ಮಕ್ಕಳನ್ನು ಬಿಟ್ಟು ಬರುವ ಯೋಚನೆ ಇಲ್ಲದಿದ್ದರೂ ಆತನ ಇಂತಹ ಮಾತುಗಳನ್ನು ಯುವತಿ ನಂಬುತ್ತಾಳೆ. ಅದಕ್ಕೆ ಕಾರಣಗಳೂ ಇರುತ್ತವೆ. ಯೌವನದ ಹೊಸ್ತಿಲಲ್ಲಿ ನಿಂತಿರುವ ಯುವತಿಯಲ್ಲಿ ಹಲವಾರು ಕಾತರಗಳು ಇರುತ್ತವೆ. ಅವುಗಳನ್ನು ತನ್ನ ಹೆತ್ತವರೊಂದಿಗೆ, ಒಡಹುಟ್ಟಿದವರೊಂದಿಗೆ ಹಂಚಿಕೊಳ್ಳಲು ಅವಳಿಂದಾಗುವುದಿಲ್ಲ. ಆ ಕಾತರಗಳು ಅವಳಲ್ಲಿ ಚಿಗುರೊಡೆದಿರುವಾಗಲೇ, ಪುರುಷನೊಬ್ಬ ಅವಳಲ್ಲಿ ಆಸೆಗಳನ್ನು ಹುಟ್ಟಿಸುತ್ತಾನೆ. ತಾನು ಮತ್ತೋರ್ವ ಮಹಿಳೆಗಿಂತ ಹೆಚ್ಚು ಎಂಬ ಭ್ರಮೆ ಮೂಡಿಸುತ್ತಾನೆ. ಆತನಿಗೆ ಬೇರೆಯವರಲ್ಲಿ ಸಿಗದದ್ದು, ತನ್ನಿಂದ ಮಾತ್ರ ಸಿಗುತ್ತದೆ ಎಂದಾದರೆ ತಾನು ವಿಶಿಷ್ಟ ವ್ಯಕ್ತಿ ಎನಿಸುತ್ತದೆ ಯುವತಿಗೆ. ಹಾಗಾದಾಗ ಆಕೆ ತನ್ನ ಎಲ್ಲ ವಾಸ್ತವ ಪ್ರಜ್ಞೆಯನ್ನು ತೊರೆದು ಆತ ತೋಡಿದ ಹೊಂಡಕ್ಕೆ ಬಿದ್ದಳು ಎಂದೇ ಅರ್ಥ.

ಕುಮಾರಿ ವಿಷಯದಲ್ಲಿ ಆಗಿದ್ದು ಅದೇ.

ಚಿಕ್ಕ ಪುಟ್ಟ ಊರುಗಳಲ್ಲಿ ಈಗಲೂ ಲವ್-ಗಿವ್ ಅಂದರೆ ಅದೆಲ್ಲ ಮಾತು, ಪತ್ರ, ಕದ್ದುಮುಚ್ಚಿ ಕೈ ತಾಗಿಸಿದ್ದು ಮಟ್ಟದಲ್ಲೇ ಇರುತ್ತದೆ, ಆದ್ದರಿಂದ ಕುಮಾರಿಯ 'ಲವ್' ಕೂಡ ಅಂತಹದ್ದೇ ಆಗಿರುತ್ತದೆಂದು ಭಾವಿಸಿದ ನಾನು "ನೋಡು, ಬದುಕಿನಲ್ಲಿ ಇಂತಹದ್ದೆಲ್ಲ ನಡೆಯುತ್ತೆ. ಅವನಿಗೆ ಈಗಾಗಲೇ ಹೆಂಡತಿ, ಮಗು ಇರುವುದರಿಂದ ನೀನು ಅವನನ್ನು ಮರೆತುಬಿಡು. ಅದೊಂದು ಕೆಟ್ಟ ಕನಸು ಎಂದು ತಿಳಿದುಕೊ. ನಿನ್ನ ಅಮ್ಮ ನೋಡಿರುವ ಹುಡುಗನೊಂದಿಗೆ ಮದುವೆ ಮಾಡಿಕೊಂಡು ಹೊಸ ಬದುಕನ್ನು ಕಂಡುಕೊ" ಅಂದೆ.

ಆದರೆ ಕುಮಾರಿ ನನಗೆ ಮತ್ತೊಂದು ಶಾಕ್ ನೀಡಿದಳು.

"ನಾನು ಈಗ ನಾಲ್ಕು ತಿಂಗಳು ಪ್ರೆಗ್ನೆಂಟ್."

ಆಕೆಗೆ ಏನು ಹೇಳುವುದೆಂದು ಗೊತ್ತಾಗದೆ ಸುಮ್ಮನಾದೆ. ಆಕೆ ತನ್ನ ಮಾತನ್ನು ಮುಂದುವರೆಸಿದಳು.

"ನಾನು ನಿನ್ನೆ ಅವರ ಮನೆಗೇ ಹೋಗಿದ್ದೆ. ನಾನು ಈಗ ಪ್ರೆಗ್ನೆಂಟ್ ಆಗಿದ್ದೇನೆ. ನನ್ನನ್ನು ಮದುವೆ ಆಗು ಅಂದೆ. ಆದರೆ ಅವರು ಯಾವುದೇ ಕಾರಣಕ್ಕೂ ತನ್ನ ಹೆಂಡತಿಯನ್ನು ಬಿಟ್ಟು ಬರುವುದಿಲ್ಲ ಅಂದರು. ಅವರ ಹೆಂಡತಿ ಕೂಡ ಕೆಟ್ಟದಾಗಿ ನನ್ನನ್ನು ಬೈದಳು. ನಾನು ಮನೆಗೆ ಬಂದನಂತರ ಅವರು ನನಗೆ ಫೋನ್ ಮಾಡಿ ನಾನು ಯಾವುದೇ ಕಾರಣಕ್ಕೂ ಬೇರೆಯವರನ್ನು ಮದುವೆ ಆಗಕೂಡದು, ನಾನು ಅವರವಳೇ ಆಗಿರಬೇಕು ಎಂದು ಬೇಡಿಕೊಂಡರು... ಅವರೂ ನನ್ನನ್ನು ನಿಜವಾಗಲೂ ಪ್ರೀತಿಸುತ್ತಾರೆ, ಆದರೆ ಅದನ್ನು ಬಹಿರಂಗವಾಗಿ ಹೇಳಿಕೊಳ್ಳಲಾಗದ ಪರಿಸ್ಥಿತಿಯಲ್ಲಿ ಅವರು ಸಿಕ್ಕಿ ಹಾಕಿಕೊಂಡಿದ್ದಾರೆ...."

ನನಗೆ ಕೋಪ ಬರಲಾರಂಭಿಸಿತು. ಆತನಿಂದ ಹೀಗೆ ಅವಮಾನ ಎದುರಿಸಿದ್ದರೂ, ಮೋಸ ಹೋಗಿದ್ದರೂ, ಗರ್ಭವತಿಯಾಗಿ ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿದ್ದರೂ ಈಗಲೂ ಈಕೆ ಅವನನ್ನು ಸಮರ್ಥಿಸಿಕೊಳ್ಳುತ್ತಿದ್ದಾಳಲ್ಲ ಎನಿಸಿತು.

"ನೋಡು ಕುಮಾರಿ, ನಿನಗೆ ಈಗ ಇರುವುದು ಎರಡೇ ಆಯ್ಕೆಗಳು. ಒಂದು: ನಿನ್ನ ಮತ್ತು ನಿನ್ನ ಸಂಸಾರದವರ ಮಾನ ಬೀದಿಗೆ ಬಾರದಂತೆ ಎಚ್ಚರ ವಹಿಸುವುದು; ನಿನ್ನ ಆಪ್ತ ಸ್ನೇಹಿತರ ನೆರವು ಪಡೆದು ನಿನ್ನ ಪ್ರಾಣಕ್ಕೆ ಮತ್ತು ಆರೋಗ್ಯಕ್ಕೆ ಹಾನಿಯಾಗದಂತೆ ಗರ್ಭಪಾತ ಮಾಡಿಸಿಕೊಳ್ಳುವುದು ಮತ್ತು ಇದೆಲ್ಲವೂ ಒಂದು ಕೆಟ್ಟ ಘಟನೆ ಎಂದು ಮರೆತು ಹೊಸ ಬದುಕನ್ನು ಕಟ್ಟಿಕೊಳ್ಳಲು ಆತ್ಮಸ್ಥೈರ್ಯವನ್ನು ಪಡೆದುಕೊಳ್ಳುವುದು...."

ನನ್ನ ಮಾತನ್ನು ಅರ್ಧಕ್ಕೆ ತಡೆದ ಕುಮಾರಿ "ಅದೊಂದನ್ನು ಬಿಟ್ಟು ಬೇರೆ ಹೇಳಿ. ನಾನು ಈ ಮಗುವನ್ನು ಬಿಡಲಾರೆ, ಗರ್ಭಪಾತ ಮಾಡಿಸಿಕೊಳ್ಳಲಾರೆ" ಅಂದಳು.

"ನಾನು ಹೇಳುವುದನ್ನು ಪೂರ್ತಿ ಕೇಳಿಸಿಕೊ. ಮೊದಲು ಒಂದನ್ನು ಅರ್ಥ ಮಾಡಿಕೊ. ತನ್ನ ಹೆಂಡತಿಯ ಮುಂದೆ ಒಂದು ಮಾತು, ನಿನ್ನ ಮುಂದೆ ಇನ್ನೊಂದು ಮಾತು ಹೇಳುವ ಮನುಷ್ಯ ನಿನ್ನ ನಂಬಿಕೆಗೆ ಅರ್ಹನಲ್ಲ. ನೀನು ಆತನನ್ನು ಪ್ರೀತಿಸುತ್ತಿರುವುದು ನಿಜವಾದರೂ ಆತ ನಿನ್ನನ್ನು ಪ್ರೀತಿಸುತ್ತಿಲ್ಲ. ಬದಲಾಗಿ ನಿನ್ನ ಮುಗ್ಧತೆಯನ್ನು ಉಪಯೋಗಿಸಿಕೊಂಡು ನಿನ್ನ ಜೀವನವನ್ನು ಹಾಳು ಮಾಡಿದ್ದಾನೆ. ಆತನನ್ನೇ ಮದುವೆ ಆಗಬೇಕೆಂದು ನೀನು ಎಷ್ಟೇ ಹೋರಾಟ ಮಾಡಿ ಆಕಸ್ಮಾತ್ ಯಶಸ್ವಿಯಾದರೂ ಆತ ಖಂಡಿತವಾಗಿಯೂ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವುದಿಲ್ಲ. ಅವನಿಗೆ ನೀನು ಬೇಡ ಕುಮಾರಿ, ನಿನ್ನ ದೇಹ ಮಾತ್ರ ಅವನಿಗೆ ಬೇಕಿತ್ತು. ಅದನ್ನು ಆತ ಆಗಲೇ ಪಡೆದದ್ದು ಆಗಿದೆ. ಇದನ್ನೆಲ್ಲ ಅರ್ಥಮಾಡಿಕೊ. ಅವನನ್ನು ಮರೆತು ಬಿಡು" ಅಂದೆ.

ಆಕೆ ಮತ್ತೆ "ಅದೊಂದನ್ನು ಬಿಟ್ಟು ಬೇರೆ ಹೇಳಿ. ನಾನು ಅವನನ್ನು ಮರೆಯಲಾರೆ. ಅವನೊಂದಿಗೆ ಇಷ್ಟು ದಿನವಿದ್ದು ಈಗ ಬೇರೆಯವರೊಂದಿಗೆ ಹೇಗಿರಲಿ?" ಎಂದಳು.

"ನೀನು ಹೇಗೆ ಮಾತಾಡುತ್ತಿದ್ದೀಯಾ ಗೊತ್ತಾ? ಏನೇ ಆಗಲಿ ನೀನು ಅವನನ್ನು ಮದುವೆ ಆಗಬೇಕೆಂದೂ, ಅವನ ಮಗುವನ್ನು ಹಡೆಯಬೇಕೆಂದೂ ಆಗಲೇ ನಿರ್ಧರಿಸಿ ಅದಕ್ಕೆ ನನ್ನ ಒಪ್ಪಿಗೆಯನ್ನು ಪಡೆಯಲು ನೋಡುತ್ತಿದ್ದೀಯಾ ಅನ್ನಿಸುತ್ತಿದೆ. ಇರಲಿ, ನಿನ್ನ ಮುಂದಿರುವ ಎರಡನೆ ಆಯ್ಕೆ ಯಾವುದು ಗೊತ್ತಾ?"

"ಏನು?"


"ನಿನಗೆ ಈ ಮಗು ಅಷ್ಟು ಮುಖ್ಯವಾಗಿದೆ ಎಂದಾದರೆ ಅದಕ್ಕೆ ಜನ್ಮ ನೀಡು, ಪ್ರೀತಿಯಿಂದ ಅದನ್ನು ಸಾಕು. ಹೇಗಿದ್ದರೂ ನೀನು ಬಿಎಡ್ ಮಾಡಿದ್ದಿ. ನಿನ್ನ ಹೆತ್ತವರು, ಒಡಹುಟ್ಟಿದವರು, ನೆಂಟರು, ನಿನ್ನ ಜಾತಿ, ಸಮಾಜ, ಎಲ್ಲವನ್ನೂ ತೊರೆದು, ಎಲ್ಲೋ ಒಂದು ಕೆಲಸ ಪಡೆದು ನಿನ್ನ ಕಾಲಿನ ಮೇಲೆ ನಿಂತುಕೋ. ನಿನ್ನ ಮತ್ತು ನೀನು ಹೆರಲಿರುವ ಮಗುವಿನ ಬದುಕನ್ನು ಕಟ್ಟಿಕೊಳ್ಳುವುದು ನಿನ್ನ ಎರಡನೆ ಆಯ್ಕೆ. ಇದಕ್ಕೆ ಬಹಳ ಧೈರ್ಯ ಬೇಕು. ಅಷ್ಟು ಧೈರ್ಯ ಮತ್ತು ದಿಟ್ಟತನ ನಿನ್ನಲ್ಲಿದೆಯಾ?"

ಕುಮಾರಿ ಯೋಚಿಸಲಾರಂಭಿಸಿದಳು....

ಕುಮಾರಿಯಂತೆ ಬದುಕಿನ ಹೊಸ್ತಿನಲ್ಲಿರುವ ಬಹಳಷ್ಟು ಯುವತಿಯರಿಗೆ ಅವರ ಆಳದಲ್ಲಿರುವ ಭಾವನೆಗಳೇ ಬವಣೆಗಳಾಗುವುದು ಹೀಗೆ. ಬದುಕೆಂಬುದು ಎಷ್ಟು ಸಂಕೀರ್ಣವೋ ಅಷ್ಟೇ ಸರಳ ಕೂಡ, ಎಷ್ಟು ದೊಡ್ಡ ಸವಾಲೋ ಅಷ್ಟೇ ಸೂಕ್ಷ್ಮ ಕೂಡ. ಇಲ್ಲಿ ಪ್ರತಿಯೊಂದು ಹೆಜ್ಜೆ, ನುಡಿ, ಕೃತಿ, ನಿರ್ಧಾರ, ಕ್ಷಣ ಎಲ್ಲವೂ ಮುಖ್ಯ. ಕುಮಾರಿ ತರಹದ ಯುವತಿಯರು ತಮ್ಮ ಸುತ್ತಲಿನ ಸಮಾಜ ಮತ್ತು ತಮ್ಮ ಅನುಭವಗಳಿಂದ ಪಾಠ ಕಲಿತು ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕೇ ಹೊರತು ತಮ್ಮ ಭಾವನೆಗಳನ್ನೇ ತಮ್ಮ ಬದುಕನ್ನಾಗಿಸಿಕೊಂಡು ತತ್ತರಿಸಬಾರದು.....

ಬೆಂಗಳೂರು ಬಾಂಬ್ ಭಾನ್ಗಡಿ: ಮುಜಾಹಿದ್ದೀನ್ ಮಸಲತ್ತಾ?

ಬೆಂಗಳೂರಲ್ಲಾದ ಎರಡು ಬಾಂಬ್ ಸ್ಫೋಟ ಮತ್ತು ಮರುದಿನ ಸಿಕ್ಕಿದ ಇನ್ನೆರಡು ಸಜೀವ ಬಾಂಬ್‌ಗಳು ಲಷ್ಕರ್-ಇ-ತೋಯ್ಬಾ ಎಂಬ ಮುಸ್ಲಿಮ್ ಮೂಲಭೂತವಾದಿ ಭಯೋತ್ಪಾದಕ ಸಂಘಟನೆಯ ಅಂಗ ಸಂಸ್ಥೆಯಾದ ಇಂಡಿಯನ್ ಮುಜಾಹಿದ್ದೀನ್ ಮರುಹುಟ್ಟು ಪಡೆದಿದೆಯಾ ಎಂಬ ಅನುಮಾನ ಆತಂಕ ಮೂಡಿಸಿದೆ! ಭಟ್ಕಳದ ನವಾಯತ ಮುಸ್ಲಿಮ್ ಕಮ್ಯುನಿಟಿಯ ಸುಮಾರು ಎರಡು ಡಜನ್ ಹುಡುಗರು ಇಂಡಿಯನ್ ಮುಜಾಹಿದ್ದೀನ್‌ನಲ್ಲಿದ್ದಾರೆ. ಇವರೆಲ್ಲರನ್ನು ಉಗ್ರರಾಗಿ ತಯಾರಿಸಿದ್ದು ರಿಯಾಜ್ ಮತ್ತು ಯಾಸೀನ್ ಭಟ್ಕಳ ಎಂಬ ಮುಜಾಹಿದ್ದೀನ್ ಕಮಾಂಡರ್-ಲೆಫ್ಟಿನೆಂಟ್! ಭಟ್ಕಳದ ರಿಯಾಜ್ ಮನೆಯಲ್ಲೇ ಸ್ಫೋಟಕ ತಯಾರಿಸಲಾಗಿದೆ!


ಅಹಮ್ಮದ್‌ನ ಮನೆ

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಹೊರಗೆ ಅವಳಿ ಬಾಂಬ್ "ಠುಸ್...ಠುಸ್..." ಎಂದ ಕ್ಷಣದಿಂದ ಇಂಡಿಯನ್ ಮುಜಾಹಿದ್ದೀನ್‌ನ ಜಿಹಾದಿಗಳ ಮತ್ತು ಯಡ್ಡಿ ಸರ್ಕಾರದ ಹೇತ್ಲಾಂಡಿ ಹಿಂದೂವಾದಿಗಳ "ಪೌರುಷ" ಒಟ್ಟೊಟ್ಟಿಗೆ ದೇಶದಾದ್ಯಂತ ಚರ್ಚೆಗೀಡಾಗುತ್ತಲೇ ಇದೆ. ಬಾಂಬ್ ಬ್ಲಾಸ್ಟ್‌ನ ವಿಧಿ-ವಿಧಾನ ಗಮನಿಸಿದರೆ ಇದೊಂದು ಮುಜಾಹಿದ್ದೀನ್ ಪಾತಕಿಗಳ ಮಾನವ ಮಾರಣಹೋಮದ ಸಂಚೆಂಬ ಶಂಕೆ ಎಂಥವರಿಗೂ ಕಾಡುತ್ತದೆ. ಆದರೆ ಯಡ್ಡಿಯ ನಾಲಾಯಕ್ ಗೃಹಮಂತ್ರಿ, ಹೊಣೆಗೇಡಿ ಪೊಲೀಸ್ ಅಧಿಕಾರಿಗಳು ತಮ್ಮ ಅಸಾಮರ್ಥ್ಯ- ಅಯೋಗ್ಯತೆ ಮರೆಮಾಚಲು, ಇದು ಭಯೋತ್ಪಾದಕರ ಕೆಲಸವಲ್ಲ.... ಕ್ರಿಕೆಟ್ ಬೆಟ್ಟಿಂಗ್ ಮಾಫಿಯಾದ ಕಿರಿಕ್ ಎಂದು ಗೋಗರೆಯುತ್ತಿದ್ದಾರೆ, ಪಾಪ!

ಒಂದಂತೂ ಖರೆ; ಶನಿವಾರ ಬೆಂಗಳೂರಲ್ಲಾದ ಎರಡು ಬಾಂಬ್ ಸ್ಫೋಟ ಮತ್ತು ಮರುದಿನ ಸಿಕ್ಕಿದ ಇನ್ನೆರಡು ಸಜೀವ ಬಾಂಬ್‌ಗಳು ಲಷ್ಕರ್-ಇ-ತೋಯ್ಬಾ ಎಂಬ ಮುಸ್ಲಿಮ್ ಮೂಲಭೂತವಾದಿ ಭಯೋತ್ಪಾದಕ ಸಂಘಟನೆಯ ಅಂಗ ಸಂಸ್ಥೆಯಾದ ಇಂಡಿಯನ್ ಮುಜಾಹಿದ್ದೀನ್ ಮರುಹುಟ್ಟು ಪಡೆದಿದೆಯಾ ಎಂಬ ಅನುಮಾನ ಆತಂಕ ಮೂಡಿಸಿದೆ! ಮುಜಾಹಿದ್ದೀನ್‌ಗಳು 2005 ಮತ್ತು 2008ರಲ್ಲಿ ದೇಶದ ಪ್ರಮುಖ ಹತ್ತು ನಗರ ಮತ್ತು ಮಹಾನಗರದಲ್ಲಿ ಸರಣಿ ಬಾಂಬ್ ಸಿಡಿಸಿ ರಕ್ತದ ಕೋಡಿಯೇ ಹರಿಸಿದ್ದರು.

ಈ ನೆತ್ತರೋಕುಳಿ ಬಳಿಕ ಕೊಂಚ ತಣ್ಣಗಾದಂತಿದ್ದ ಜಿಹಾದಿಗಳು ಮತ್ತೆ ಎದ್ದು ನಿಂತಿದ್ದು ಫೆಬ್ರವರಿಯಲ್ಲಿ, ಪೂನಾದ ಜರ್ಮನ್ ಬೇಕರಿಯಲ್ಲಿ ಬಾಂಬ್ ಉಡಾಯಿಸಿ ದೊಡ್ಡ ಹತ್ಯಾಕಾಂಡವನ್ನೇ ಮುಜಾಹಿದ್ದೀನ್ ಗ್ಯಾಂಗ್ ಮಾಡಿತ್ತು! ಈಗಾಗಿರುವ ಬೆಂಗಳೂರು ಬಾಂಬ್ ಭಾನ್ಗಡಿಯೂ ಮುಜಾಹಿದ್ದೀನ್ 'ಉಗ್ರಾಗ್ರೇಸ' ರಿಯಾಜ್ ಭಟ್ಕಳ ಮತ್ತವನ ಲೆಫ್ಟಿನೆಂಟ್ ಯಾಸೀನ್ ಭಟ್ಕಳ್ ಯಾನೆ ಅಹಮ್ಮದ್ ಸಿದ್ದಿಬಾಪಾನ ಸುತ್ತಲೇ ಗಿರಕಿ ಹೊಡೆಯುತ್ತಿದೆ....

ಇಂಡಿಯನ್ ಮುಜಾಹಿದ್ದೀನ್!

ಇತ್ತೀಚಿನ ದಿನಗಳಲ್ಲಿ ದೇಶದ ಯಾವ ಮೂಲೆಯಲ್ಲಿ ಬಾಂಬ್ ಬಿದ್ದರೂ ಮೊದಲು ಸಂಶಯಿಸಲ್ಪಡುವ ಹೆಸರೇ ರಿಯಾಜ್ ಭಟ್ಕಳ್ ಯಾನೆ ರಿಯಾಜ್ ಇಸ್ಮಾಯಿಲ್ ಶಾಬಂದ್ರಿಯದು. ಇಂಡಿಯನ್ ಮುಜಾಹಿದ್ದೀನ್ ಉಗ್ರಗಾಮಿ ಸಂಘಟನೆಯ ಸ್ಥಾಪಕ ತ್ರಿಮೂರ್ತಿಯಲ್ಲಿ ರಿಯಾಜ್ ಪ್ರಮುಖ ಷಡ್ಯಂತ್ರಗಾರ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಮೂಲದ ರಿಯಾಜ್ ಹುಟ್ಟಿ ಬೆಳೆದದ್ದು ಮುಂಬೈನಲ್ಲಿ. ಹಾಗಂತ ತಾಯ್ನಾಡಿನ ಸಂಪರ್ಕವೇನೂ ಕಡಿದುಹೋಗಿರಲಿಲ್ಲ. ಮುಂಬೈನಲ್ಲಿ ರಿಯಾಜ್‌ಗೆ ಸಿಮಿ, ಲಷ್ಕರ್-ಇ-ತೋಯ್ಬಾ ಐಎಸ್‌ಐ ನಂಥ ಘನಘೋರ ಭಯೋತ್ಪಾದಕ ಗ್ಯಾಂಗುಗಳೊಂದಿಗೆ ನಿಕಟಸಂಪರ್ಕವಿತ್ತು. ಈ ಕಟ್ಟರ್ ಮೂಲಭೂತವಾದಿ ಮುಸ್ಲಿಮ್ ಸಂಘಟನೆಗಳ ನಂಟಿನಲ್ಲಿ ರಿಯಾಜ್ ನಟೋರಿಯಸ್ ಜಿಹಾದಿಯಾಗಿ ತಯಾರಾಗಿ ಹೋಗಿದ್ದ!

ರಿಯಾಜ್ ಸುಮಾರು 2000 ದಶಕದ ಆರಂಭದಲ್ಲಿ ಅಬ್ದುಲ್ ಸುಭಾನ್ ಖುರೇಶಿ ಮತ್ತು ಸಿದ್ದಿಕ್ ಇಸಾಕ್ ಶೇಖ್ ಎಂಬ ಮತಾಂಧರ ಜತೆ ಸೇರಿ 'ಇಂಡಿಯನ್ ಮುಜಾಹಿದ್ದೀನ್' ಎಂಬ ಉಗ್ರಗಾಮಿ ಪಡೆ ಕಟ್ಟುತ್ತಾನೆ. ಇದಕ್ಕೆ ಇಂಜಿನಿಯರ್ ಪದವೀಧರನಾದ ರಿಯಾಜನೇ ಕಮಾಂಡರ್ ಎಂದು ಲಷ್ಕರ್-ಇ-ತೋಯ್ಬಾ ಘೋಷಿಸುತ್ತದೆ. ಈತನ ಅಣ್ಣ ಯುನಾನಿ ವೈದ್ಯ ಇಕ್ಬಾಲ್ ಶಾಬಂದ್ರಿಯೂ ಜಿಹಾದಿಸ್ಟೇ. ಇವರೆಲ್ಲ ಸೇರಿ ಬಾಂಬ್ ತಯಾರಿಕೆ, ಬಾಂಬ್ ಸ್ಫೋಟದ ಸ್ಕೆಚ್ ಹಾಕುತ್ತಿದ್ದರು. 20-22 ವರ್ಷದಿಂದ ಕರಾಚಿ, ದುಬೈ, ಮುಂಬೈ, ಮಂಗಳೂರು, ಭಟ್ಕಳ ಎಂದೆಲ್ಲ ಅಂಡಲೆಯುತ್ತಿದ್ದ ರಿಯಾಜ್‌ನ ಭೂಗತ ಮತಾಂಧತೆಯ ಜಾಡು ಮುಂಬೈ-ಮಾಲೆಗಾಂವ್ ಸ್ಫೋಟದವರೆಗೂ ಪೊಲೀಸರಿಗೆ ಸಿಕ್ಕಿರಲೇ ಇಲ್ಲ!


ರಿಯಾಜ್ ಜಾತಕ


2008ರಲ್ಲಿ ಬೆಂಗಳೂರು-ದಿಲ್ಲಿ-ಅಹಮದಾಬಾದ್‌ನಲ್ಲಾದ 'ಆಪರೇಷನ್ ಬ್ಯಾಡ್ ಬಾಂಬ್' ಸರಣಿ ಸ್ಫೋಟದ ನಂತರ ರಿಯಾಜ್ ಮತ್ತವನ ಲೆಫ್ಟಿನೆಂಟ್ ಯಾಸೀನ್ ಭಟ್ಕಳ ಏಕ್‌ದಮ್ ಕುಖ್ಯಾತರಾಗಿ ಹೋದರು! ಈ ಯಾಸೀನ್ ಕೂಡ ಭಟ್ಕಳದವನೇ. ರಿಯಾಜ್ 7ನೇ ತರಗತಿ ತನಕ ಭಟ್ಕಳದ ಸಾನಿಹಾಲ್ ಸೆಂಟ್ರಲ್ ಸ್ಕೂಲ್‌ನಲ್ಲಿ ಕಲಿತಿದ್ದ. ಈತನ ತಂದೆ ಇಸ್ಮಾಯಿಲ್ ಶಾಬಂದ್ರಿ 1970ರ ಹೊತ್ತಿನಲ್ಲೇ ಮುಂಬೈ ಸೇರಿ ಅಲ್ಲೊಂದು ಚರ್ಮ ಹದಗೊಳಿಸುವ ಫ್ಯಾಕ್ಟರಿ ತೆರೆದಿದ್ದರು. ಇಬ್ಬರು ಗಂಡುಮಕ್ಕಳಲ್ಲಿ ಹಿರಿಯನಾದ ಇಕ್ಬಾಲನನ್ನು ಡಾಕ್ಟರ್ ಮಾಡಿದರೆ, ಎರಡನೆಯವನಾದ ರಿಯಾಜ್‌ಗೆ ಇಂಜಿನಿಯರಿಂಗ್ ಓದಿಸಿದ್ದರು. ಮುಂಬೈನ ಸಬೂ ಸಿದ್ದಿಕಿ ಇಂಜಿನಿಯರಿಂಗ್ ಕಾಲೇಜಿನ ಪದವೀಧರ ರಿಯಾಜ್.

ಭಟ್ಕಳದ 'ದುಬೈ ಬಜಾರ್'ನ ಎಲೆಕ್ಟ್ರಾನಿಕ್ಸ್ ವ್ಯಾಪಾರಿಯೊಬ್ಬರ ಮಗಳಾದ ನಸುಹಾಳನ್ನು ರಿಯಾಜ್ 2002ರಲ್ಲಿ ಮದುವೆಯಾಗುತ್ತಾನೆ. ಮದುವೆಗೂ ಮೊದಲು ರಿಯಾಜ್ ಸಿಮಿ ಲೀಡರ್. ಈ ಸಿಮಿ ಲಿಂಕು ರಿಯಾಜ್‌ಗೆ ಬೆಳೆದಿದ್ದೇ ನಸುಹಾಳ ಅಣ್ಣ ಶಫಿ ಅಹ್ಮದ್‌ನಿಂದ! ಇಂಜಿನಿಯರಿಂಗ್ ಓದುವಾಗ ಲೈಬ್ರರಿ ಪಕ್ಕವೇ ಸಿಮಿ-ಲಷ್ಕರ್ ಕ್ಯಾಂಪ್‌ಗಳಿದ್ದವು. ಅಲ್ಲಿ ಆಗಾಗ ಬಂದುಹೋಗುತ್ತಿದ್ದ ರಿಯಾಜ್ ಪಕ್ಕಾ ಟೆರರಿಸ್ಟ್ ಆಗಿದ್ದೇ ಗುಜರಾತ್‌ನ ಮೋದಿ ಪ್ರಣೀತ ಗಲಭೆ, ನರಹತ್ಯೆಗಳ ನಂತರ. ಇದೇ ಆತನಿಗೆ ಅಡ್ಡದಾರಿ ಹಿಡಿಯಲು ಪ್ರೇರಣೆಯಾಯ್ತು.

ಸುಮಾರು 35 ವರ್ಷ ವಯಸ್ಸಿನ ರಿಯಾಜ್ ಬಾಂಬ್ ತಯಾರಿಕೆ ಮತ್ತು ಆಯ್ದ ಸ್ಥಳಗಳಲ್ಲಿ ಸ್ಫೋಟಿಸುವುದು, ಬೇಕಾದೆಡೆಗೆ ಬಾಂಬ್ ಸಾಗಿಸುವುದರಲ್ಲಿ ಎಷ್ಟು ಎಕ್ಸ್‌ಪರ್ಟೋ ಅಷ್ಟೇ ಚಾಲಾಕಿ ಮತಾಂಧ ಬ್ರೈನ್‌ವಾಷರ್! ಭಟ್ಕಳದ ತೆಂಗಿನಗುಂಡಿಯಲ್ಲಿ ತಂದೆ-ತಾಯಿ-ಹೆಂಡತಿ-ಮೂರು ಮಕ್ಕಳನ್ನು ಬಿಟ್ಟು 'ಧರ್ಮ ಪ್ರಸಾರ'ಕ್ಕೆಂದು ದೇಶವಿದೇಶ ಅಲೆಯುವ ರಿಯಾಜ್ ಎಂಥವರನ್ನೂ ಮರಳು ಮಾಡಿ 'ಮುಜಾಹಿದ್ದೀನ್' ಮಾಡಬಲ್ಲ ಕುಶಲ ಪ್ರವೀಣ. ಉನ್ನತ ಶಿಕ್ಷಣ ಪಡೆದ ಇಂಜಿನಿಯರ್ ಡಾಕ್ಟರ್‌ಗಳಿಗೆ ಗೋದ್ರೋತ್ತರ ಘಟನೆ, ಇರಾಕ್-ಪ್ಯಾಲೇಸ್ತೇನ್ ಯುದ್ಧ ತಾಲೀಬಾನ್ ಚಟುವಟಿಕೆ, ಜಾಕೀರ್ ನಾಯ್ಕನ ಭಾಷಣ ಮುಂತಾದ ಸಿಡಿ ತೋರಿಸಿ ಮತಾಂಧ ಉಗ್ರರಾಗಿಸುತ್ತಿದ್ದಾನೆ ರಿಯಾಜ್. ಯಾಹೂ ಕಂಪೆನಿಯಲ್ಲಿ ಬರೋಬ್ಬರಿ 19 ಲಕ್ಷ ರೂ. ಸಂಬಳ ಪಡೆಯುತ್ತಿದ್ದ ಮಹಮ್ಮದ್ ಮನ್ಸೂರ್ ಅಸ್ಗರ್ ಪೀರ್‌ಬಾಯ್ ಇದಕ್ಕೊಂದು ಉದಾಹರಣೆ.

ಭಟ್ಕಳದ ನವಾಯತ ಮುಸ್ಲಿಮ್ ಪಂಗಡದ ರಿಯಾಜ್ ಭೂಗತ ಪಾತಕಿ ದಾವೂದ್ ಇಬ್ರಾಹಿಂಗೂ ಸಖನೇ. ಭಟ್ಕಳದ ನವಾಯತ ಮುಸ್ಲಿಮರು ಶತ-ಶತಮಾನಗಳಿಂದ ಶಕ್ತಿಶಾಲಿಯಾಗಿ ಬೆಳೆಸಿಕೊಂಡಿರುವ ಅರಬ್ ರಾಷ್ಟ್ರಗಳೊಂದಿಗಿನ ವ್ಯಾಪಾರಿ ಸಂಬಂಧವನ್ನು ಈ ರಿಯಾಜ್ ತನ್ನ ಚಟುವಟಿಕೆಗೆ ಚೆನ್ನಾಗಿ ಬಳಸಿಕೊಂಡಿದ್ದಾನೆ. ದಾವೂದ್‌ನ ಖೋಟಾ ನೋಟು ಜಾಲದಲ್ಲೂ ರಿಯಾಜ್ ಇದ್ದಾನೆ. ಈತನ ಆಪ್ತಸಹಚರ ಭಟ್ಕಳದ ಶಬ್ಬರ್ ಗಂಗೊಳ್ಳಿ ಖೋಟಾ ನೋಟು ಪ್ರಕರಣದಲ್ಲೇ ಇವತ್ತು ಮುಂಬೈ ಜೈಲಲ್ಲಿ ಕೊಳೆಯುತ್ತಿದ್ದಾನೆ. ರಿಯಾಜ್ ಮಾತ್ರ ಯಾರ ಕೈಗೂ ಸಿಗದೇ ಕರಾಚಿ-ದುಬೈ-ಭಟ್ಕಳ-ಮುಂಬೈ ಎಂದು ಭೂಗತನಾಗಿ ಓಡಾಡುತ್ತ ಜಿಹಾದಿಸ್ಟ್ ಕಾರ್ಯಾಚರಣೆಯನ್ನು ವ್ಯವಸ್ಥಿತವಾಗಿ ನಡೆಸಿಕೊಂಡಿದ್ದಾನೆ.


ರಿಯಾಜ್ ಭಟ್ಕಳ


ಇಕ್ಬಾಲ್‌ಶಾಬಂದ್ರಿ

2008 ಬ್ಯಾಡ್ ಬಾಂಬ್ ಸ್ಫೋಟದವರೆಗೂ ರಿಯಾಜ್ ಭಟ್ಕಳಕ್ಕೆ ಬಂದುಹೋದ ಕುರುಹುಗಳಿವೆ. ಅನಂತರ ಪೊಲೀಸರು ಬೀಸಿದ ಬಲೆಯಿಂದ ತಪ್ಪಿಸಿಕೊಳ್ಳಲು ಆತ ಕರಾಚಿ ಅಥವಾ ದುಬೈ ಸೇರಿಕೊಂಡಿರುವ ಸಾಧ್ಯತೆಯಿದೆ ಎಂಬುದು ಪೊಲೀಸರ ಲೆಕ್ಕಾಚಾರ

ಅವನು ಅಹ್ಮದ್ ಸಿದ್ದಿಬಾಪಾ!!

ರಿಯಾಜ್ ಭಟ್ಕಳ ತಲೆಮರೆಸಿಕೊಂಡ ನಂತರ ಆ ಗುರುವಿನ ಸ್ಕೆಚ್‌ಗಳನ್ನೆಲ್ಲ ಕಾರ್ಯಗತಗೊಳಿಸುತ್ತಿರುವವನು ಅಹ್ಮದ್ ಮೊಹ್ಮದ್ ಜರಾರ್ ಸಿದ್ದಿಬಾಪಾ ಎಂಬ ಖತರ್‌ನಾಕ್ ಜಿಹಾದಿಸ್ಟ್!! 'ಯಾಸೀನ್ ಭಟ್ಕಳ್' ಎಂಬ ಸಾಂಕೇತಿಕ ಹೆಸರಿನಿಂದ ಚಲಾವಣೆಯಾಗುತ್ತಿರುವ ಅಹ್ಮದ್ ಸಿದ್ದಿಬಾಪಾಗೆ ಕೇವಲ ಮೂವತ್ತು ವರ್ಷದ ಪ್ರಾಯ! ಇಂಡಿಯನ್ ಮುಜಾಹಿದ್ದೀನ್‌ಗೆ ರಿಯಾಜ್ ಕಮಾಂಡರ್ ಆದರೆ, ರಿಯಾಜ್‌ಗೆ ಅಹ್ಮದ್ ಸಿದ್ದಿಬಾಪಾ ಲೆಫ್ಟಿನೆಂಟ್! ಈ ಯಾಸೀನ್ ಭಟ್ಕಳ ರಿಯಾಜ್‌ನ ಅಣ್ಣನ ಯುನಾನಿ ವೈದ್ಯ-ಪಕ್ಕಾ ಜಿಹಾದಿಸ್ಟ್ ಇಕ್ಬಾಲನ ಬಾಲ್ಯದ ಗೆಳೆಯ. ಭಟ್ಕಳದ ಮುಗ್ದುಂ ಕಾಲನಿಯ ಯಾಸೀನ್ ನವಾಯತ ಮುಸ್ಲಿಮ ರಿಯಾಜ್‌ನ ಸಂಬಂಧಿಯೂ ಹೌದು. ಪೂನಾದ ಜರ್ಮನ್ ಬೇಕರಿ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ರಿಯಾಜ್ ಇಕ್ಬಾಲ್ ಸಹೋದರರ ಜತೆ ಈತನೂ ಆರೋಪಿ.

ಭಟ್ಕಳದ ಅಂಜುಮಾನ್ ಹೈಸ್ಕೂಲಿನಲ್ಲಿ ಎಸ್ಸೆಸೆಲ್ಸಿತನಕ ಕಲಿತಿದ್ದ ಅಹ್ಮದ್ ತಣ್ಣನೆಯ ಸ್ವಭಾವದ ಹುಡುಗನಾಗಿದ್ದ. ಆತನ ತಂದೆ ಮಹ್ಮದ್ ದುಬೈನಲ್ಲಿದ್ದರೆ ಇತ್ತ ಗಲ್ಫ್‌ನಿಂದ ಹರಿದುಬರುವ ಹಣದಿಂದ ಅಹ್ಮದ್ ಉಂಡಾಡಿಮುಂಡನಂತಾಗಿ ಹೋದ. ಇದನ್ನು ಸರಿಯಾಗಿ ಗುರುತಿಸಿ ಮುಜಾಹಿದ್ದೀನ್ ಬಲೆಗೆ ಆತನನ್ನು ರಿಯಾಜ್ ಕೆಡವಿಕೊಂಡ. ಮುಜಾಹಿದ್ದೀನ್ ಪೂನಾ ಕ್ಯಾಂಪ್‌ಗೆ ಆತನನ್ನು ಕರೆದೊಯ್ದು ದೀಕ್ಷೆ ಕೊಟ್ಟ. ಅಲ್ಲಿ ಅಹ್ಮದ್ ತಾನೊಬ್ಬ ಇಂಜಿನಿಯರ್‌ಎಂದು ಪರಿಚಯಿಸಿಕೊಂಡಿದ್ದ. ಆದರೆ ಅಂಥ ಶಿಕ್ಷಣ ಪಡೆದ ದಾಖಲೆಯೇನೂ ಪೊಲೀಸರಿಗೆ ಈವರೆಗೆ ಸಿಕ್ಕಿಲ್ಲ. ಪೂನಾದಲ್ಲಿ ಅಹ್ಮದ್‌ಗೆ 'ದಾರಿದೀಪ'ವಾದವನು ರಿಯಾಜ್ ಅಣ್ಣ-ಮುಜಾಹಿದ್ದೀನ್ ಗ್ಯಾಂಗ್‌ಸ್ಟರ್ ಇಕ್ಬಾಲ್.

ಕರಾಚಿಯಿಂದ ಪುಣೆಗೆ

ಪುಣೆಯ ಮುಜಾಹಿದ್ದೀನ್ ಅಡ್ಡೆಗಳಲ್ಲಿ ಪಳಗಿದ ಅಹ್ಮದ್ ಸಿದ್ದಿಬಾಪಾ ಕರಾಚಿಗೂ ಹೋಗಿ ಲಷ್ಕರ್ ತರಬೇತಿ ಪಡೆದು ಬಂದಿದ್ದ. ಅನಂತರ ಆತನ ಠಿಕಾಣಿ ಮುಂಬೈಗೆ ಬದಲಾಯ್ತು. ಅಹ್ಮದ್ ಮಾಡಿದ ಮತಾಂಧ ಪಾತಕ ಘೋರವಾದುದು. ಆತ ಬಾಂಬ್ ತಯಾರಿಕಾ ಪ್ರವೀಣ. ಸ್ಫೋಟದಲ್ಲೂ ನಿಸ್ಸೀಮನಾಗಿದ್ದ ಬಾಪಾ ಚಿಕ್ಕಮಗಳೂರಿನ ಭದ್ರ ಅರಣ್ಯದಲ್ಲಿ ಬಾಂಬ್ ತಯಾರಿಕಾ ಕಾರ್ಖಾನೆಯನ್ನು ಶುರುಮಾಡಿದ್ದ.


ಪೊಲೀಸರು ದಾಳಿ ಮಾಡುವುದು ಗ್ರಹಿಸಿದ ತಕ್ಷಣ ಒಂದೇ ತಾಸಿನ ಅಂತರದಲ್ಲಿ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಮಂಗಳೂರಿಗೆ ಹೋಗಿದ್ದ. ಅಲ್ಲಿಂದ ಕರಾಚಿಗೆ ಪರಾರಿಯಾಗಿದ್ದ ಅಹ್ಮದ್ ಬಾಪಾ.

2008ರಲ್ಲಿ ಪೊಲೀಸರಿಂದ ತಪ್ಪಿಸಿಕೊಳ್ಳಲು ಕರಾಚಿ ಸೇರಿದ್ದ ಅಹ್ಮದ್ ಬಾಪಾ ಕಳೆದ ಫೆಬ್ರವರಿಯಲ್ಲಿ ಇದ್ದಕ್ಕಿದ್ದಂತೆ ಪುಣೆಯ ಜರ್ಮನ್ ಬೇಕರಿಯಲ್ಲಿ ಪ್ರತ್ಯಕ್ಷವಾಗಿದ್ದ. ಆತ ಅಲ್ಲಿಗೆ ಬಂದು ಹೋದ ನಂತರವೇ ಭೀಕರ ಬಾಂಬ್ ಸ್ಫೋಟವಾಗಿ ಬರೋಬ್ಬರಿ 17 ಮಂದಿ ಹತರಾಗಿದ್ದರು; ಸುಮಾರು 60 ಮಂದಿ ಅಂಗಾಂಗ ಕಳೆದುಕೊಂಡಿದ್ದರು. ಜರ್ಮನಿ ಬೇಕರಿಯ ಕ್ಯಾಶಿಯರ್ ಕೌಂಟರ್ ಬಳಿಯ ಸಿಸಿಟಿವಿ ಕ್ಯಾಮರಾದಲ್ಲಿ ಸೈತಾನ ಅಹ್ಮದ್ ಬಾಪಾ ಸ್ಪಷ್ಟವಾಗಿ ಕಾಣಿಸಿಕೊಂಡಿದ್ದಾನೆ. ದೊಗಲೆ ನೀಲಿ ಅಂಗಿ, ಪಾದಗಳಿಂದ ಮೇಲಕ್ಕೆ ಮಡಚಿದ ಪ್ಯಾಂಟು ಮತ್ತು ಬೆನ್ನಿನ ಮೇಲೆ ಅಂಗವಸ್ತ್ರ ಈತ ಹಾಕಿಕೊಂಡಿದ್ದ. ಈ ದಿರಿಸಿನ ಕಿರುಗಡ್ಡದ ಆ ತರುಣನೇ ಯಾಸೀನ್ ಭಟ್ಕಳ್ ಯಾನೆ ಅಹ್ಮದ್ ಜರಾರ್ ಸಿದ್ದಿಬಾಪಾನೆಂದು ಕರ್ನಾಟಕ-ಗುಜರಾತ್-ಮಹಾರಾಷ್ಟ್ರ ಪೊಲೀಸರು ಗುರುತಿಸಿದ್ದಾರೆ. ಅಲ್ಲಿಗೆ ಪೂನಾದ ಜರ್ಮನ್ ಬೇಕರಿ ವಿಧ್ವಂಸಕತೆಯಲ್ಲಿ ಅಹ್ಮದ್ ಬಾಪಾನ ಕೈವಾಡ ಅಡಗಿರುವುದು ಖಾತ್ರಿಯಾಗುತ್ತದೆ.

ಗುರು ರಿಯಾಜ್ ಭಟ್ಕಳನ ಮಾರ್ಗದರ್ಶನದಲ್ಲೇ ಈ ಅಹ್ಮದ್ ಬಾಪಾ 2005 ಮತ್ತು 2008ರಲ್ಲಿ ಬಾಂಬ್ ಮತ್ತಿತರ ಸ್ಫೋಟಕ ಸಾಮಗ್ರಿಗಳನ್ನು ಮುಜಾಹಿದ್ದೀನ್‌ಗಳಿಗೆ ಒದಗಿಸಿದ್ದು. ಆ[illegible] ದೇಶದ ಹತ್ತು ನಗರಗಳಲ್ಲಿ ಭೀಭತ್ಸ-ಬರ್ಬರ ಪಾತಕವೆ[illegible] ಈ ಸ್ಫೋಟಗಳಿಂದ ನಡೆದಿತ್ತು. ಇದು ಮುಜಾಹಿದ್ದೀನ[illegible] ಗ್ಯಾಂಗಲ್ಲಿ ಅಹ್ಮದ್‌ಬಾಪಾನ ಖತರ್‌ನಾಕ್ ತೂಕ ಹೆಚ್ಚಿಸಿತ್ತಲ್ಲ[illegible] ಬಾಸ್ ರಿಯಾಜ್ ವಿಶೇಷ ಶ್ಲಾಘನೆಗೂ ಪಾತ್ರವಾಗಿತ್ತು. ಅಲ್ಲಿಂದೀಚೆಗೆ ಕೇಂದ್ರ ತನಿಖಾ ಪೊಲೀಸರು, ಇನ್ನಿತರ ಪೊಲೀಸರು ಹದ್ದಿನ ಕಣ್ಣಿಟ್ಟು ಕಾಯುತ್ತಿದ್ದಾರೆ. ಆದ[illegible] ರಿಯಾಜ್‌ನಂತೆಯೇ ಆತನ ಚಾಂಡಾಲ ಶಿಷ್ಯ ಅಹ್ಮದ್ ಬಾಪಾನು ಪೊಲೀಸರಿಗೆ ಸಿಗುತ್ತಿಲ್ಲ.

ಭಟ್ಕಳದ ಜಿಹಾದಿಸ್ಟ್ ಬಂಕರಾ?

ಜರ್ಮನ್ ಬೇಕರಿ ವಿಧ್ವಂಸಕ ಪ್ರಕರಣದಲ್ಲಿ ಇಂಡಿಯನ್ ಮುಜಾಹಿದ್ದೀನ್ ಪಾತಕಿಗಳಾದ ರಿಯಾಜ್ ಮ[illegible] ಯಾಸೀನ್ ಹಾಗೂ ಅವರ ತವರೂರು (ಭಟ್ಕಳ) ಮೂಲ[illegible] ಆರು ಉಗ್ರರು ಭಾಗಿಯಾಗಿರುವುದು ಬಹಿರಂಗವಾಗುತ್ತ[illegible] ದೇಶದ ಪ್ರಮುಖ ತನಿಖಾ ತಂಡಗಳ ಕೆಂಗಣ್ಣು ಭಟ್ಕಳ[illegible] ಮೇಲೆ ಬಿದ್ದಿದೆ. ಅಲ್ಲಿಗೆ ಮಿನಿದುಬೈ ಎಂದೇ ಕರೆಸಿಕೊಳ್ಳು[illegible] ಭಟ್ಕಳ ಜಿಹಾದಿ ಭಯೋತ್ಪಾದಕರ ಬಂಕರ್ ಎಂ[illegible]


ರಿಯಾಜ್ ತಾಯಿ ಮತ್ತು ತಂದೆ

ಅಪಖ್ಯಾತಿಗೆ ತುತ್ತಾಗಿ ಹೋಗಿದೆ! ಭಟ್ಕಳದಲ್ಲಿ ಜಿ[illegible] ಚಟುವಟಿಕೆಗಳಿರುವುದು ನಿರಾಕರಿಸಲಾಗದ ಸತ್ಯ. ಇ[illegible] ಕಂಡುಹಿಡಿಯಲು ದಿಲ್ಲಿ-ಮುಂಬೈನ ಪೊಲೀ[illegible] ಬರಬೇಕಾಯ್ತೇ ವಿನಃ ಸ್ಥಳೀಯ ಜೋಭದ್ರ[illegible] ಪೊಲೀಸರಿಂದಾಗಲೇ ಇಲ್ಲ.

ಭಟ್ಕಳದ ನವಾಯತ ಮುಸ್ಲಿಮ್ ಕಮ್ಯುನಿ[illegible] ಸುಮಾರು ಎರಡು ಡಜನ್ ಹುಡುಗರು ಇಂಡಿ[illegible] ಮುಜಾಹಿದ್ದೀನ್‌ನಲ್ಲಿದ್ದಾರೆ. ಇವರೆಲ್ಲರನ್ನು ಉಗ[illegible] ತಯಾರಿಸಿದ್ದು ರಿಯಾಜ್ ಮತ್ತು ಯಾಸೀನ್ [illegible] ಎಂಬ ಮುಜಾಹಿದ್ದೀನ್ ಕಮಾಂಡರ್- ಲೆಫ್ಟಿನೆ[illegible]

ಭಟ್ಕಳದ ರಿವೋಟ್ ಏರಿಯಾ-ಜಾಲಿ ಎಂಬಲ್ಲಿನ ಬೀಚ್‌ನಲ್ಲಿರುವ ಮದರಸಾ-ಬಹರೇನ್ ಹೌಸ್‌ನಲ್ಲಿ ಆಗಾಗ ಜಿಹಾದಿಸ್ಟ್ ಕ್ಲಾಸುಗಳು-ಶಿಬಿರಗಳು ನಡೆದಿದೆ; ಭಟ್ಕಳದ ರಿಯಾಜ್ ಮನೆಯಲ್ಲೇ ಸ್ಫೋಟಕ ತಯಾರಿಸಲಾಗಿದೆ!

2004ರ ಬೇಸಿಗೆ ಕಾಲದಲ್ಲಿ ಜಾಲಿ ಕಡಲ ತೀರದ ಬಹರೇನ್ ಹೌಸ್‌ನಲ್ಲಿ ಜಿಹಾದಿಗಳ ಸ್ಪಡಿಕ್ಲಾಸು-ಶೂಟಿಂಗ್ ತರಬೇತಿ ನಡೆದಿತ್ತು. ಇದನ್ನು ಆರ್ಗನೈಸ್ ಮಾಡಿದ್ದು ಭಟ್ಕಳದ ಆಳ ಅಗಲ ಬಲ್ಲ ಅಹ್ಮದ್ ಸಿದ್ಧಿಬಾಪಾ ಆ ಶಿಬಿರದಲ್ಲಿ ಮುಜಾಹಿದ್ದೀನ್ ಸುಪ್ರಿಮೋ ರಿಯಾಜ್‌ನ ಅಣ್ಣ ಇಕ್ಬಾಲ್ ಶಾಬಂದ್ರಿ ಮತ್ತು ಈಗ ಖೋಟಾನೋಟು ಕೇಸ್‌ನಲ್ಲಿ ಮುಂಬೈ ಪೋಲೀಸರ ಪಾಲಾಗಿರುವ ಶಬ್ಬೀರ್ ಗಂಗೊಳ್ಳಿ ಪಾಠ ಮಾಡಿದ್ದರು. ಏರ್‌ಗನ್‌ನಿಂದ ಗುಂಡು ಹಾರಿಸುವ ಟ್ರೈನಿಂಗೂ ಜಿಹಾದಿಸ್ಟ್‌ಗಳಿಗೆ ಕೊಡಲಾಗಿತ್ತು. ಇಷ್ಟೇ ಅಲ್ಲ ಭಟ್ಕಳ ಬ್ರಾದರಸ್ ಮನೆಯಿಂದ ಬಾಂಬುಗಳು ರವಾನಿಸಲ್ಪಟ್ಟಿರುವುದು ಪೋಲೀಸರಿಗೆ ಖಾತ್ರಿಯಾಗಿತ್ತು. ಅವುಗಳನ್ನು ಮಂಗಳೂರಿನ ಉಳ್ಳಾಲ ಅಥವಾ ಭಟ್ಕಳದಲ್ಲಿ ರಿಯಾಜ್ ಯಾಸೀನ್ ತಂಡ ತಯಾರಿಸಿತ್ತು. ಭಟ್ಕಳದ ತೆಂಗಿನಗುಂಡಿ, ಸುಲ್ತಾನ ಸ್ಟ್ರೀಟ್... ಆಜಾದ್‌ನಗರ, ಮಗ್ದೂಮ್ ಕಾಲೋನಿ... ಶೆತ್ಲಮಕ್ಕಿ ಮತ್ತು ಹಕ್ಕಲಮನೆ ಏರಿಯಾದಿಂದಲೂ ಮುಜಾಹಿದ್ದೀನ್ ಕಾರ್ಯಾಚರಣೆ ಪ್ರದೇಶಕ್ಕೆ ಬಾಂಬುಗಳು ರವಾನೆ ಆಗಿದೆ.

ಹಿಂದೂತ್ವದ ಚಿತಾವಣೆ

ಭಟ್ಕಳದ ನವಾಯತ ಮುಸ್ಲಿಮ್ ತರುಣರೇಕೆ ಮುಜಾಹಿದ್ದೀನ್ ಸಿಮಿಯಂಥ ಭಯೋತ್ಪಾದಕ ಸಂಘಟನೆ ಸೇರುತ್ತಿದ್ದಾರೆಂದು ಕೆದಕುತ್ತಾ ಹೋದರೆ ಸಿಗುವುದು ಹಿಂದೂತ್ವದ ಚಿತಾವಣೆ. ನವಾಯತರು ಸಾಗರೋತ್ತರ ವಾಣಿಜ್ಯ-ವ್ಯಾಪಾರ-ವಹಿವಾಟು ವೃದ್ಧಿಸಿಕೊಂಡು ಕಣ್ಣು ಕುಕ್ಕುವ ಶ್ರೀಮಂತಿಕೆ ಕಂಡದ್ದು, ಭಟ್ಕಳ ನಗರದ ಪ್ರಮುಖ ಭಾಗವನ್ನೆಲ್ಲ ಕಬ್ಜಾ ಮಾಡಿಕೊಂಡಿದ್ದು ಬಡ ಹಿಂದೂಗಳಲ್ಲಿ ಮಂಥರಾ ಅಸೂಯೆ ಹುಟ್ಟಿಸಿತು. ಜತೆಗೆ ಹಣವಂತ ನವಾಯತರ ಶೋಷಣೆ, ದಬ್ಬಾಳಿಕೆಯೂ ನಡೆದಿತ್ತು. ಹೀಗಾಗಿ ಬಹುಸಂಖ್ಯಾತ ಹಿಂದೂಗಳು-ಹಣವಂತ ನವಾಯತರ ನಡುವೆ ದ್ವೇಷಾಸೂಯೆ ಬೆಳೆಯಿತು.

ಇದೊಂದು ವರ್ಗ ಸಂಘರ್ಷವಾಗುವ ಬದಲು ಸಂಘಪರಿವಾರದ ಮತಾಂಧ ನಾಯಕರ ಮಸಲತ್ತಿನಿಂದ ಕೋಮು ಸಮರವಾಗಿ ಹೋಯ್ತು. 1990 ದಶಕದಲ್ಲಿ ಶಾಸಕ ಯು.ಚಿತ್ತರಂಜನ್ ಮುಂತಾದವರು ಅಧಿಕಾರಲಾಲಸೆಯ ದೂ(ದು)ರಾಲೋಚನೆಯಿಂದ ಕಟ್ಟಿದ ಕರಾವಳಿ ಹಿಂದೂ ಸಮಿತಿ (ಜನಸಂಘ) ಪ್ರಬಲವಾಗಿ ಬೆಳೆಯಿತು. ಮುಸ್ಲಿಂ ದ್ವೇಷವನ್ನು ಅಮಾಯಕ ಹಿಂದೂಗಳಲ್ಲಿ ಬಿತ್ತಿ ಬೆಳೆದ ಹಿಂದೂತ್ವವಾದಿಗಳಿಂದಾಗಿ 1990ರ ದಶಕದಲ್ಲಿ ಭಯಾನಕ-ನಿರಂತರ ಕೋಮು ಗಲಭೆ-ರಕ್ತಪಾತಗಳಾದವು. ಕೋಮು ಹುಲಿ ಸವಾರಿಯಿಂದ ಶಾಸಕನಿಂದ ಚಿತ್ತರಂಜನ್‌ನನ್ನು ಅದೇ ಧರ್ಮಾಂಧ ಹುಲಿ ತಿಂದು ಮುಗಿಸಿತು.

ವರುಣ್ ಗಾಂಧಿಯ ಅಣ್ಣನಂತಿರುವ ಅನಂತಕುಮಾರ್ ಹೆಗಡೆ ಲೋಕಸಭಾ ಸದಸ್ಯನಾಗಿದ್ದೇ ಭಟ್ಕಳವನ್ನು 'ಕರ್ಮಭೂಮಿ'ಯಾಗಿಸಿಕೊಂಡು ಆಡಿದ ಪೈಶಾಚಿಕ ಕೋಮು ಆಟವಾಯಿತು. ದ ಅನಂತ್ಮಾಣಿಯ ನಾಯಕತ್ವದಲ್ಲಿ ಭಟ್ಕಳದ ಅಮಾಯಕ ಮುಸ್ಲಿಮರ ಮೇಲಾದ ದಾಳಿ-ಹಲ್ಲೆ-ಅತ್ಯಾಚಾರ -ಮಾನಹರಣಕ್ಕೆ ಲೆಕ್ಕವೇ ಇಲ್ಲ. 1993ರ ನಂತರ ಒಂದೆರಡು ವರ್ಷ ಅನಂತ್ಮಾಣಿಯಿಂದಾಗಿ ಭಟ್ಕಳ ಎಂಬುದು ರೌರವ ನರಕವಾಗಿತ್ತು. ಮುಗ್ಧ-ಪೆದ್ದು ಹಿಂದೂಗಳಿಗೆ ಧರ್ಮದ ಅಮಲೇರಿಸಿ ಸಾಬಿಗಳ ಮೇಲೆ ಛೂಬಿಟ್ಟು ಅನಂತ್ಮಾಣಿ ರಹಸ್ಯತಾಣಗಳಲ್ಲಿ, ಶಾಸಕ ರಂಜನ್ ಮನೆಯಲ್ಲಿ ತಲೆ ತಪ್ಪಿಸಿಕೊಂಡಿರುತ್ತಿದ್ದ.

ಅನಂತಕುಮಾರ್ ಹೆಗಡೆ ಹಿಂದೂತ್ವದ ಹುಸೀ ಸುಳ್ಳುಗಳ ಮಹಾನುಭವಿ! ಭಟ್ಕಳದ ಕೋಮು ಕ್ರೌರ್ಯ ಈತನನ್ನು ಎಂಪಿ ಮಾಡಿದರೆ ಶಿವಾನಂದ ನಾಯ್ಕನೆಂಬ ಶೂದ್ರ ಶಾಸಕ ಮಂತ್ರಿಯೂ ಆಗಿಹೋದ. ಈ ನಿರಂತರ ಹಿಂದೂತ್ವದ ಉಪಟಳದಿಂದ ಕಂಗಾಲಾದ ನವಾಯತ ತರುಣರು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳಾದ ಸಿಮಿ, ಇಂಡಿಯನ್ ಮುಜಾಹಿದ್ದೀನ್, ಜಿಹಾದಿಸ್ಟ್ ಗ್ಯಾಂಗ್‌ಗಳತ್ತ ಆಕರ್ಷಿತರಾದರು. ಜಿಹಾದಿಗಳಿಗೆ ಭಟ್ಕಳ ಸುರಕ್ಷಿತ ಅಡಗುದಾಣವಾಯ್ತು.

ಭಟ್ಕಳದ ಕೋಮುದಳ್ಳುರಿಯ ಮತಾಂಧ ಅಗ್ನಿಕುಂಡದಲ್ಲಿ ಎರಡು ತರಹದ ಅನಾಹುತಕಾರಿ ಬೈ ಪ್ರಾಡೆಕ್ಟ್‌ಗೆ ತಯಾರಾಗಿವೆ. ಒಂದು ಕಡೆ ಚಿತ್ತರಂಜನ್, ಎಂಪಿ ಅನಂತ ಹೆಗಡೆ ಪೆದ್ದು ಶೂದ್ರ ಮಾಜಿ ಮಂತ್ರಿ ಶಿವಾನಂದ ನಾಯ್ಕ ಇತ್ಯಾದಿವರ ಹಿಂದೂತ್ವದ ಪಾತಕ ಪಡೆ! ಮತ್ತೊಂದೆಡೆ ಭಯೋತ್ಪಾದಕ ಶಾಬಂಧ್ರಿ ಬ್ರದರ್ಸ್ (ರಿಯಾಜ್ ಭಟ್ಕಳ್-ಇಕ್ಬಾಲ್ ಭಟ್ಕಳ್), ಅಹ್ಮದ್ ಸಿದ್ಧಿಬಾಪಾ (ಯಾಸೀನ್ ಭಟ್ಕಳ್) ಮತ್ತವರ ಜಿಹಾದಿಸ್ಟ್ ಹಿಂಸೋನ್ಮಾದಿಗಳ ತಂಡ!! ಸಂಘಪರಿವಾರದ ಧರ್ಮಕಾರಣದಿಂದ ದೇಶದಾದ್ಯಂತ ಕುಖ್ಯಾತವಾಗಿದ್ದ ಸತದೃಷ್ಟ ಭಟ್ಕಳ ಈಗ ರಕ್ತಪಿಪಾಸು ಮುಸ್ಲಿಮ್ ಮೂಲಭೂತವಾದಿ ಮುಜಾಹಿದ್ದೀನ್‌ಗಳಿಂದ ಕಳಂಕಿತವಾಗುತ್ತಿರುವುದು ದುರಂತ!!

• ನಹುಶ

Government of Karnataka

DIRECTORATE OF HEALTH AND FAMILY WELFARE SERVICES

ಆರೋಗ್ಯ ಇಲಾಖೆ ಔಷಧಿ ಖರೀದಿ ಗೋಲ್‌ಮಾಲ್

2010-11 ರ ಸಾಲಿಗೆ ಔಷಧಿ ಖರೀದಿಗೆ ಸದ್ಯದಲ್ಲೇ ರಾಜ್ಯ ಆರೋಗ್ಯ ಇಲಾಖೆಯ ಡ್ರಗ್ಸ್ ಲಾಜಿಸ್ಟಿಕ್ ಸೊಸೈಟಿ ಟೆಂಡರ್ ಕರೆಯಲಿದೆ. ಆಗಲೇ ಕಳ್ಳ ಕಂಪನಿಗಳು, ಅವುಗಳಿಗೆ ವ್ಯಾಪಾರ ಗಿಟ್ಟಿಸಿಕೊಡುವ ದಲ್ಲಾಳಿಗಳು (ಲಯಸನ್ ಏಜೆಂಟ್‌ಗಳು) ಒಳಗೊಳಗೆ ತಮ್ಮ ಆಟ ಶುರು ಹಚ್ಚಿಕೊಂಡಿದ್ದಾರೆ.

ಈ ಔಷಧಿ ಖರೀದಿ ಎಂಬುದು ಡ್ರಗ್ ಲಾಜಿಸ್ಟಿಕ್‌ನವರಿಗೆ ಮತ್ತು ಲಯಸನ್ ಏಜೆಂಟರುಗಳಿಗೆ ಭರ್ಜರಿ ಸಂತೆಯಿದ್ದಂತೆ. ತಮಗೆ ಬೇಕಾದ ಕಂಪನಿಗಳಿಗೆ ಟೆಂಡರ್ ಕೊಡಿಸಲು ಯತ್ನಿಸುವುದು, ಅಗತ್ಯಕ್ಕಿಂತ ಅಧಿಕ ಔಷಧಿ ಖರೀದಿಸಿ ಕಮಿಷನ್ ಹೊಡೆಯುವುದು ಇಲ್ಲಿ ಕಾಮನ್ ಆಗಿ ಹೋಗಿದೆ. ಕಳೆದ ಸಾಲಿನಲ್ಲಿ (2009-10) ಔಷಧಿ ಖರೀದಿಯಲ್ಲಿ ಕೂಡಾ ಸಾಕಷ್ಟು ಗೋಲ್‌ಮಾಲ್ ನಡೆದಿತ್ತು, ಆ ಪೈಕಿ ಮೂರು ಪ್ರಕರಣಗಳನ್ನು ಇಲ್ಲಿ ನೀಡುತ್ತಿದ್ದೇವೆ.

ಪ್ರಕರಣ ಮೂರಾದರೂ, ಮೂರರಲ್ಲಿ ಬರುವ ವಿಲನ್ ಪಾತ್ರಗಳು ಮಾತ್ರ ಅವವೇ. ಡ್ರಗ್ ಲಾಜಿಸ್ಟಿಕ್ ಸೊಸೈಟಿಯ ಅಂದಿನ ಚೀಫ್ ಸೂಪರ್‌ವೈಸರ್ ಡಾ. ಜಗನ್ನಾಥ್, ಅಂದಿನ ಅಪರ ನಿರ್ದೇಶಕ ಎಲ್. ರಾಧಾಕೃಷ್ಣ, ಅಂದಿನ ಫ್ಯಾನ್ ಈರಣ್ಣ ಮತ್ತು ಇವರಿಗೆ ರಕ್ಷಣೆ ನೀಡಿದ ಆರೋಗ್ಯ ಇಲಾಖೆಯ ಅಂದಿನ ಆಯುಕ್ತ ಶ್ರೀನಿವಾಸಾಚಾರ್, ಎಂದಿನಂತೆ ಒಂದಿಷ್ಟು ಲಯಸನ್ ಏಜೆಂಟರು.....

ಮಕ್ಕಳಿಗೆಂದು ಖರೀದಿಸುವ ಸೆಫಡ್ರಾಕ್ಸಿಲ್ ಆಂಟಿ ಬಯೋಟಿಕ್, ಡಿ ಹೈಡ್ರೇಷನ್ ನಿವಾರಕ ಓ.ಆರ್.ಎಸ್. ಪೌಡರ್ ಮತ್ತು ಹಾವು ಕಚ್ಚಿದಾಗ ನೀಡುವ ಇಂಜಕ್ಷನ್‌ಗಳ ಖರೀದಿಯಲ್ಲಿ ಮೇಲೆ ತಿಳಿಸಿದ ಮಹಾನುಭಾವರು ಲಯಸನ್ ಏಜೆಂಟರುಗಳೊಂದಿಗೆ ಶಾಮೀಲಾಗಿ ಮನಬಂದಂತೆ ಔಷಧಿ ಖರೀದಿಸಿ ಧನ್ಯರಾಗಿದ್ದಾರೆ.

ವಯಸ್ಕರಿಗೆ ಬೇಕಾಗುವ ಸೆಫಡ್ರಾಕ್ಸಿಲ್-500 mg ಮಾತ್ರೆಗಳನ್ನು ಎಷ್ಟು ಖರೀದಿಸುತ್ತಾರೋ ಅಷ್ಟರ ಶೇ. 25ರಷ್ಟು ಮಕ್ಕಳಿಗೆ ನೀಡುವ ಸೆಫಡ್ರಾಕ್ಸಿಲ್ 125 mg ಮಾತ್ರೆಯನ್ನು ಖರೀದಿಸುವುದು ವಾಡಿಕೆ. ಏಕೆಂದರೆ ಮಕ್ಕಳ ಸೆಫಡ್ರಾಕ್ಸಿಲ್‌ಗೆ ಆರೋಗ್ಯ ಘಟಕಗಳಿಂದ ಬೇಡಿಕೆ ಬರುವುದು ಅಷ್ಟು ಮಾತ್ರ. ಹಾಗೆಯೇ ಸೆಫಡ್ರಾಕ್ಸಿಲ್ 500 mg ಖರೀದಿಗೆ ಖರ್ಚು ಮಾಡಿದ ಶೇ 8.5ರಷ್ಟು ಮೊತ್ತದಲ್ಲಿ ಸೆಫಡ್ರಾಕ್ಸಿಲ್-125 mg ಖರೀದಿಸಬೇಕು. ಇದನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ಔಷಧಿ ಖರೀದಿಸುವಾಗ ಪಾಲಿಸಲಾಗಿದೆ. ಆದರೆ ಆರೋಗ್ಯ ಇಲಾಖೆಗೆ ಖರೀದಿಸುವಾಗ ಗೋಲ್‌ಮಾಲ್ ಮಾಡಲಾಗಿದೆ.

ಕಳೆದ ವರ್ಷ ಮೇನಿಂದ ಅಕ್ಟೋಬರ್‌ವರೆಗೆ 1 ಕೋಟಿ 21 ಲಕ್ಷ ಮೊತ್ತದ ಸೆಫಡ್ರಾಕ್ಸಿಲ್-500 mg ಮಾತ್ರೆ ಖರೀದಿಸಲಾಗಿದೆ. ಈ ಮೊತ್ತದ ಶೇ. 8.5 ರಷ್ಟು ಅಂದರೆ ಅಂದಾಜು 10 ಲಕ್ಷ ರೂ. ಮೊತ್ತದ ಸೆಫಡ್ರಾಕ್ಸಿಲ್- 125 mg ಮಾತ್ರೆ ಖರೀದಿಸಬೇಕಿತ್ತು. ಆದರೆ ಡಾ. ಜಗನ್ನಾಥ್, ರಾಧಾಕೃಷ್ಣ ಈರಣ್ಣರ ದುಷ್ಟಕೂಟ ಅಂದಿನ ಆಯುಕ್ತ ಶ್ರೀನಿವಾಸಾಚಾರ್ ಬೆಂಬಲದಿಂದ ಸುಮಾರು 2 ಕೋಟಿ ರೂ.ಗಳ ಸೆಫಡ್ರಾಕ್ಸಿಲ್- 125 mg ಮಾತ್ರೆಯನ್ನು ಮಹೇಂದ್ರ ಲ್ಯಾಬ್ಸ್‌ನಿಂದ ಖರೀದಿಸಿಬಿಟ್ಟಿದ್ದಾರೆ. ನಿಜಕ್ಕೂ ಇಷ್ಟು ಅಗತ್ಯ (indent) ಇತ್ತೆ?

13.5.09 ರಿಂದ 1.10.09 ರವರೆಗೆ ಸುಮಾರು 65 ಲಕ್ಷ ರೂ.ಗಳ ಸೆಫಡ್ರಾಕ್ಸಿಲ್- 125 mg ಮಾತ್ರೆ ಖರೀದಿಸಲಾಗಿದೆ. ಆದರೆ 17.11.09 ರ ದಿನಾಂಕದಲ್ಲಿ ಏಕಾಏಕಿ ಒಂದು ಕೋಟಿ 34 ಲಕ್ಷ ರೂ.ಗಳ ಸೆಫಡ್ರಾಕ್ಸಿಲ್ 125 mg ಮಾತ್ರೆ ಖರೀದಿಸಿದ್ದಾರೆ. ಇದು ಶ್ರೀನಿವಾಚಾರ್ಯರು ಬೇರೆ ಇಲಾಖೆಗೆ ವರ್ಗಾ ಆಗಿ ಚಾರ್ಜ್ ಕೊಟ್ಟು ಹೋಗುವಾಗ ದಿಢೀರ್ ಎಂದು ನಡೆಸಿದ ಖರೀದಿಯಾಗಿದೆ.

13.11.2009 ರಂದು ಶ್ರೀನಿವಾಸಾಚಾರ್‌ಗೆ ಬೇರೆ ಇಲಾಖೆಗೆ ವರ್ಗಾ ಆಗಿತ್ತು. ಮರುದಿನ ಶನಿವಾರ ಸೆಕೆಂಡ್ ಸ್ಯಾಟರ್‌ಡೇ (14.11.2209), ಅದರ ಮರುದಿನ ರವಿವಾರ (15.11.2009) ವಾಗಿದ್ದರಿಂದ ಶ್ರೀನಿವಾಸಾಚಾರ್ ಅವರು ಸೋಮವಾರ 16.11.2009 ರಂದು ಬರೋಬ್ಬರಿಗೆ ಚಾರ್ಜ್ ನೀಡಿದರು. ಅಂದೇ ಈ ಕೋಟಿ ಮೊತ್ತದ ಖರೀದಿಯನ್ನು ಫೈನಲ್‌ಗೊಳಿಸಿದ್ದರಿಂದ, ಮರುದಿನದ ತಾರೀಖಿನಲ್ಲಿ ಅದರ ಖರೀದಿ ನಡೆದಿದೆಯಷ್ಟೇ. ಹೀಗೆ ತರಾತುರಿಯಲ್ಲಿ ಖರೀದಿಸುವ ಅಗತ್ಯವಿತ್ತೆ? ಅದೂ ಅಷ್ಟು ಪ್ರಮಾಣದ ಮಾತ್ರೆಗಳು ಬೇಕೆಂದು ಇಂಡೆಂಟ್ ಇಲ್ಲದಿರುವಾಗ....

ಡಿಹೈಡ್ರೇಷನ್ ನಿವಾರಕ ಓ.ಆರ್.ಎಸ್. ಪೌಡರ್ ಖರೀದಿಸುವಾಗಲೂ ಅಗತ್ಯಕ್ಕಿಂತ ಹೆಚ್ಚು ಖರೀದಿ ಮಾಡಲಾಗಿದೆ. ಡ್ರಗ್ಸ್ ಲಾಜಿಸ್ಟಿಕ್ ಸೊಸೈಟಿಯ ಮುಂದೆ ಇಂಡೆಂಟ್ ಇದ್ದುದು 20.5 ಗ್ರಾಂನ 2 ಲಕ್ಷ ಓ.ಆರ್.ಎಸ್. ಪಾಕೆಟುಗಳಿಗೆ. ಅಂದರೆ ಇದರ ಮೊತ್ತ 50 ಲಕ್ಷವಾಗುತ್ತದೆ. ಆದರೆ ಈ ಖರೀದಿ ಪ್ರವೀಣರು ಮೂರು ಕೋಟಿ ಮೌಲ್ಯದ ಓ.ಆರ್.ಎಸ್. ಪ್ಯಾಕೇಟುಗಳನ್ನು ಔರಂಗಾಬಾದಿನ ಸವೆರಾ ಫಾರ್ಮಾಟಿಕಲ್ಸ್‌ನಿಂದ ಖರೀದಿಸಿ ಮತ್ತೆ 'ಭೋಜನ' ಮಾಡಿದ್ದಾರೆ. Rs (ರೂಪೀಸ್) ದ್ರಾವಣ ಇರುವುದರಿಂದ ಇವರಿಗೆ ಡಿಹೈಡ್ರೆಷನ್ನೂ ಆಗುವುದಿಲ್ಲ, ಅಸಿಡಿಟಿಯೂ ಆಗುವುದಿಲ್ಲ.

ಸರ್ಪ 'ಸಂಸ್ಕಾರ'

ಹಾವು ಕಚ್ಚಿದಾಗ ನೀಡುವ ಇಂಜಕ್ಷನ್‌ಗಳ ಖರೀದಿಯಲ್ಲೂ ಈ ಸರ್ಪಗಳು ಹರಿದಾಡಿವೆ. ಒಟ್ಟು ಅಗತ್ಯವಿದ್ದುದು (ಇಂಡೆಂಟ್ ಇದ್ದುದು) 16 ಸಾವಿರ ಇಂಜಕ್ಷನ್‌ಗಳು. ಡಾ. ಜಗನ್ನಾಥ್, ರಾಧಾಕೃಷ್ಣರು ಇಲಾಖೆಯ ಮುಂದೆ ಇಟ್ಟಿದ್ದು 45 ಸಾವಿರ ಇಂಜಕ್ಷನ್‌ಗಳ ಬೇಡಿಕೆ. ಆಯುಕ್ತ ಶ್ರೀನಿವಾಸಾಚಾರ್ ಅದನ್ನು ಶೇ. 50 ಕಡಿಮೆ ಮಾಡಲು ಸೂಚಿಸಿದ್ದರಿಂದ 23 ಸಾವಿರ ಇಂಜಕ್ಷನ್‌ಗಳನ್ನು ಭಾರತ್ ಸೀರಮ್ಸ್ ಅಂಡ್ ವ್ಯಾಕ್ಸಿನ್‌ನಿಂದ ಖರೀದಿಸಲಾಗಿದೆ. ನಿಜಕ್ಕೂ ಬೇಕಾಗಿದ್ದು ಕೇವಲ 16 ಸಾವಿರ ಮಾತ್ರ. ಮುಂದೆ ತಿಂಗಳು ಕಾಲ ಶ್ರೀನಿವಾಸಾಚಾರ್ ಅಮೆರಿಕಾಕ್ಕೆ ಹೋದರು. ಆಗ ಇನ್-ಚಾರ್ಜ್ ಆಯುಕ್ತರಾಗಿದ್ದ ಪೆರುಮಾಳರನ್ನು ಯಾಮಾರಿಸಿದ ಡಾ. ಜಗನ್ನಾಥ್, ರಾಧಾಕೃಷ್ಣಗಳು 17.7.09 ರಂದು ದಿಢೀರನೆ 70 ಸಾವಿರ ಖರೀದಿಗೆ ಅದೇ ಕಂಪನಿಯೊಂದಿಗೆ ಡೀಲು ಕುದುರಿಸಿದರು. 23 ಸಾವಿರ ಇಂಜಕ್ಷನ್ ಖರೀದಿಸಿದ ಮೂರೇ ವಾರಕ್ಕೆ ಏಕಾಏಕಿ ಒಂದೂವರೆ ಕೋಟಿ ಮೌಲ್ಯದ 70 ಸಾವಿರ ಇಂಜಕ್ಷನ್ ಖರೀದಿಸಿದ್ದೇಕೆ? ಆರೋಗ್ಯ ಕೇಂದ್ರಗಳಿಂದ ಅಷ್ಟೊಂದು ಬೇಡಿಕೆ ಒಮ್ಮೆಲೇ ಬಂದುಬಿಟ್ಟಿತೆ? ಅಥವಾ ರಾಜ್ಯದಲ್ಲಿ ಎಲ್ಲಿ ಬೇಕಲ್ಲಿ ಹಾವುಗಳು ಜನರನ್ನು ಕಚ್ಚತೊಡಗಿದ್ದವೆ? ಏನಿಲ್ಲ, ಶ್ರೀನಿವಾಸಾಚಾರ್ ಯಾಕೋ ಹಿಂದೇಟು ಹಾಕಿದ್ದರಿಂದ, ಅವರು ಅಮೆರಿಕೆಗೆ ಹೋದಾಗ ಈ ಖರೀದಿ ನಡೆಸಲಾಗಿದೆ. ಭಾರತ್ ಸಿರಮ್ಸ್‌ನವರು ಮೊದಲ ಖರೀದಿಯ ಮಾಲನ್ನು ಸಪ್ಲೈ ಮಾಡುವ ಮೊದಲೇ ಅದೇ ಕಂಪನಿಯಿಂದ ಎರಡನೇ ಖರೀದಿಗೆ ಕೈ ಹಾಕಿದ್ದು ಏಕೆ?

ಕಂಪನಿಗಳ ಲಯಸನ್ ಏಜೆಂಟರೊಂದಿಗೆ ಶಾಮೀಲಾಗಿ ಇವರೆಲ್ಲ 30 ಪರ್ಸೆಂಟು 'ಫೇವರ್' ಪಡೆದಿರುವ ಮಾತುಗಳು ಕೇಳಿಬರುತ್ತಿವೆ. ಇವರ್‍ಯಾರು ಈಗ ಇಲಾಖೆಯಲ್ಲಿ ಇಲ್ಲ. ಈಗ 2010-11 ರ ಖರೀದಿಗೆ ಟೆಂಡರ್ ಕರೆಯಲಿದ್ದಾರೆ. ಇದು ಸರಿಯಾಗಿ ನಡೆಯಬೇಕೆಂದರೆ 2009-10 ರ ಖರೀದಿ ಅವ್ಯವಹಾರದ ತನಿಖೆ ಮಾಡಬೇಕಲ್ಲವೆ? ಸದಾ ಬಳ್ಳಾರಿಯಲ್ಲೇ ಬಿದ್ಕೊಂಡಿರುವ ಸಚಿವ ಶ್ರೀರಾಮುಲುಗೆಲ್ಲಿ ಪುರುಸೊತ್ತಿದೆ?


• ಮಲ್ಲನಗೌಡರ್

ಲಯಸನ್ ಏಜೆಂಟರೋ, ಪಾಯಸನ್ ಏಜೆಂಟರೋ?

ಆರೋಗ್ಯ ಮತ್ತು ಕುಟುಂಬ ಇಲಾಖೆ, ವೈದ್ಯಕೀಯ ಶಿಕ್ಷಣ ಮತ್ತು ಆಯುಷ್ ಇಲಾಖೆಗಳಿಗೆ ಬೇಕಾಗುವ ಔಷಧಿಗಳ ಖರೀದಿಗೆಂದೇ ಡ್ರಗ್ಸ್ ಲಾಜಿಸ್ಟಿಕ್ ಸೊಸೈಟಿಯಿದೆ. ಈ ಸೊಸೈಟಿಯ ಅಧಿಕಾರಿಗಳನ್ನು ಬುಟ್ಟಿಗೆ ಹಾಕಿಕೊಳ್ಳುವ ಲಯಸನ್ ಏಜೆಂಟ್‌ಗಳು ಔಷಧಿ ಕಂಪನಿಗಳು ಮತ್ತು ಸೊಸೈಟಿ ನಡುವೆ ದಲ್ಲಾಳಿಗಳಂತೆ ಕೆಲಸ ಮಾಡುತ್ತಾರೆ. ಕೆಲವೊಮ್ಮೆ ಈ ಲಯಸನ್ ಏಜೆಂಟ್‌ಗಳು ಅಧಿಕಾರಿಗಳನ್ನು ಬ್ಲಾಕ್‌ಮೇಲ್ ಮಾಡಿ ತಮ್ಮ ಕೆಲಸ ಮಾಡಿಸಿಕೊಳ್ಳುತ್ತಾರೆ. ಸಿದ್ದು, ಲಲಿತ್ ದಾಖಿಯ, ರಕ್ಷಿತ್, ಹಿರೇಮಠ, ಅಜಯ್, ಬಾಲಾಜಿ, ಕಮಲ್ ಜೈನ್, ಪ್ರವೀಣ್ ಕಪಾಯಿ, ಓಸ್ವಾಲ್, ಪಿಯುಶ್, ಕುನಾಲ್, ದೀಪಕ್ ಖುರಾನಾ, ಸುಕುಮಾರ ಶೆಟ್ಟಿ, ರವೀಂದ್ರನ್, ನಾಗಭೂಷಣ್, ಚಂದ್ರು, ಮದನ್, ಗಜರಾಜ್ ರಮ್ಮಣ್‌ಲಾಲ್.... ಹೀಗೆ ಈ ಲಯಸನ್ ಏಜೆಂಟ್‌ಗಳ ದೊಡ್ಡ ಹಿಂಡೇ ಇದೆ.

ಮಹೇಂದ್ರ ಲ್ಯಾಬ್ಸ್‌ಗೆ ಅಷ್ಟೆಲ್ಲ ಆರ್ಡರ್ ಕೊಡಿಸಿದ್ದು ಮದನ್ ಎಂಬ ಏಜೆಂಟನೇ. ಸಿದ್ದು ರಕ್ಷಿತ್ ಎಂಬುವವರು ಸಚಿವ ಬೊಮ್ಮಾಯಿ ಹೆಸರು ಹೇಳಿಕೊಂಡು ಕೆಲಸಕ್ಕೆ ಕೈ ಹಾಕುತ್ತಾರೆ. ಲಲಿತ್ ದಾಖಿಯಾನಂತೂ ನೂರೆಂಟು ಕಂಪನಿಗಳಿಗೆ ಟೆಂಡರ್ ಕೊಡಿಸಲು ಓಡಾಡುತ್ತಾನೆ. ಮೊದಲು ಈ ಲಯಸನ್ ಏಜೆಂಟರೆಂಬ ಪಾಯಸನ್ ಏಜೆಂಟರಿಗೆ ಮೂಗುದಾಣ ಹಾಕಿದರೆ ಔಷಧಿ ಖರೀದಿ ಪಾರದರ್ಶಕವಾಗಬಹುದೇನೋ?

ವಿವೇಕವಂತ ಗೆಳೆಯರ ಬಳಗ, ಅಪಾರ ಹಿತೈಷಿಗಳ ಕಾಳಜಿ ಇವೆಲ್ಲಾ ಹೊಂದಿದ್ದರೂ ಎನ್ಕೆಗೆ ತನ್ನ ಬದುಕಿನ ಮೇಲೆ ನಿಯಂತ್ರಣ ಏರ್ಪಡಿಸಿಕೊಳ್ಳಲು ಆಗದೇ ಹೋಯಿತು. 'ಗೋವನ್ನು ತಿಂದು ಗೋವಿನಂತಾದವನು' ಎಂಬ ಮನಮಿಡಿಯುವ ಪದ್ಯಗಳೊಂದಿಗೆ 'ಒಬಾಮ ಚಂದಮಾಮ' ಎಂಬ ಪೆದ್ದು ಸಾಲುಗಳನ್ನು ಬರೆಯಬಲ್ಲವರಾಗಿದ್ದ ಎನ್ಕೆಗೆ ಕವಿತ್ವದ ಹಾಗೂ ಬದುಕಿನ ಅನೇಕ ಪಾಠಗಳನ್ನು ಇನ್ನೂ ಕಲಿಯುವುದಿತ್ತು.



ಎನ್ಕೆಯ ಕೊನೆಯ ದಿನಗಳು

ಕವಿ ಎನ್.ಕೆ.ಹನುಮಂತಯ್ಯ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಹಜ ಸಾವು ಬರುವ ಮೊದಲೇ ಅದನ್ನು ಆವಾಹಿಸಿಕೊಂಡಿದ್ದಲ್ಲದೆ ಬದುಕಿರುವ ಪತ್ನಿ-ಪುತ್ರಿ ಹಾಗೂ ಗೆಳತಿಯ ಬದುಕನ್ನು ದಹಿಸಿ ಹೊರಟು ಹೋಗಿರುವ ಎನ್ಕೆ ಘೋರ ತಪ್ಪೆಸಗಿದ್ದಾರೆ. ಈ ಮೂರು ದೊಡ್ಡವರು ಒಂದಿಷ್ಟು ವಿವೇಕ, ವಿವೇಚನೆ ತೋರಿದಿದ್ದರೆ- ಎನ್ಕೆಯ ಬದುಕು ಹೀಗೆ ದುರಂತಮಯವಾಗಿ ಕೊನೆಯಾಗುತ್ತಿರಲಿಲ್ಲವೇನೋ? ಆದರೆ ಈ ವಿವೇಕ ಎನ್ನುವುದು ಕವಿತ್ವದ ಪ್ರತಿಭೆಯಲ್ಲ, ಸರ್ಕಾರಿ ಸಂಬಳ ಅಥವಾ ಕವಿಕೀರ್ತಿಯಿಂದ ದಕ್ಕುವಂತದ್ದಲ್ಲ; ಹೆಣ್ಣುಮಕ್ಕಳ ಆ ಕ್ಷಣದ ಸಂಕಷ್ಟ, ಅಸಹಾಯಕತೆಯಿಂದಾಗಲಿ ಅಥವಾ ಪ್ರೇಮವಂಚಿತ ಸಂದರ್ಭದಿಂದ ಹುಟ್ಟುವಂತದ್ದೂ ಅಲ್ಲ, ಇಂಥ ಘಟನೆಗಳ ತತ್‌ಕ್ಷಣದ ಪರಿಣಾಮವಾಗಿ ಹುಟ್ಟಿ ಬರುವುದೇ ರೋಷ, ಆಕ್ರೋಶ, ಭಾವುಕತೆಯ extremeಗಳು.

ಇಂಥ ಸಂದರ್ಭದ ಸುಳಿಗೆ ಸಿಲುಕಿ ಎನ್ಕೆ ಜೀವ ತೊರೆದಿದ್ದಾರೆ.

ಹೊನ್ನಾವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕನ್ನಡ ಉಪನ್ಯಾಸಕನಾಗಿ ತೀರಾ ಇತ್ತೀಚೆಗಷ್ಟೇ ನೇಮಕಗೊಂಡಿದ್ದ ಎನ್ಕೆ 2010 ಏಪ್ರಿಲ್ 16ರಂದು ಬೆಳಗ್ಗೆ ಕಾಲೇಜಿನ ಕೆಮಿಸ್ಟ್ರಿ ಲ್ಯಾಬಿಗೆ ಹೋಗಿ ರೊಗೊರಿನ್ ಎಂಬ ರಾಸಾಯನಿಕ ಕುಡಿದು ಸಾವಿನ ಮನೆಯತ್ತ ತಮ್ಮ ಪಯಣ ಆರಂಭಿಸಿದ್ದಾರೆ. ಇವರನ್ನು ಗಮನಿಸಿದ ಸ್ನೇಹಿತರು ತಕ್ಷಣ ಪ್ರಾಥಮಿಕ ಚಿಕಿತ್ಸೆ ಕೊಡಿಸಿ 200 ಕಿ.ಮೀ. ದೂರದ ಮಣಿಪಾಲ್ ಆಸ್ಪತ್ರೆಗೆ ಕರೆತಂದರಾದರೂ ಎನ್ಕೆ ಉಳಿಯಲಿಲ್ಲ.

ಬಡವರ ಮನೆಯ ಬಾಲಕ

ತಿಪಟೂರಿನ ನಾಗರಘಟ್ಟ ಗ್ರಾಮದ ಕರಿಯಪ್ಪ-ಲಕ್ಷ್ಮಮ್ಮ ದಂಪತಿಗಳ ಮಗನಾದ ಹನುಮಂತಯ್ಯ ಜಾಣ ವಿದ್ಯಾರ್ಥಿಯಾಗಿ ಓದುತ್ತಾ ಎಸ್ಸೆಸೆಲ್ಸಿ ಪಾಸಾದ ದಿನವೇ ಅವರ ತಂದೆಯ ತಿಥಿಯೂ ನಡೆಯುತ್ತಿತ್ತು. ತಲೆಯ ಮೇಲೆ ಗಾಣದ ಎಣ್ಣೆ ಹೊತ್ತು ಮಾರುತ್ತಾ ಕುಟುಂಬ ಸಲಹುತ್ತಾ ಮುದ್ದಿನ ಮಗನನ್ನು ಓದಿಸುತ್ತಾ ಇದ್ದ ಕರಿಯಪ್ಪ 1989ರಲ್ಲಿ ಆತ್ಮಹತ್ಯೆ ಮಾಡಿಕೊಂಡು ಇಲ್ಲಿಂದ ನಿರ್ಗಮಿಸಿದ್ದರು. ನಂತರ ಎನ್ಕೆ ಬೇರೆಡೆ ಹೋಗಿ ಓದಲು ಯತ್ನಿಸಿ ಆಗದೆ ಕೊನೆಗೆ ತಿಪಟೂರಿಗೆ ಹಿಂತಿರುಗಿ ತಮ್ಮ ಓದನ್ನು ಮುಂದುವರೆಸಿದ್ದರು. ಬಿ.ಎ.ಯಲ್ಲಿದ್ದಾಗ ಅವರದ್ದೇ ಊರಿನ ಶೈಲಜಾರ ಪರಿಚಯವಾಗಿ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದರು. ಆದರೆ ಎನ್ಕೆ ಪರಿಶಿಷ್ಟ ಜಾತಿಯವರಾಗಿದ್ದು, ಶೈಲಜಾ ಲಿಂಗಾಯತರಾಗಿದ್ದರಿಂದ ಈ ವಿವಾಹಕ್ಕೆ ಅಡೆತಡೆಗಳು ಎದುರಾಗಿದ್ದವು. ಆದರೂ ಸ್ನೇಹಿತರ ಬೆಂಬಲದೊಂದಿಗೆ ಇವರಿಬ್ಬರು ಮೈಸೂರಿನ ಮಾನವ ಮಂಟಪದಲ್ಲಿ ಅಂತರಜಾತಿ ಮದುವೆ ಆಗಿದ್ದರು. ಆಮೇಲೆ ಕೆಲಕಾಲ ಬೆಂಗಳೂರಿನಲ್ಲಿದ್ದ ಎನ್ಕೆ ನಂತರ ತಿಪಟೂರಿನ ಕಲ್ಪತರು ಕಾಲೇಜಿಗೆ ಕನ್ನಡಕ ಮೇಷ್ಟ್ರಾಗಿ ಬಂದರು. ಮಗಳು ಸಂಘಮಿತ್ರೆ ಹಾಗೂ ಪತ್ನಿ ಶೈಲಜಾರೊಂದಿಗಿನ ದಾಂಪತ್ಯ ಚೆನ್ನಾಗಿದ್ದಾಗಲೇ ಎನ್ಕೆ ಕವಿಯಾಗಿ ಪ್ರಸಿದ್ಧರಾಗುತ್ತಿದ್ದಾಗಲೇ ಅನಸೂಯ (ಅಕ್ಕನ ಮಗಳು) ಎಂಬುವವರೊಡನೆ ಎನ್ಕೆಯ ಸ್ನೇಹ ಶುರುವಾಯಿತು. ಆಕೆಯ ವೈವಾಹಿಕ ಜೀವನದ ಸಮಸ್ಯೆ ಬಗೆಹರಿಸಲು ಹೋದ ಎನ್ಕೆ ತಾನೇ ಸಮಸ್ಯೆಯ ಭಾಗವಾಗಿದ್ದಲ್ಲದೆ ತನ್ನ ಕುಟುಂಬಕ್ಕೂ ಆ ಸಮಸ್ಯೆ ದಾಟಿಸಿಕೊಂಡರು. ಸಹಜವಾಗಿಯೇ ಮನೆಯಲ್ಲಿ ಮನಸ್ತಾಪ ಶುರುವಾಯಿತು. ಎನ್ಕೆ ಪ್ರಕ್ಷುಬ್ಧರಾದರು. ತಮ್ಮ ಬೇಗುದಿ ಹಾಗೂ ಭಾವನೆ ಯಾರಿಗೂ ಅರ್ಥವಾಗುತ್ತಿಲ್ಲವೆಂದು ಕೊರಗಲು ಶುರುಮಾಡಿದರು. ಈ ನಡುವೆ ಪತ್ನಿ ಶೈಲಜಾ ಅನಸೂಯರ ವಿರುದ್ಧ ಶಿಕ್ಷಣ ಇಲಾಖೆಗೆ ದೂರು ನೀಡಿ ಅದರಿಂದ ಆಕೆಯ ಸರ್ಕಾರಿ ಉದ್ಯೋಗದಲ್ಲೂ ತೊಂದರೆಯಾದಾಗ ಎನ್ಕೆಗೆ ಪತ್ನಿಯ ವಿರುದ್ಧವೇ ಸಿಟ್ಟು ಬಂದಿತು. ಎನ್ಕೆ ತನ್ನೆಲ್ಲಾ ಘನತೆ ಮರೆತು ಬಳ್ಳಾರಿಯ ಪಶ್ಚಿಮ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಒಂದು ಪತ್ರ ಬರೆದಿದ್ದರು.

"ನಾನು ದಲಿತ. ನನ್ನ ಪತ್ನಿ ಲಿಂಗಾಯತರಾಗಿದ್ದು ಜಾತಿ ಭೇದದಿಂದಾಗಿ ಅನಸೂಯ ವಿರುದ್ಧ ದೂರು ನೀಡಿದ್ದಾರೆ. ನನ್ನ ಪತ್ನಿಗೆ ಮತಿಭ್ರಾಂತಿ ಯಾಗಿದೆ. ದಯಮಾಡಿ ಶೈಲಜಾರ ದೂರನ್ನು ಪರಿಗಣಿಸದೆ ನಿರ್ಲಕ್ಷಿಸಿ" ಎಂಬುದೇ ಈ ಪತ್ರದ ಸಾರಾಂಶ.

ಕೊನೆಗೆ ಈ ಜಗಳಗಳೆಲ್ಲಾ ಬೆಳೆದು ತಿಪಟೂರು ಪೊಲೀಸ್ ಠಾಣೆಯಲ್ಲೂ ದೂರು ಪ್ರತಿದೂರುಗಳು ದಾಖಲಾದವು. ಇದೆಲ್ಲದರಿಂದ ಎನ್ಕೆ ತೀರಾ ಹತಾಶೆಗೊಳಗಾದರು. ತಿಪಟೂರಿನ ಪೊಲೀಸರ ಒರಟು ವಿಚಾರಣಾ ಶೈಲಿಯೂ ಅವರನ್ನು ಘಾಸಿಗೊಳಿಸಿತು. ಆಗ ಅವರು ಮೈಗೆ ಸೀಮೆಣ್ಣೆ ಸುರಿದು ಬೆಂಕಿ ಹಚ್ಚಿಕೊಳ್ಳುವ ವ್ಯರ್ಥ ಪ್ರಯತ್ನವನ್ನೂ ಮಾಡಿದರು. ಅವತ್ತು ಅವರ ತಾಯಿ ಮತ್ತು ಇತರರು ತಡೆಯದಿದ್ದರೆ ಅಂದೇ ಎನ್ಕೆ ಸಾವಿಗೀಡಾಗುತ್ತಿದ್ದರು. ಈ ಪ್ರಕ್ಷುಬ್ಧ ಮನಸ್ಥಿತಿಯಲ್ಲೇ ತಿಪಟೂರಿನಿಂದ ಕಾರವಾರಕ್ಕೆ ಕೆಲಸಕ್ಕೆ ಹೋದ ಎನ್ಕೆ ಬೆಳಗ್ಗೆ ಸೀದಾ ಕೆಮಿಸ್ಟ್ರಿ ಲ್ಯಾಬ್‌ಗೆ ತೆರಳಿ ಕೈಗೆ ಸಿಕ್ಕ ರಾಸಾಯನಿಕಗಳ ಬಗ್ಗೆ ವಿಚಾರಿಸುತ್ತ ಕೊನಗೆ ರೊಗೊರಿನ್ ಅನ್ನು ಕೈಲಿದ್ದ ಸಾಫ್ಟ್‌ಡ್ರಿಂಕ್ ಒಂದಕ್ಕೆ ಸುರಿದುಕೊಂಡು ಕುಡಿದು ಬಿಟ್ಟರು.

'ಪ್ರೀತಿಗೆ ಕಾನೂನಿನ ಅಪ್ಪಣೆ ಬೇಕಿಲ್ಲ, ನನ್ನ ಜೀವನದ ಉತ್ಸಾಹ ಕಿತ್ತುಕೊಂಡ ಎಲ್ಲರಿಗೂ ಧಿಕ್ಕಾರ. ನನಗೆ ಬದುಕಲು ಮನಸ್ಸಿಲ್ಲ. ನನ್ನನ್ನು ನೋಯಿಸಿದವರೇ ನನ್ನ ಸಾವಿಗೆ ಕಾರಣ' ಎಂದು ಕೆಲ ಆಪ್ತರಿಗೆ ಎಸ್ಸೆಮ್ಮೆಸ್ ಕಳಿಸಿದ್ದೇ ಕೊನೆ.

ಎನ್ಕೆ ಹೊರಟೇಹೋದರು.


ಕೆಟ್ಟ ಸಾವು ಕಂಡ ಎನ್.ಕೆ.ಹನುಮಂತಯ್ಯ

ಎನ್ಕೆಯ ಸಾವನ್ನು ನೈತಿಕವಾಗಿ ಸರಿತಪ್ಪುಗಳ ಪರಿಭಾಷೆಯಲ್ಲಿ ನಿರ್ಧರಿಸುವುದೇ ಕಷ್ಟವಾಗುತ್ತಿದೆ. ಆದರೆ ಜೀವಬಿಡುವ ಮುನ್ನ ಅವರು ಪಟ್ಟ ಅಪಾರ ಸಂಕಟ ಮತ್ತು ಈಗ ಸತ್ತು ಬದುಕಿರುವವರಿಗೆ ಕೊಟ್ಟಿರುವ ಅಪಾರ ವೇದನೆ ಎರಡೂ ಕಾಡಿಸುತ್ತಿವೆ. ಆಕ್ರೋಶ ತರಿಸುತ್ತಿವೆ. ಬಹಳ ದೊಡ್ಡ ಲೇಖಕನಾಗಿ ಬೆಳೆದು ನಾಡಿಗೆ ಕೀರ್ತಿ ತರುವ ಕವಿಯೊಬ್ಬ ಇಲ್ಲವಾದನಲ್ಲ ಎಂದಲ್ಲ; ನಮಗೆಲ್ಲ ತನ್ನ ಬಾಳಿನಿಂದಲೂ ಚಿಂತನೆಯಿಂದಲೂ ಪ್ರೇರಿಸುವ ಶಕ್ತಿ ಮತ್ತು ಸಾಧ್ಯತೆಯಿದ್ದ ಒಬ್ಬ ಮನುಷ್ಯ ಸಂಯಮಗೆಟ್ಟು ಉಧ್ವಸ್ತನಾದನಲ್ಲಾ ಎಂದು...

ಕನ್ನಡದ ಹೊಸತಲೆಮಾರಿನ ಲೇಖಕರ ಬಗ್ಗೆ ಬರೆಯುತ್ತಿದ್ದ ನನ್ನ ಅಂಕಣದಲ್ಲಿ ಕೆಲವು ತಿಂಗಳ ಹಿಂದೆ ನಮ್ಮ ಪ್ರತಿಭಾವಂತ ಕವಿಗಳಲ್ಲಿ ಒಬ್ಬರಾದ ಎನ್.ಕೆ.ಹನುಮಂತಯ್ಯನವರ ಬಗ್ಗೆ ಬರೆದಿದ್ದೆ. ಆದರೆ ನನಗೆ ಅವರ ಸಾವನ್ನು ಕುರಿತ ಲೇಖನವನ್ನು ಬರೆಯುತ್ತೇನೆಂಬ ಊಹೆ ಇರಲಿಲ್ಲ. ಗೆಳೆಯರಿಂದ ರಾಗಿಮುದ್ದೆ, ಎನ್ಕೆ ಎಂದು ಕರೆಯಿಸಿಕೊಳ್ಳುತ್ತಿದ್ದ ಹನುಮಂತಯ್ಯ ಈಗ ತೀರಿಕೊಂಡಿದ್ದಾರೆ. ಬೇಸರವಾಗುತ್ತಿರುವುದು ಅವರು ತೀರಿಕೊಂಡಿರುವುದಕ್ಕೆ ಮಾತ್ರವಲ್ಲ, ತೀರಿಕೊಂಡ ವಿಧಾನಕ್ಕೂ. ವಿಷಪ್ರಾಶನದಿಂದ ಅವರು ತಮ್ಮನ್ನು ಕೊಂದು ಕಳೆದುಕೊಂಡಿದ್ದಾರೆ. ಬಾಳಿ ಬದುಕಿದ ಜೀವಗಳು ಸಹಜ ಸಾವನ್ನು ಪಡೆದರೆ, ದುಗುಡದಿಂದಲೂ ಗೌರವದಿಂದಲೂ ಬೀಳ್ಕೊಡಬಹುದು. ಆದರೆ ಇನ್ನೂ ಬಾಳಿ ಬದುಕಬೇಕಾದ ಜೀವಗಳು ಸರಿಯಾಗಿ ಒಗೆತನವನ್ನು ಮಾಡದೆ, ಹೀಗೆ ಅನಾಹುತ ಮಾಡಿಕೊಂಡಾಗ, ತಮ್ಮ ಜತೆಗಿದ್ದವರನ್ನು ಅತಂತ್ರ ಮಾಡಿ ಹೋದಾಗ, ದುಃಖದ ಜತೆ ಕೋಪವೂ ಬರುತ್ತದೆ. ಬಾಳಿನ ಬಗ್ಗೆ ಆಳವಾಗಿ ಕಲಕುವಂತೆ ದಾರ್ಶನಿಕವಾಗಿ ಬರೆದು ನಮ್ಮಂತಹ ಓದುಗರನ್ನು ಸೂಕ್ಷ್ಮಗೊಳಿಸುವ ಲೇಖಕರೇ ಹೀಗೆ ದುಡುಕಿದರಲ್ಲ ಎಂದು ಮನಸ್ಸು ಪ್ರಕ್ಷುಬ್ಧವಾಗುತ್ತದೆ. ಎನ್ಕೆ ಹೀಗೆ ಹಲವಾರು ಗೆಳೆಯರನ್ನು, ಆಘಾತದಲ್ಲಿಕ್ಕಿ ತಣ್ಣಗೆ ಮಣ್ಣೊಳಗೆ ಹೋಗಿ ಮಲಗಿದ್ದಾರೆ.

ಹತ್ತು ವರ್ಷದ ಹಿಂದಿರಬೇಕು. ಕಪ್ಪನೆಯ ಜಾಲಿಮರದ ವಿಗ್ರಹದಂತಿದ್ದ ಈ ಸುಂದರ ಹುಡುಗ, ಎಂ.ಎ.ಮುಗಿಸಿಕೊಂಡು ಪಿಎಚ್.ಡಿ. ಮಾಡಲು ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದರು; 'ಗುರುಗಳೇ ನೀವೇ ಮಾರ್ಗದರ್ಶನ ಮಾಡಬೇಕು' ಎಂದರು. ಜತೆಗೆ ಆತ ಆ ವರ್ಷ ಪರೀಕ್ಷೆಗೆ ಬಂದಿದ್ದ ನೂರಾರು ಜನರಲ್ಲಿ ಮೊದಲ ಸ್ಥಾನ ಪಡೆದಿದ್ದರು. ಇಂತಹ ವಿದ್ಯಾರ್ಥಿಗಳು ಸಿಕ್ಕರೆ ನಾವು ಕಲಿಸುವುದು ಹೆಚ್ಚಿಗೆ ಇರುವುದಿಲ್ಲ, ಕಲಿಯುವುದೇ ಇರುತ್ತದೆ. ಆದರೆ ಯಾಕೋ ಏನೋ, ಹನುಮಂತಯ್ಯ ಅಡ್ಮಿಶನ್ ಆಗಲೇ ಇಲ್ಲ, ಕಾರಣ ಕೂಡ ತಿಳಿಸಲಿಲ್ಲ, ಆಮೇಲೆ ಅವರು ತಿಪಟೂರಿನ ಕಾಲೇಜಿನಲ್ಲಿ ಕೆಲಸಕ್ಕೆ ಸೇರಿಕೊಂಡ ಸುದ್ದಿ ಬಂತು. ತಮ್ಮ ಸಹಪಾಠಿಯನ್ನು ಪ್ರೇಮಿಸಿ ಮದುವೆಯೂ ಆದ ಸುದ್ದಿಯೂ ಬಂತು. ಒಳ್ಳೆಯ ಕವನಗಳನ್ನು ಬರೆಯುತ್ತ ಖ್ಯಾತರಾದ ಅವರು ಅನೇಕ ಕಾರ್ಯಕ್ರಮದಲ್ಲಿ ಭೇಟಿಯಾಗುತ್ತಿದ್ದರು. ಸೂಕ್ಷ್ಮವಾಗಿ ದಿಟ್ಟತನದಿಂದ ಮಾತಾಡುತ್ತಿದ್ದರು. ಎನ್ಕೆಯದು ಮೂಲತಃ ಹೆಂಗರುಳಾಗಿತ್ತು, ಒಮ್ಮೆ ಯಾವುದೊ ಚಲನಚಿತ್ರದಲ್ಲಿ ಅದರ ನಾಯಕನು ಒಂದು ಧರ್ಮದವರನ್ನು ಹೀಯಾಳಿಸುವ ಡೈಲಾಗನ್ನು ಕೇಳಿ, ಇದು ಹೇಗೆ ಸಾಧ್ಯ ಎಂದು ಅಪಾರ-ತಳಮಳವನ್ನು ವ್ಯಕ್ತಪಡಿಸುತ್ತ ಕಣ್ಣೀರು ಸುರಿಸಿದ್ದು ನೆನಪಾಗುತ್ತಿದೆ. ಅವರ 'ಚಿತ್ರದಬೆನ್ನು' ಕವನ ಸಂಕಲನ ಓದಿದಾಗ, ನಾನು ಅಲ್ಲಿನ ತಲ್ಲಣಗಳಿಗೆ ತತ್ತರಿಸಿಹೋದೆ. ಅಲ್ಲಿನ ಹೊಸತನಕ್ಕೆ ಬೆರಗಾಗಿ ಹೋದೆ. ಬಹಳ ದೊಡ್ಡ ಕವಿಯಾಗಿ ಬೆಳೆಯುವ ಪ್ರತಿಭೆಯಿದು ಎಂದು ಅನ್ನಿಸಿ ಅಭಿಮಾನವೆನಿಸುತ್ತಿತ್ತು, ಎನ್ಕೆ, ನಮ್ಮ ಸಮಾಜವನ್ನು ಕಟ್ಟುವುದಕ್ಕೆಂದು ಇರುವ ಪಡೆಯ ಒಬ್ಬ ಮುಂಚೂಣಿ ಸೈನಿಕನಂತೆ ತೋರುತ್ತಿದ್ದರು.

ಆದರೆ ಕ್ರಮೇಣ ಎನ್ಕೆಯ ಸ್ವಭಾವ ಮತ್ತು ಜೀವನದಲ್ಲಿ ಒಂದು ವಿಚಿತ್ರ ಪಲ್ಲಟ ಕಾಣಿಸತೊಡಗಿತು. ತಮ್ಮ ಜೀವನದಲ್ಲಿ ರೂಢಿಸಿಕೊಂಡ ಅಶಿಸ್ತಿನಿಂದಲೊ, ಸಣ್ಣದನ್ನೂ ಬೃಹದಾಕಾರವಾಗಿ ಪರಿಭಾವಿಸಿ ಒದ್ದಾಡುವ ಅತಿಸೂಕ್ಷ್ಮತೆಯಿಂದಲೊ, ಚಿಕ್ಕಪ್ರಾಯದಲ್ಲೇ ಸಿಕ್ಕ ಕೀರ್ತಿ ಮತ್ತು ಸಾರ್ವಜನಿಕ ಮನ್ನಣೆಯಿಂದಲೊ, ಸಂಸಾರವನ್ನು ಚೊಕ್ಕವಾಗಿ ನಡೆಸಲಾಗದೆ ಮಾಡಿಕೊಂಡ ಎಡವಟ್ಟಿನಿಂದಲೊ ಈ ಪರಿವರ್ತನೆ ಬಂದಿರಬಹುದು. ಅವರ ಕಾವ್ಯದ ಬದ್ಧತೆ ಬದುಕಿನಲ್ಲಿ ಕಾಣಲಿಲ್ಲ, ಪ್ರೀತಿಸಿ ಲಗ್ನವಾದ ಹುಡುಗಿ ಶೈಲಜ ಅವರಿಗೆ ನೋವಾಗುವಂತೆ ಅವರು ಒಂದು ಪ್ರೇಮಪ್ರಕರಣದಲ್ಲಿ ಸಿಲುಕಿಕೊಂಡರು. ಕುದಿತ, ಸಾಲ ಹೆಚ್ಚಾದವು. ಇದರಿಂದ ಅವರಿಗಾಗಿ ತನ್ನ ಜಾತಿಯನ್ನೂ, ಹೆತ್ತವರನ್ನೂ ಬಿಟ್ಟು ಧೀಮಂತಿಕೆ ಪ್ರಕಟಿಸಿದ ಹೆಣ್ಣುಮಗಳಿಗೆ ನೋವಾಗತೊಡಗಿತು. ಅವರಿಗೆ ಕರೆದು ಬುದ್ಧಿ ಹೇಳುವಷ್ಟು ನನಗೆ ಸಲುಗೆಯಿರಲಿಲ್ಲ, ಹನುಮಂತಯ್ಯ ಕೂಡ ಯಾರ ಕೈಗೂ ಸಿಗದೆ ಫೋನಿಗೂ ನಿಲುಕದೆ ತಪ್ಪಿಸಿಕೊಂಡು ತಿರುಗತೊಡಗಿದ್ದರು. ತಿಪಟೂರಿಗೆ ಹೋದಾಗ, ಶೈಲಜ ಅವರನ್ನು ಕಂಡು ನಾನು ಮತ್ತು ಬಾನು ನೈತಿಕ ಧೈರ್ಯ ಕೊಟ್ಟು, ನಿಮ್ಮ ಜತೆ ನಾವಿದ್ದೇವೆ ಎಂದು ಹೇಳಿದ್ದುಂಟು. ಆದರೆ ಅವರ ಮೂಲಕ ಎನ್ಕೆಯ ದುರ್ಬಲ ಮನಸ್ಸು, ಜಿದ್ದು, ಪಲಾಯನದ ಮಾತು, ಸೋತ ನುಡಿಗಟ್ಟು ಕೇಳಿದಾಗ, ಹನುಮಂತಯ್ಯ ಸಾಯುವ ಹಾದಿಯಲ್ಲಿ ಸಾಗುತ್ತಿದ್ದಾರೆಯೇ ಅನಿಸಿ ಗಾಬರಿಯಾಯಿತು. ಹನುಮಂತಯ್ಯ ಬೆಳೆಸಿಕೊಂಡ ಹೊಸ ಪ್ರೇಮ ಸಂಬಂಧವನ್ನು ಭಾವನೆ, ಪ್ರೇಮ ಇತ್ಯಾದಿ ಪರಿಭಾಷೆಯಲ್ಲಿ ಹೇಗೆ ವಿವರಿಸಿದರೂ, ಅದು ತನ್ನ ಸಂಗಾತಿಗೆ ಮಾಡಿದ ವಂಚನೆಯಾಗಿದ್ದು, ಅನೇಕ ನೈತಿಕ ಬಿಕ್ಕಟ್ಟುಗಳನ್ನು ಹುಟ್ಟುಹಾಕಿತು. ಆ ಬಿಕ್ಕಟ್ಟುಗಳಿಂದ ಪಾರಾಗಲು ಎನ್ಕೆ "ನಾನು ಮಾಡಿದ್ದೇ ಸರಿ" ಎಂಬ ಕೆಟ್ಟ ಧೈರ್ಯ ತಂದುಕೊಂಡರು; "ನನ್ನ ಖಾಸಗಿ ಬದುಕಿನಲ್ಲಿ ಯಾರೂ ಕೈಹಾಕಬೇಡಿ, ನನ್ನ ಪ್ರೇಮವನ್ನು ಸಂಪ್ರದಾಯಸ್ಥ ಕಣ್ಣುಗಳಿಂದ ನೋಡಬೇಡಿ" ಎಂಬಂತೆ ತನ್ನ ಸುತ್ತ ಒಂದು ವರ್ತುಲ ಬರೆದುಕೊಂಡು ಅದರೊಳಗೆ ರಕ್ಷಣಾತ್ಮಕವಾಗಿ ಉಳಿಯತೊಡಗಿದರು. ಹಾಗೆ ಮಾಡಿದರೂ, ತಾನು ಮಾಡಿದ್ದು ಸರಿಯಲ್ಲ ಎಂದು ಅಂತಃಸಾಕ್ಷಿ



ಆದಿಮದಲ್ಲಿ ತರಿಕೆರೆ ಮತ್ತು ಗೆಳೆಯರೊಂದಿಗೆ ಎನ್ಕೆ

ಪೀಡಿಸತೊಡಗಿ ಅವರು ಒಳಗೊಳಗೇ ನರಳತೊಡಗಿದ
ಅವರನ್ನು ಪ್ರೀತಿಸುವ ಎಲ್ಲರಲ್ಲೂ ಅವರ ಬಗ್ಗೆ ತಿರಸ
ಮೂಡತೊಡಗಿತು. ಗೆಳೆಯರ ಕಠೋರ ಮೌನವು ಅವ
ಒಂಟಿಮಾಡಿದಾಗ ಅವರು ಜರ್ಝರಿತರಾಗತೊಡಗಿದ
ಮೂಲತಃ ದುರ್ಬಲ ಮತ್ತು ಅತಿಭಾವುಕರಾದ ಅ
ಒಮ್ಮೊಮ್ಮೆ ದಿಕ್ಕುತೋಚದೆ ಫೋನಿನಲ್ಲಿ ಅಳುತ್ತಿದ್ದುದುಂ
ಇವೆಲ್ಲ ಗೋಜಲುಗಳಿಂದ ಅವರು ತನಗೇ ತಿಳಿಯ
ಸಾವಿನತ್ತ ಚಲಿಸತೊಡಗಿದರು. ಅವರು ಸಾವಿನ
ಹೋರಾಡುತ್ತಿರುವಾಗಲೂ, ಮರಳಿ ಬರಬಹುದು ಎ
ನಾವು ಆಸೆಯಿಟ್ಟದ್ದೆವು. ಆದರೆ ಹನುಮಂತಯ್ಯ ತ
ಪ್ರೀತಿಸಿ ಮದುವೆಯಾದ ಹೆಣ್ಣನ್ನೂ, ತನ್ನ ಕರುಳಕುಡಿಯ
ತಾನೇ ಮೇಲೆಬಿದ್ದು ಪ್ರೀತಿಸಿದ ಜೀವವನ್ನೂ ಏಕಕಾ
ಹೊಲಬುಗೆಡಿಸಿ ಹೊರಟುಬಿಟ್ಟರು.

ಯಾಕೆ ಇಷ್ಟು ಚಂದಾಗಿ ಪದ್ಯ ಬರೆಯುವ
ಹುಡುಗ ಹೀಗೆ ಬಾಳಲು ಬಾರದಂತೆ ಭಗ್ನವಾಗಿ ಹೋ
ಬರೆಹಕ್ಕಿಂತ ಬದುಕು ಮುಖ್ಯವೆಂದು ತಿಳಿಯದೇ ಹೋ
ನಮ್ಮ ಹೊಸಲೇಖಕರ ಮುಂದೆ ಬಲವಾದ ಸಾಮ
ರಾಜಕೀಯ ಚಳುವಳಿಗಳು ಇಲ್ಲದಿರುವುದೇ ಹೀಗೆ ವೈ
ನೋವನ್ನೇ ದೊಡ್ಡದು ಮಾಡಿಕೊಳ್ಳಲು ಕಾರಣವಾಯಿ
ನಮ್ಮ ವೈಯಕ್ತಿಕ ಸಮಸ್ಯೆಗಿಂತ ದೊಡ್ಡ ಸಮಸ್ಯೆ
ಒಟ್ಟು ಸಮುದಾಯಕ್ಕೆ ಸಂಬಂಧಿಸಿ ಇವೆ. ಅವು
ನಾನು ತೊಡಗಿಸಿಕೊಳ್ಳಬೇಕು ಎಂಬ ನೆದರಿದ್ದರೆ
ಸಾವನ್ನು ಆಹ್ವಾನಿಸಿಕೊಳ್ಳಬೇಕು ಅನಿಸುತ್ತಿತ್ತೇ? ಅ
ಎನ್ಕೆಯವರ ಒಳಗೆ ನಾಟಕಕಾರ ಸಂಸರಿಗಿದ್ದಂತೆ. ನ
ಯಾರೊ ಬೇಟೆಯಾಡುತ್ತಿದ್ದಾರೆ ಅವರಿಂದ ತಪ್ಪಿಸಿಕೊಳ್ಳ
ಎಂಬ ಫೋಬಿಯಾ ಇದ್ದು ಅದುವೇ ಸ್ವಹತ
ಕರೆದುಕೊಂಡು ಹೋಯಿತೇ? ಪಶ್ಚಿಮದ ಸಮಾ
ಇರುವಂತೆ ನಾವು ಮಾಡಿದ ತಪ್ಪನ್ನು ಪ್ರಾಂಜ
ಒಪ್ಪಿಕೊಂಡು ಕ್ಷಮೆ ಕೇಳುವ ಗುಣವು ನ
ಇಲ್ಲದಿರುವುದೇ ಹೀಗೆ ಕೆಟ್ಟ ಹಟಕ್ಕೆ ಕರೆದುಕೊ

ಈ ದಾಂಪತ್ಯದ ಜಗಳ ನಡೆದಿದ್ದಾಗಲೇ ಮೈಸೂರಿನ ಮಿತ್ರರು ಒಂದೆರಡು ರೀತಿಯ ರಾಜಿ ಸಂಧಾನ ಚಿಸಿದ್ದರು. ಎನ್ಕೆ ತನಗೆ ಬೇಕಾದಂತೆ ಹೊಸ ಜೀವನ ಭಿಸುವಂತೆಯೂ, ಶೈಲಜಾರಿಗೆ ಜೀವನಾಂಶ ನೀಡು ತೆಯೂ ಮಾತುಕತೆಗಳಾಗಿ ಅದನ್ನು ಎಲ್ಲರೂ ಒಪ್ಪಿ ುದು ಆಗಿತ್ತು. ಆದರೆ ನಡುವೆ ಏನಾಯಿತೊ, ಏನೋ ೀರನೆ ಮತ್ತೆ ವಿವಾದ ಸ್ಫೋಟಿಸಿದೆ.

ಜೊತೆಯಾಗಿಯೇ ಇದ್ದಿದ್ದರೆ ಚೆಂದಾಗೆ ಇರಬಹುದಾಗಿದ್ದ ವಾ ಬೇರೆಯಾಗುವುದು ಅನಿವಾರ್ಯವಾಗಿದ್ದಲ್ಲಿ ಪರಸ್ಪರ ತೆಯಿಂದಲೇ ದೂರಾಗಬಹುದಾಗಿದ್ದ ಸಾಧ್ಯತೆಗಳನ್ನು ವಾಗಿಸಿಕೊಂಡುಬಿಟ್ಟರು ಈ ದುರಂತ ಘಟನೆಯ ಧಾರಿಗಳು....

ಸಾವೊಂದೇ ಎನ್ಕೆಗೆ ಆಯ್ಕೆಯಾಗಬೇಕಿರಲಿಲ್ಲ. ಅದೇರೀತಿ ುವುದರ ಹೊರತಾಗಿ ಆತನೆದುರು ಬೇರೆ ಪರಿಹಾರವೇ ದೆಂಬಂತ ಸ್ಥಿತಿಯನ್ನು ಸೃಷ್ಟಿಸುವ ಅಗತ್ಯವೂ ಉಳಿದವರಿ ಲ್ಲ. ಎನ್ಕೆಯ ಸಾವಿನ ಸುದ್ದಿ ಕೇಳಿ ಗೆಳತಿ ಅನಸೂಯ ಕ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದರು. ೀಗ ಸ್ವಲ್ಪದರಲ್ಲೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ವಿವೇಕವಂತ ಗೆಳೆಯರ ಬಳಗ, ಅಪಾರ ಹಿತೈಷಿಗಳ ಜಿ ಇವೆಲ್ಲಾ ಹೊಂದಿದ್ದರೂ ಎನ್ಕೆಗೆ ತನ್ನ ಬದುಕಿನ ಲೆ ನಿಯಂತ್ರಣ ಏರ್ಪಡಿಸಿಕೊಳ್ಳಲು ಆಗದೇ ಯಿತು. 'ಗೋವನ್ನು ತಿಂದು ಗೋವಿನಂತಾದವನು' ು ಮನಮಿಡಿಯುವ ಪದ್ಯಗಳೊಂದಿಗೆ 'ಒಬಾಮ ಕಮಾಮ' ಎಂಬ ಪೆದ್ದು ಸಾಲುಗಳನ್ನು ಬರೆಯಬಲ್ಲವ ನ್ನ ಎನ್ಕೆಗೆ ಕವಿತ್ವ ಹಾಗೂ ಬದುಕಿನ ಅನೇಕ ಪಾಠಗಳನ್ನು ಕಲಿಯುವುದಿತ್ತು. ದಲಿತ ಹಿನ್ನೆಲೆಯ ಎನ್ಕೆ ಕವಿಯಾಗಿ ಸಾಧಿಸಿದ್ದರೊ ಅದಕ್ಕಿಂತಾ ಹೆಚ್ಚೆ ಕೀರ್ತಿ ಪಡೆದಿದ್ದರು. ರಿಂದ ಬುದ್ಧಿಜೀವಿ ಎನಿಸಿಕೊಂಡಿದ್ದರು. ಆದರೂ ತ್ನಿ ಶೈಲಜಾ ಹಾಗೂ ಮಗಳ ವಿಚಾರದಲ್ಲಿ ಪೆದ್ದನಂತೆ, ವಾಗಿ ವರ್ತಿಸಿದ್ದರು. ಜೀವನಾನುಭವವನ್ನು ತಿಳಿವಳಿಕೆ ಬೆಳೆಸಿಕೊಳ್ಳದೆ ಹೋಗುವವರು ತಮ್ಮ ಬದುಕನ್ನು ೂ ಸುತ್ತಲಿನವರ ಬದುಕನ್ನು ಒಟ್ಟಿಗೆ ನಾಶಮಾಡುತ್ತಾರೆ. ಎನ್ಕೆ ಬದುಕೇ ಇದಕ್ಕೆ ಸಾಕ್ಷಿ.

• ಪಾರ್ವತೀಶ

ಗುತ್ತದೆಯೇ? ಅಥವಾ ನಮಗೇ ಎನ್ಕೆಯನ್ನು ಸರಿಯಾಗಿ ಮಾಡಿಕೊಳ್ಳಲು ಆಗಲಿಲ್ಲವೇ?

ಶೈಲಜ ನೇರ ನಡೆಯ ನೇರ ನುಡಿಯ ಹುಡುಗಿ. 'ಕಿಚ್ಚಿಲ್ಲದ ಬೇಗೆ' ಎಂಬ ಆತ್ಮಕಥನ ಓದಿ ನಾನು ಧೀಮಂತಿಕೆಗೆ ಬೆರಗಾಗಿದ್ದೆ. ನಾನು ತಿಪಟೂರಿನಲ್ಲಿ ಶೈಲಜ ಅವರ ಬಾಡಿದ ಮುಖವೂ ಮತ್ತು ಅವರ ಕಂಗೆಟ್ಟ ಮುಖವೂ ನೆನಪಾಗುತ್ತಿದೆ. ಅವರು ನನ್ನ ಆ ಮೊದಲಿನ ಹನುಮಂತಯ್ಯ ಬೇಕು" ಹಠದಿಂದ ಹೇಳಿದ್ದು ನೆನಪಾಗುತ್ತಿದೆ. ಇದು ಲಂಕೇಶರ 'ಸಂಕ್ರಾಂತಿ' ನಾಟಕದ ಒಂದು ಗವನ್ನು ನೆನಪಿಸುತ್ತಿದೆ. ಅದರಲ್ಲಿ ದಲಿತನಾದ ರುದ್ರನು ಣ್ಣನ ಪ್ರಭಾವಕ್ಕೆ ಸಿಕ್ಕು ಶರಣನಾದ ಬಳಿಕ, ಅವನನ್ನು ದಲಿತತ್ವದ ಜತೆಗೇ ಕೇವಲ ಒಬ್ಬ ಗಂಡೆಂದು ವಿಸಿ ಪ್ರೇಮಿಸಿದ್ದ ಉಷೆ "ನನಗೆ ನನ್ನ ಮೊದಲಿನ ಬೇಕು. ಈ ಶರಣ ರುದ್ರ ಬೇಡ" ಎಂದು ಹೇಳುತ್ತಾಳೆ. ಶೈಲಜ ಅವರಿಗೆ ಅವರನ್ನು ಪ್ರೇಮಿಸಿ ಮಂತಯ್ಯನೂ ಸಿಗಲಿಲ್ಲ; ನಂತರ ಬದಲಾಗಿದ್ದ ನುಂತಯ್ಯನೂ ಉಳಿಯಲಿಲ್ಲ. ಅವರು 'ಕಿಚ್ಚಿಲ್ಲದ ಯಲ್ಲಿ ಬೇಯುವ ಸ್ಥಿತಿಯಲ್ಲೇ ಉಳಿದರು. 'ಕಿಚ್ಚಿಲ್ಲದ ಇದು ಅಕ್ಕಮಹಾದೇವಿಯಾಡಿದ ಮಾತು. ಶೈಲಜ ಬಾಳಿನ ಹೋರಾಟಕ್ಕೆ ಹೊಂದಿಕೊಳ್ಳುವ ರೂಪಕ. ವೆಂದರೆ ಸ್ವತಃ ಹನುಮಂತಯ್ಯ ಸಹ ಹಾದೇವಿಯಂತೆ 'ತೆರಣಿಯ ಹುಳು' ತನ್ನ ನೂಲ ಸುತ್ತಿಸುತ್ತಿ ಸಾವತೆರನಂತೆ ಸಾವಿಗೆ ಸಂದು ಹೋಗಿದ್ದು. ಬದುಕಿದ್ದರೆ, ಹೀಗೆ ಮಾಡಬಹುದೇನಣ್ಣಾ ಎಂದು ಕೇಳಬಹುದಿತ್ತು. ಆದರೆ ತನ್ನ ದುಡುಕಿಗೆ, ಅಶಿಸ್ತಿಗೆ, ತೆಗೆ ತನ್ನನ್ನೇ ಬಲಿಗಂಬಕ್ಕೆ ಏರಿಸಿಕೊಂಡವರನ್ನು ಟಕಟೆಯಲ್ಲಿ ನಿಲ್ಲಿಸಿ ಏನೆಂದು ಕೇಳುವುದು? ಎನ್ಕೆಯ ನೈತಿಕವಾಗಿ ಸರಿತಪ್ಪುಗಳ ಪರಿಭಾಷೆಯಲ್ಲಿ ಸುವುದೇ ಕಷ್ಟವಾಗುತ್ತಿದೆ. ಆದರೆ ಜೀವಬಿಡುವ ಅವರು ಪಟ್ಟ ಅಪಾರ ಸಂಕಟ ಮತ್ತು ಈಗ ಸತ್ತು ರುವವರಿಗೆ ಕೊಟ್ಟಿರುವ ಅಪಾರ ವೇದನೆ ಎರಡೂ ುತ್ತಿವೆ. ಆಕ್ರೋಶ ತರಿಸುತ್ತಿವೆ. ಬಹಳ ದೊಡ್ಡ ನಾಗಿ ಬೆಳೆದು ನಾಡಿಗೆ ಕೀರ್ತಿ ತರುವ ಕವಿಯೊಬ್ಬ ದನಲ್ಲ ಎಂದಲ್ಲ; ನಮಗೆಲ್ಲ ತನ್ನ ಬಾಳಿನಿಂದಲೂ ಯಿಂದಲೂ ಪ್ರೇರಿಸುವ ಶಕ್ತಿ ಮತ್ತು ಸಾಧ್ಯತೆಯಿದ್ದ ುಷ್ಯ ಸಂಯಮಗೆಟ್ಟು ಉಧ್ವಸ್ತನಾದನಲ್ಲಾ ಎಂದು. ಂದು ಕಿಚ್ಚುಸಾವು.


(ಸೌಜನ್ಯ: ಕೆಂಡಸಂಪಿಗೆ)

• ಡಾ.ರಹಮತ್ ತರೀಕೆರೆ

ಎಲ್ಲರ ಆಸೆ ಸುಳ್ಳು ಮಾಡಿದ ಎನ್.ಕೆ

ಸದಾ ಹಸಿದವನಂತೆ ತಿರುಗಾಡುತ್ತಿದ್ದ ಎನ್.ಕೆ. ಹನುಮಂತಯ್ಯ ತನ್ನ ಬದುಕಿನ ನೇಯ್ಗೆಯಿಂದ ಬಿಟ್ಟುಹೋದ ಯಾವುದೋ ಎಳೆಯೊಂದನ್ನು ಹುಡುಕುತ್ತಿದ್ದಂತೆ, ಅದಕ್ಕಾಗಿ ತುಂಬಾ ದಣಿದವನಂತೆ ಕಾಣಿಸುತ್ತಿದ್ದರು.

ಈ ಕ್ಷಣದಲ್ಲಿಯೂ ಎನ್.ಕೆ. ಹನುಮಂತಯ್ಯ ನಮ್ಮೊಂದಿಗಿಲ್ಲ ಎಂಬುದನ್ನು ನಂಬಲಾಗುತ್ತಿಲ್ಲವಾದರೂ ಈ ಕಹಿಯನ್ನು ನನ್ನಂಥವರು ನುಂಗಲೇಬೇಕಾಗಿದೆ.


ಎನ್ಕೆ


ಕವಿ ಹನುಮಂತಯ್ಯನ ಬಗೆಗೆ ಮಾತನಾಡದೆ ತಿಪಟೂರಿನ ಕಲ್ಪತರು ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಅಧ್ಯಾಪನ ವೃತ್ತಿಯಲ್ಲಿದ್ದ ಹನುಮಂತಯ್ಯನ ಬಗೆಗೆ ಬರೆಯಲಾಗದು. ಮತ್ತು ಹಾಗೆ ಬರೆಯಬಾರದು. ಅಷ್ಟರಮಟ್ಟಿಗೆ ಹನುಮಂತಯ್ಯ ಮತ್ತು ಆತನ ಕಾವ್ಯದ ಸಂಬಂಧ ಗಾಢವಾಗಿದೆ.

ಹಿಮದ ಹೆಜ್ಜೆ (1997), ಚಿತ್ರದಬೆನ್ನು (2006) ಕವನ ಸಂಕಲನಗಳನ್ನು ಪ್ರಕಟಿಸಿದ್ದ ಹನುಮಂತಯ್ಯ ಆ ಮೂಲಕ ದಲಿತ-ಬಂಡಾಯೋತ್ತರ ಕನ್ನಡ ಕಾವ್ಯಕ್ಕೊಂದು ಹೊಸ ಆಯಾಮವನ್ನು ತಂದುಕೊಟ್ಟರು. ಸವಕಲು ನುಡಿಗಟ್ಟು, ಘೋಷಣೆ ಮತ್ತು ಸಿದ್ಧ ಮಾದರಿಗಳನ್ನು ಭಂಜಿಸಿ ಕಾವ್ಯದ ಹಾದಿಯಲ್ಲಿ ಮುನ್ನಡೆ ಸಾಧಿಸಿದ್ದ ಹನುಮಂತಯ್ಯ ಹೊಸ ಕಾವ್ಯಮಾರ್ಗವೊಂದನ್ನು ಸೃಷ್ಟಿಸಿಕೊಳ್ಳುವ ಹಂಬಲದಲ್ಲಿ ಕ್ರಿಯಾಶೀಲರಾಗಿದ್ದರು. ಹಾಗಾಗಿಯೇ ಅವರಿಗೆ 'ಗೋವು ತಿಂದು ಗೋವಿನಂತಾದವನು' ಎನ್ನುವ ಮಹಾಪ್ರತಿಮೆಯನ್ನು ಕಟೆಯಲು ಸಾಧ್ಯವಾಯಿತು. ಅಷ್ಟೇ ಅಲ್ಲ, 'ಅಲ್ಲಿ ಆ ಗಿಡದಲ್ಲಿ/ನೂಲಿನ ಗಾತ್ರದ ಕಡ್ಡಿಯ ಮೇಲೆ/ ಉಯ್ಯಾಲೆಯಾಡುವ ಹಕ್ಕಿಯೆ/ ಕಡ್ಡಿ ಮುರಿಯದೆ ಆಡುವ ನಿನ್ನ/ ತೂಕಕ್ಕೆ ಶರಣು' ಎಂದು ಕಾಣುವಷ್ಟು ಸೂಕ್ಷ್ಮತೆಯ ಆಳವೂ ಕವಿ ಹನುಮಂತಯ್ಯನಿಗೆ ದಕ್ಕಿತ್ತು. ಕವಿತೆ ಬರೆಯುವುದು ಒಂದು ವ್ಯಸನವಾದೀತು ಅಥವಾ ಬರೀ ಕೌಶಲದ ಚಮಕಿಯಾದೀತು ಎನ್ನುವ ಎಚ್ಚರವಿದ್ದ ಹನುಮಂತಯ್ಯ ನಮ್ಮ ವರ್ತಮಾನವನ್ನು ಎಚ್ಚರದಲ್ಲಿ ಗಮನಿಸುತ್ತಿದ್ದರು. ಅದು ಹೊಸತಲೆಮಾರಿನ ಬರಹಗಳ ಬಗೆಗಾಗಲಿ, ಜಾಗತೀಕರಣ, ಖಾಸಗೀಕರಣ ವಿಚಾರವಾಗಲಿ, ಗೋಹತ್ಯೆ ನಿಷೇಧ ಸಂಬಂಧವಾಗಲಿ, ಎಡಗೈ-ಬಲಗೈ ಸಂಘರ್ಷದ ಬಗೆಗಾಗಲಿ, ಆನು ದೇವಾ..... ವಿವಾದವಾಗಿರಲಿ, ಕೋಮುವಾದದ ವಿಷಯವಾಗಿರಲಿ ಹನುಮಂತಯ್ಯ ಖಚಿತವಾಗಿ ಜನಪರವಾಗಿ ತನ್ನ ಮಾತುಗಳನ್ನಾಡುತ್ತಿದ್ದರು ಮತ್ತು ವಿಚಾರ ಮಂಡಿಸುತ್ತಿದ್ದರು. ಇಂತಹ ಸಂದರ್ಭದಲ್ಲಿಯೆ ನನ್ನಂತ ಹಲವರಿಗೆ ಹನುಮಂತಯ್ಯ ದಮನಿತ ಸಮುದಾಯಗಳ ಯುವ ನಾಯಕನಂತೆ ಕಾಣಿಸುತ್ತಿದ್ದರು.

ಕವಿ ಎಂದು ಜನಪ್ರಿಯತೆ ಗಳಿಸಿದ್ದರೂ ತನ್ನ ಬದುಕಿಗೆ ಭದ್ರತೆಯನ್ನು ಒದಗಿಸಿಕೊಡುವ ಸರ್ಕಾರಿ ಕೆಲಸವಿಲ್ಲ ಎನ್ನುವ ನೋವು ಬಹಳಸಲ ಹನುಮಂತಯ್ಯನನ್ನು ಕಾಡಿತ್ತು, ಹೀಗಿದ್ದರೂ ಕಲ್ಪತರು ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಾ, ಊರುಕೇರಿ ಪತ್ರಿಕೆ, ಊರುಕೇರಿ ಪ್ರಕಾಶನ ಇಂಥವುಗಳಲ್ಲಿ ಅರೆಬರೆಯಾಗಿ ತೊಡಗಿಸಿಕೊಂಡು ಹಾಡು, ಹೇಳುತ್ತಾ, ಸುತ್ತಲಿನವರನ್ನು ಗೇಲಿಮಾಡುತ್ತಾ ಎಲ್ಲರೊಂದಿಗೂ ಬೆರೆಯುತ್ತಿದ್ದ ಹನುಮಂತಯ್ಯ ಯಾರೊಂದಿಗೂ ತನ್ನ ಒಳಗನ್ನು ಪೂರ್ತಿ ತೋರಲಿಲ್ಲ, ಬೇರೆಯವರಿಗಿರಲಿ ಸ್ನೇಹಿತರಿಗೂ ಗ್ರಹಿಸಲು ಸಾಧ್ಯವಿರಲಿಲ್ಲ,

ಕಾವ್ಯದ ಬಗೆಗೆ ಹಿರಿಯರು ಆಡುವ ಬೆಚ್ಚನೆಯ ಮಾತುಗಳನ್ನು ಕೇಳಿಸಿಕೊಂಡಾಗಲೂ ಸಂಕೋಚದೊಳಗೆ ಹುದುಗಿಹೋಗುತ್ತಿದ್ದ ಹನುಮಂತಯ್ಯ ಕನ್ನಡ ಸಾಹಿತ್ಯ ಪರಿಸರದೊಳಗೆ ದೊಡ್ಡ ಬಳಗವನ್ನೇ ಹೊಂದಿದ್ದರು. ಇದಕ್ಕೆ ಕಾರಣ ನಮ್ಮ ಅನೇಕ ಹಿರಿಯ ದಲಿತ ಬರಹಗಾರರಲ್ಲಿರುವ ಸಿನಿಕತೆ, ಜಾತಿಯನ್ನೂ ಸಾಧನವಾಗಿ ಬಳಸಿಕೊಳ್ಳುವ ಸಂಕುಚಿತ ಮನೋಭಾವ ಇವುಗಳನ್ನು ನಿಜವಾಗಿ ಮೀರಿದ್ದರಿಂದಲೇ ಹನುಮಂತಯ್ಯನಿಗೆ ದಲಿತ ಜಗತ್ತಿನ ಆಚೆಗೆ ತೆರೆದುಕೊಳ್ಳಲು ಮತ್ತು ಯೋಚಿಸಲು ಸಾಧ್ಯವಾಗಿತ್ತು. ಯಾವ ದಿಕ್ಕಿನಿಂದ ನೋಡಿದರೂ ಉದಯಕಾಲದ ಭರವಸೆಯಾಗಿ ಕಂಗೊಳಿಸುತ್ತಿದ್ದ ಕವಿ ಹನುಮಂತಯ್ಯನ ಬದುಕು ಹೇಗಿತ್ತು? ಆತ ಎಡವಿದ್ದು ಎಲ್ಲಿ? ಆತನ ವೈಯಕ್ತಿಕತೆ ಮುಕ್ಕಾಗಿದ್ದು ಎಲ್ಲಿ? ಎಂದು ಹೇಳಿಬಿಡುವುದು ಸುಲಭವಲ್ಲ. ಹನುಮಂತಯ್ಯನ ಬದುಕು ತಾರ್ಕಿಕ ನೆಲೆಯಲ್ಲಿಯೊ, ಸರಿ ತಪ್ಪುಗಳ ತಕ್ಕಡಿಯಲ್ಲಿಯೊ ಬಗೆಹರಿಯುವಂಥದ್ದು ಆಗಿರಲಿಲ್ಲ, ಆದರೆ ಅದಕ್ಕೊಂದು ನೋವಿನ ವಿಷಾದ ಹಿನ್ನೆಲೆಯಿತ್ತು ಜೊತೆಗೆ ಸಾಕಷ್ಟು ಕಗ್ಗಂಟಾಗಿತ್ತು.

ಸಣ್ಣ ಕ್ರಾಂತಿಯ ರೂಪದಲ್ಲಿ ಲಿಂಗಾಯತ ಸಮುದಾಯಕ್ಕೆ ಸೇರಿದವರೊಂದಿಗೆ ಹನುಮಂತಯ್ಯ ಅಂತರ್‌ಜಾತಿ ವಿವಾಹವಾಗಿದ್ದರು. ತಿಪಟೂರಿನ ಕಾಲೇಜಿನಲ್ಲಿ ಕಾವ್ಯ, ಮದ್ಯ ಹಾಗೂ ತನ್ನ ಕುಟುಂಬದೊಂದಿಗೆ ಸುಖಿಯಾಗಿರುವಂತೆ ಹನುಮಂತಯ್ಯ ಕಾಣಿಸುತ್ತಿದ್ದರು ಅಥವಾ ಹಾಗೆ ನಟಿಸುತ್ತಿದ್ದರು. ಮೈಸೂರಿನ ಗೆಳೆಯರನ್ನು ನೋಡಲು ಆವಾಗಾವಾಗ ಬರುತ್ತಿದ್ದ ಹನುಮಂತಯ್ಯ ಮರಳಿ ಊರಿಗೆ ಹೋಗುವಾಗಲ್ಲೆಲ್ಲಾ ಸಾಕಷ್ಟು ತಿಂದು, ಕುಡಿದು ವಿಷಾದದಲ್ಲಿಯೇ ಹೋಗುತ್ತಿದ್ದರು.


ಎನ್ಕೆ

ಅವರ ಮಾತುಗಳು ಸುತ್ತಿ ಬಳಸಿ ಸಾವಿನ ಸುತ್ತಲೇ ತಿರುಗುತ್ತಿತ್ತು ಇಲ್ಲವಾದರೆ ಭವಿಷ್ಯ ಕಾಲದಲ್ಲಿರುತ್ತಿತ್ತು! ಹಲವು ಮಹತ್ವಾಕಾಂಕ್ಷೆ ಹಿಡಿದು ಮಹಾನಗರದಲ್ಲಿ ನೆಲೆನಿಲ್ಲಬೇಕು ಎನ್ನುವವರೆಗೆ ಬಾಚಿಕೊಂಡಿತ್ತು, ಹಾಗಾಗಿಯೇ ಯಾವಾಗ ನೋಡಿದರೂ ಅತೃಪ್ತಿಯ ಮಡುವಿನಲ್ಲಿ ಬಿದ್ದಂತೆ ಹನುಮಂತಯ್ಯ ಇರುತ್ತಿದ್ದರು.

ಮಧ್ಯರಾತ್ರಿಯಾಗಿರಲಿ, ಬೆಳಗಿನ ಜಾವವಿರಲಿ ತೀವ್ರವಾಗಿ ಕವಿತೆ ಬರೆದು ಮೊಬೈಲ್‌ನಲ್ಲಿ ಹೇಳುತ್ತಿದ್ದ ಹನುಮಂತಯ್ಯ ಕವಿತೆಯ ಆಚೆಗೂ ಮತ್ತೇನೋ ನನಗೆ ಬೇಕಾಗಿದೆ ಎನ್ನುವಂತೆ ಚಡಪಡಿಸುತ್ತಿದ್ದರು. ಇದನ್ನು ಅವರ ಈಚಿನ ಕವಿತೆಗಳು ವ್ಯಕ್ತಪಡಿಸುತ್ತಿದ್ದವು. ಆದರೆ ಕಳೆದ ವರ್ಷದಿಂದೀಚೆಗೆ ಹನುಮಂತಯ್ಯನ ನಡಾವಳಿಯಲ್ಲಿ ಊಹಿಸಲಾರದ ಏರುಪೇರು ಕಾಣಿಸುತ್ತಿತ್ತು, ಮೇಲಿಂದ ಮೇಲೆ ಬದಲಿಸುತ್ತಿದ್ದ ಸಿಮ್‌ಕಾರ್ಡ್, ನರಳುದನಿಯಲ್ಲಿ ಹಾಡುತ್ತಿದ್ದ ಪದ್ಯಗಳು, ಮಾತನಾಡುವಾಗ ಇರುತ್ತಿದ್ದ ಅಸ್ಪಷ್ಟತೆ- ಈ ಎಲ್ಲವೂ ಹನುಮಂತಯ್ಯ ಮೊದಲಿನಷ್ಟು ಸಹಜವಾಗಿಲ್ಲ ಎಂಬುದನ್ನು ಹೇಳುತ್ತಿದ್ದವು. ಈ ಮಧ್ಯೆ ಕೆಲವೇ ತಿಂಗಳ ಹಿಂದೆ ಕೆಪಿಎಸ್‌ಸಿಯಲ್ಲಿ ಹನುಮಂತಯ್ಯ ಪದವಿ ಕಾಲೇಜಿಗೆ ಆಯ್ಕೆಯಾದರು. ನನ್ನ ಹಾಗೆ ಹಲವರು ಇಲ್ಲಿಗೆ ಹನುಮಂತಯ್ಯನ ಕಷ್ಟದ ದಿನಗಳು ಮುಗಿದವು ಎಂದುಕೊಂಡಿದ್ದೆವು. ಆದರೆ ತಡವಾಗಿ ಸಿಕ್ಕಿದ ಈ ನೌಕರಿ ಹನುಮಂತಯ್ಯನಿಗೆ ವಿಚಿತ್ರವಾದ ಉಡಾಫೆಯನ್ನು ಕೊಡುವುದರ ಜೊತೆಗೆ ಮತ್ತೊಂದು ಮದುವೆಯಾಗಲು ರೆಕ್ಕೆಪುಕ್ಕಗಳನ್ನು ಕೊಟ್ಟಿದ್ದು ಮುಂದೆ ಆತನ ಬದುಕನ್ನೇ ಕಿತ್ತುಕೊಂಡಿತು. ಈ ವಿಚಾರದಲ್ಲಿ ತನ್ನ ಆಯ್ಕೆ ಸರಿಯಾದದ್ದು ಎಂದು ಎಲ್ಲರಿಗೂ ಅರ್ಥ ಮಾಡಿಸಲು ಹನುಮಂತಯ್ಯ ಕಡೆತನಕ ಒದ್ದಾಡುತ್ತಿದ್ದರು. ಇದು ತನ್ನ ಮೊದಲಿನ ಇಮೇಜ್‌ಗೆ ಧಕ್ಕೆತರುತ್ತದೆ ಎನ್ನುವ ಆತಂಕವೂ ಅವರಲ್ಲಿತ್ತು.

ಕಳೆದ ಹದಿನೈದು ದಿನದಿಂದಷ್ಟೇ ಅನೇಕ ಸ್ನೇಹಿತರಿಗೆ 'ನನಗೆ ಹಣದ ಅವಶ್ಯಕತೆಯಿದೆ ಸಹಾಯ ಮಾಡಿ' ಎಂದು ಹನುಮಂತಯ್ಯ ಎಸ್‌ಎಂಎಸ್ ಕಳುಹಿಸಿ ಕೇಳಿಕೊಂಡಿದ್ದರು. ಇದಕ್ಕೆ ಅನೇಕರು ಸದ್ಯ ಹನುಮಂತಯ್ಯ ಮತ್ತೊಂದು ಮದುವೆಗೆ ತಯಾರಿ ನಡೆಸುತ್ತಿರುವ ವಿಷಯ ತಿಳಿದು ಸ್ಪಂದಿಸದೆ ಹೋದರು.

ಕ್ರಮೇಣ ಕಾಲವೆನ್ನುವುದು ಎಲ್ಲವನ್ನು ಸರಿ ಮಾಡುತ್ತದೆ. ಹನುಮಂತಯ್ಯನ ಸಂಸಾರ ಸರಿದೂಗಿಸಿಕೊಂಡು ಹೋಗಲಿದೆ ಎಂದುಕೊಂಡದ್ದು ಸುಳ್ಳಾಯಿತು. ಸಂಸಾರದ ನಿರ್ವಹಣೆಯಲ್ಲಿ ಪೂರ್ತಿ ಸೋತುಹೋಗಿದ್ದ ಹನುಮಂತಯ್ಯ ಸಂಬಂಧಗಳ ವಿಷಯದಲ್ಲಿ ಪ್ರಾಮಾಣಿಕತೆಯನ್ನು ಕಳೆದುಕೊಂಡಿದ್ದರು. ತಾನು ಕಟ್ಟಿಕೊಂಡಿದ್ದ ವೈಯಕ್ತಿಕತೆ ಪೊಳ್ಳು ಎನಿಸಿದಾಗಲೊ ಏನೋ ಹನುಮಂತಯ್ಯ ಆತ್ಮಹತ್ಯೆಯ ಮೊರೆ ಹೋಗಬೇಕಾಯಿತು. ಬೆನ್ನು ತಿರುಗಿಸಬೇಕಾಯಿತು.

'ಅಗ್ನಿ ಮಾಂಸದ ಕುಲುಮೆಯಲಿ
ನನ್ನ ಕಾಯಿಸಿ ಬಣ್ಣವ ಮಾಡಿ
ಮರಳಿ ನನ್ನ ರೂಪವೇ ಕಡೆವ
ಏ ನನ್ನಾಳದ ಅಳುವೇ
ನನ್ನ ಚಿತ್ರಕ್ಕೇಕೆ ಬೆನ್ನು ಬರೆವೆ'

ಹೀಗೆ ಬರೆದುಕೊಂಡ ಕವಿಗೆ ತಾನು ಇಲ್ಲಿ ಬಹಳಕಾಲ ಉಳಿಯುವುದಿಲ್ಲ ಎಂಬುದು ಮೊದಲೇ ಗೊತ್ತಿತ್ತೆ?

ಕವಿ ಎನ್.ಕೆ. ಹನುಮಂತಯ್ಯ ದುಡುಕಿ ತೆಗೆದುಕೊಂಡ ತೀರ್ಮಾನ ಇವತ್ತು ಹಲವರನ್ನು ಕಂಗೆಡಿಸಿದೆ. ಆಕಸ್ಮಾತ್ ವಿಷ ಕುಡಿದು ಆನಂತರ ಎನ್.ಕೆ. ಬದುಕಿಬಿಟ್ಟಿದ್ದರೆ, 'ಇದು ದಂಗೆ, ಮಹಾನ್ ಸ್ವಾತಂತ್ರ್ಯದ ಶೋಧ, ಹಂಬಲ.....' ಎಂದು ಖಂಡಿತ ಹೇಳುತ್ತಿದ್ದರು.


ಏಕೆಂದರೆ

ಅವರು ತನಗೆ ಬೇಕಾದ ಸ್ವಾತಂತ್ರಕ್ಕಾಗಿ ಹೋರಾಡುತ್ತಿದ್ದರು.

ಕಡೆಗೆ ಅದನ್ನೆ ಆಯ್ಕೆ ಮಾಡಿಕೊಂಡರು.

• ಆರ್. ಸುಧೀಂದ್ರಕುಮಾರ್

ರಾಜ್ಯವನ್ನು ಲೂಟಿಗೈಯ್ಯುತ್ತಿರುವ
ಗಣಿಧಣಿಗಳನ್ನು ಕುರಿತು
ಎನ್.ಕೆ.ಹನುಮಂತಯ್ಯ ಅವರು ಬರೆದಿದ್ದ
ಅಪ್ರಕಟಿತ ಕವನವನ್ನು ಇಲ್ಲಿ ನೀಡಿದ್ದೇವೆ.



ಹೆಗ್ಗಣ ನುಗ್ಗಿದವೊ

ಹೆಗ್ಗಣ ನುಗ್ಗಿದವೊ
ಊರೊಳು ಹೆಗ್ಗಣ ನುಗ್ಗಿದವೊ
ನ ಕಿರಣ ಬಿದ್ದಿರುವಾಗ
ನೀವೂ ಎದ್ದಿರುವಾಗ
ಬಿಳಿಯ ಹಸಿರು ಹಲ್ಲಿನಲಿ
ಕೀಚೀ ರಾಗವ ಹಾಡುತ್ತ
ನುಗ್ಗಿದವೊ


ಯಲಿ ಬೆಟ್ಟವ ತುರುಕಿ
ರನು ಕರುಳಲಿ ಚಿವುಟಿ
ಮೇಲಿನ ಕಾಗದ ಹೀರಿ
ನಿಮ್ಮ ಕಣ್ಣೊಳು ಉರಿವ
ನುಗ್ಗಿದವೊ

ಮಲಗಿದ ಮಕ್ಕಳ ಕಿವಿಯೊಳಗಿಳಿದು
ಏಕತಾರಿಯ ತಂತಿಯ ಕಡಿದು
ಹರೆಯದ ಹೊಕ್ಕಳ ಗವಿಯೊಳಗಿಳಿದು
ಕಾಲಬೀಜದ ಕುಡಿಕೆಯನೊಡೆದು
ನಮ್ಮ ನಿಮ್ಮ ಜೀವ ಆರಿಸಿ
ಮಸಣದಿ ಜಾತ್ರೆಯ ಸೇರಿಸುವಂತ
ಹೆಗ್ಗಣ ನುಗ್ಗಿದವೊ

ಅನ್ನದ ಅಗುಳಲಿ ಬಿಲಗಳ ತೋಡಿ
ಉಣ್ಣುವ ಒಡಲಲಿ ನಿದ್ರೆಯ ಮಾಡಿ
ನಮ್ಮ ನಿಮ್ಮ ದನಿಗಳ ಹಿಂದಿ
ಗಣಿಧನಿ ಧನಿ ಎಂದು ಕುಣಿವ
ಹೆಗ್ಗಣ ನುಗ್ಗಿದವೊ
ಊರೊಳು ಹೆಗ್ಗಣ ನುಗ್ಗಿದವೊ


• ಎನ್.ಕೆ. ಹನುಮಂತಯ್ಯ

ವಂಚಕಿಗೆ ಮಣಿದ ವೆಂಕಯ್ಯ ನಾಯ್ಡು



ಮೂಲತಃ ತಮಿಳುನಾಡಿನ ತಿರುಚ್ಚಿಯವಳಾದ ಮಂಜುಳಾ ವಿರುದ್ಧ ಆಯಾ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಕೇಸುಗಳ ಪೈಕಿ ಹೆಚ್ಚಿನವು ವಂಚನೆಯ ಕೇಸುಗಳೆ.

ಇಲ್ಲಿಗೆ ವರ್ಷದ ಹಿಂದೆ ಆಂಧ್ರದ ತಾಡಪತ್ರಿಯ ಕೆ.ವಿ. ಸುಬ್ಬರಾಯುಡು ಮತ್ತು ಆತನ ಪತ್ನಿ ಭಾಗ್ಯ ಲಕ್ಷ್ಮಿಯಿಂದ 24 ಲಕ್ಷ ರೂಪಾಯಿಗಳ ಮೊತ್ತದ ಧರ್ಮಾವರಮ್ ರೇಷ್ಮೆ ಸೀರೆಗಳನ್ನು ತಂದಳು. ಒಂದು ಲಕ್ಷದಷ್ಟು ಅಡ್ವಾನ್ಸ್ ಕೊಟ್ಟದ್ದು ಬಿಟ್ಟರೆ ಮಿಕ್ಕೆಲ್ಲಕ್ಕೂ ಚೆಕ್ಕು ಕೊಟ್ಟದ್ದಳು. ಮಂಜುಳಾಳ ಗತ್ತು, ಖದರು ನೋಡಿದ ಸುಬ್ಬರಾಯುಡು ಆಕೆ ಕೊಟ್ಟ ಚೆಕ್ಕುಗಳನ್ನು ಕಣ್ಣಿಗೊತ್ತಿಕೊಂಡಿದ್ದೇ ಬಂತು. ಹಾಕಿದ ಮರುಗಳಿಗೆಯಲ್ಲೇ ಬೌನ್ಸ್ ಹೊಡೆದ ಚೆಕ್ಕುಗಳನ್ನು ಕಂಡಿದ್ದೇ ಸುಬ್ಬರಾಯುಡು ತಲೆತಿರುಗಿ ಬಿದ್ದ. ಧರ್ಮಾವರಮ್ ತಾಡಪತ್ರಿ ಸುತ್ತಮುತ್ತಲ ಬಡ ನೇಕಾರರಿಂದ ಸೀರೆಗಳನ್ನು ಪಡೆದು ಮಂಜುಳಾ ಮಡಿಲಿಗೆ ಹಾಕಿದ್ದ ಸುಬ್ಬರಾಯುಡು ವಸೂಲಿಗೆಂದು ಬೆಂಗಳೂರಿಗೆ ಬಂದರೆ ಸೀನೇ ಬೇರೆಯಾಗಿತ್ತು.



ಹಿಂದೆ ರೇಷ್ಮೆ ಸೀರೆಗಳ ಷೋ ರೂಮ್‌ನಂತಿದ್ದ ಆಕೆಯ ಚಿಕ್ಕಪೇಟೆ ಮಳಿಗೆ ಈಗ ರೌಡಿ ಸೆಂದಿಲ್‌ನ ಅಡ್ಡೆಯಾಗಿತ್ತು. ಗದರಿಸಿ ಕೇಳುವಂತಿಲ್ಲ, ದಬಾಯಿಸಿದರೆ ಸೆಂದಿಲ್‌ನ ಬಂಟರಾದ ರಾಜು ಮತ್ತು ವಿನೋದ್ ಎಂಬಿಬ್ಬರು ದಾಂಢಿಗರು ಅಟ್ಟಾಡಿಸುತ್ತಾರೆ. ತನ್ನ ಜೊತೆ ಇನ್ನಿಬ್ಬರನ್ನು ಕರೆತಂದು ವಸೂಲಿಗೆ ನಿಂತ ಸುಬ್ಬರಾಯುಡುನನ್ನು ಮಂಜುಳಾ ಚಿಕ್ಕಪೇಟೆಯ ಲಾಡ್ಜ್ ಒಂದರಲ್ಲಿ ಕೂಡಿ ಹಾಕಿ ತದುಕಿಸಿದ್ದಳು. ಅದರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟರೆ ಚಿಕ್ಕಪೇಟೆ ಇನ್ಸ್‌ಪೆಕ್ಟರ್ ಶಿವಕುಮಾರ್ ಸಾಹೇಬರೇ ಮಂಜುಳಾ ರಕ್ಷಣೆಗೆ ನಿಂತಿದ್ದರು. ಕೊನೆಗೆ ವಿಧಿಯಿಲ್ಲದೆ ಕೋರ್ಟಿನ ಮೊರೆ ಹೊಕ್ಕ ಸುಬ್ಬರಾಯುಡು ಸದ್ಯ ಮನೆ ಮಠ ಕಳಕೊಂಡು ಅನಂತಪುರದ ಸಾಯಿಬಾಬಾ ಆಶ್ರಮ ಸೇರಿಕೊಂಡಿದ್ದಾರೆ.

ಕೋರ್ಟು ಆಕೆಯ ಅಂಗಡಿ ಮನೆ ಜಪ್ತಿ ಮಾಡಿ ಕೊಡುವಂತೆ ಆದೇಶ ಕೊಟ್ಟರೆ ಜಪ್ತಿಗೆ ಬಂದ ಪೊಲೀಸರಿಗೆ ಸಿಕ್ಕಿದ್ದು ಎರಡು ಹಳೇ ರೇಷ್ಮೆ ಸೀರೆಗಳು ಮತ್ತು ಐವತ್ತು ಸಾವಿರದ ಒಡವೆ ಮಾತ್ರ!

ಎಲ್ಲಿಯ 24 ಲಕ್ಷ, ಎಲ್ಲಿಯ ಐವತ್ತು ಸಾವಿರ? ಇದು ಒಬ್ಬ ಸುಬ್ಬರಾಯುಡು ಕತೆಯಲ್ಲ, ಧರ್ಮಾವರಮ್‌ನ ಸಾಯಿನಾಥ್ ಎಂಬ ಮತ್ತೊಬ್ಬ ಸೀರೆ ವ್ಯಾಪಾರಿಗೆ ಇದೇ ರೀತಿ 36 ಲಕ್ಷ ಚೆಕ್ ಕೊಟ್ಟು ಯಾಮಾರಿಸಿದ್ದಾಳೆ. ಅನಂತಪುರದ ವೆಂಕಟೇಶ್ ನಾಯ್ಡು ಗುಂಟೂರಿನ ರಾಜಾರೆಡ್ಡಿ, ಧರ್ಮಪುರಿಯ ರತ್ನಂ, ಕೃಷ್ಣಗಿರಿಯ ತಿರುಮಲೇಶನ್- ಹೀಗೆ ಮಂಜುಳಾ ವಂಚನೆಗೆ ಸಿಲುಕಿ ಬೀದಿ ಪಾಲಾದವರ ದೊಡ್ಡ ಪಟ್ಟಿಯೇ ಇದೆ. ರಾಜಾರೋಷವಾಗಿ ತಿರುಗಾಡಿಕೊಂಡಿದ್ದರೂ ಚಿಕ್ಕಪೇಟೆ ಪೊಲೀಸರ ದಾಖಲೆಗಳಲ್ಲಿ ಈಕೆ ತಲೆಮರೆಸಿಕೊಂಡವರ ಪಟ್ಟಿಯಲ್ಲಿದ್ದಾಳೆ.

ಬೆಂಗಳೂರು ಪೊಲೀಸರ ಪಾಡೇ ಹೀಗಿರುವಾಗ ಇನ್ನು ಬಿಜೆಪಿ ನಾಯಕ ವೆಂಕಯ್ಯನಾಯ್ಡು ತಾನೇ ಏನು ಮಾಡಲು ಸಾಧ್ಯ? ಕೆಲದಿನಗಳ ಹಿಂದೆ ಸಾಕ್ಷಾತ್ ವೆಂಕಯ್ಯ ನಾಯ್ಡುವೇ ಗೃಹ ಸಚಿವ ಆಚಾರ್ಯರಿಗೆ ಹೇಳಿಸಿ ಈಕೆಯಿಂದ ವಂಚಿತರಾದವರ ಪರ ನಿಂತಿದ್ದರಂತೆ. ಚಿಕ್ಕಪೇಟೆ ಪೊಲೀಸರೇ ಈಕೆಯ ಬೆನ್ನಿಗಿರುವಾಗ ವೆಂಕಯ್ಯನಾಯ್ಡುವಾಗಲಿ, ಗೃಹ ಸಚಿವ ಆಚಾರ್ಯರಾಗಲಿ ಎಷ್ಟೇ ಪೌರುಷ ಮೆರೆದರೂ ಏನು ಪ್ರಯೋಜನ?

ಲೇಡಿ ರೌಡಿಯ ಪಾಲಿಕೆ ಪಾಲಿಟಿಕ್ಸ್

ಕಲಾಸಿಪಾಳ್ಯದ ವಂಚಕ ಸುಂದರಿ

ಒಬ್ಬಳು ಜನಾತಿ ಸುಂದರಿ. ಆಕೆಯ ಸುತ್ತ ನಾಲ್ವರು ಖತರ್‌ನಾಕ್ ರೌಡಿಗಳು ಮತ್ತು ವಿಚಿತ್ರ ಪಾಲಿಕೆ ಪಾಲಿಟಿಕ್ಸು. ಚುನಾವಣೆಯೇನೋ ಮುಗಿದುಹೋಗಿದೆ. ಫಲಿತಾಂಶವೂ ಬಂದಾಗಿದೆ. ಬೆಂಕಿ ಮಾತ್ರ ಆರುವ ಲಕ್ಷಣಗಳಿಲ್ಲ, ಯಾರು ಯಾರನ್ನು ಯಾವಾಗ ಮುಗಿಸಿದರೂ ಕಲಾಸಿಪಾಳ್ಯಕ್ಕದು ಮಾಮೂಲೇ-

ಏಕೆಂದರೆ ಯಾವ ರೌಡಿ ಕೊಲೆಯಾದರೂ ಕೊಂದವನ ರಾಶಿಗೆ ಆ ಸುಂದರಿ ಕಾಲಿಟ್ಟಿರುತ್ತಾಳೆ ಮತ್ತು ಆಕೆಯ ಸಹವಾಸಕ್ಕೆ ಬಿದ್ದವರಾರೂ ಹಾಳಾಗದೇ ಉಳಿದಿಲ್ಲ!



ವಂಚಕಿ ಮಂಜುಳಾ

ಅವಳ ಹೆಸರು ಮಂಜುಳಾ. ಹೇಳಿಕೇಳಿ ತಮಿಳು ಬ್ಯೂಟಿ. ಚಿಕ್ಕಪೇಟೆ, ಕಲಾಸಿಪಾಳ್ಯ ಕೆ.ಆರ್. ಮಾರುಕಟ್ಟೆ, ಕಾಟನ್‌ಪೇಟೆ, ಸಿಲ್ವರ್ ಜ್ಯೂಬಿಲಿ ಪಾರ್ಕ್ ಇತ್ಯಾದಿ ಬೆಂಗಳೂರಿನ ಅರ್ಧ ಡಜನ್ ಪೊಲೀಸ್ ಠಾಣೆಗಳಲ್ಲಿ ಈಕೆಯ ವಿರುದ್ಧ ಕ್ರಿಮಿನಲ್ ಕೇಸುಗಳಿವೆ. ಸದ್ಯ ಸೈಲೆಂಟ್ ಸುನೀಲನ ಪರಮಾಪ್ತ ಸೆಂದಿಲ್ ಎಂಬ ರೌಡಿಗೆ ತಾನು ಪತ್ನಿ ಎಂದು ಹೇಳಿಕೊಳ್ಳುತ್ತಾಳಾದರೂ ಪೊಲೀಸ್ ದಾಖಲೆಗಳ ಪ್ರಕಾರ ಈಕೆಯ ಗಂಡನ ಹೆಸರು ನಟರಾಜನ್.

ಆತ ಹೇಗೆ ಸತ್ತ? ಏನಾದ? ಎಂಬುದು ಕೂಡ ಇವತ್ತಿಗೂ ನಿಗೂಢ. ಇಂಥ ವಂಚಕ ಸುಂದರಿಯನ್ನು ಮುಂದಿಟ್ಟುಕೊಂಡು ಕೆ.ಎಸ್. ಗಾರ್ಡನ್ ಅರ್ಥಾತ್ ಖಾದರ್ ಶರೀಫ್ ಗಾರ್ಡನ್ ವಾರ್ಡಿನಿಂದ ಪಾಲಿಕೆ ಎಲೆಕ್ಷನ್ನಿಗೆ ನಿಂತು ಕೌನ್ಸಿಲರ್ ಆಗಲು ಹೊಂಟವನು ಸೈಲೆಂಟ್ ಸುನೀಲನ ಮತ್ತೊಬ್ಬ ಭಂಟ ಮಾರ್ಕೆಟ್ ವೇಡಿ. ಈತನ ವಿರುದ್ಧ ತನ್ನ ಚೇಲಾ ಶ್ರೀನಿವಾಸ್‌ನನ್ನು ಪಕ್ಷೇತರನಾಗಿ ಕಣಕ್ಕಿಳಿಸಿದ್ದು ಮಗದೊಬ್ಬ ರೌಡಿ ಪ್ರವೀಣ. ಪ್ರವೀಣನನ್ನು ಸೋಲಿಸುತ್ತೇನೆಂದು ಮಾರ್ಕೆಟ್ ವೇಡಿಯ ಜೊತೆ ಕೈಜೋಡಿಸಿದವನು ಇನ್ನೊಬ್ಬ ಪಾತಕಿ ಮಾಹಿನ್.

ತಮಾಷೆ ಹೇಗಿದೆಯೆಂದರೆ ಈಗ ಈ ಎಲ್ಲಾ ರೌಡಿಗಳೂ ಪರಸ್ಪರ ಕಚ್ಚಾಡುತ್ತಿದ್ದಾರೆ. ಮಾಹಿನ್‌ನನ್ನು ಮುಗಿಸುತ್ತೇನೆಂದು ಪ್ರವೀಣ. ಪ್ರವೀಣ ಸಿಕ್ಕರೆ ಕತ್ತರಿಸುತ್ತೇನೆಂದು ಮಾರ್ಕೆಟ್ ವೇಡಿ. ವೇಡಿಗೆ ಸ್ಕೆಚ್ ಹಾಕದೇ ಬಿಡ್ತೀನಾ ಎಂದು ಮಾಹಿನ್. ಮಾಹಿನ್ ಮಾಡಿದ ಅನಾಹುತದಿಂದಾಗೇ ನನ್ನ ಪ್ರೇಯಸಿ ದೋಖಾ ಕೊಟ್ಟಳೆಂದು ಮತ್ತೊಬ್ಬ ರೌಡಿ ಸೆಂದಿಲ್. ಹೀಗೆ ಪರಸ್ಪರ ಕಚ್ಚಾಡುತ್ತಿರುವ ರೌಡಿಗಳ ಪೈಕಿ ಯಾರ ಹೆಣ ಮೊದಲು ಬಿದ್ದೀತೆಂದು ಕಾಯುವ ಕರ್ಮ ಮಾತ್ರ ಕಲಾಸಿಪಾಳ್ಯದ ಪೊಲೀಸರದ್ದು!

ಇದು ಮೊನ್ನೆ ನಡೆದ ಪಾಲಿಕೆ ಎಲೆಕ್ಷನ್ನಿನ ಅಡ್ಡಪರಿಣಾಮದ ವಿಲಕ್ಷಣ ಸ್ಯಾಂಪಲ್ಲಷ್ಟೆ-

ಈ ಸಲದ ಪಾಲಿಕೆ ಚುನಾವಣೆಯಲ್ಲಿ ಅತೀ ಹೆಚ್ಚು ರೌಡಿ ಹಾವಳಿಯಿದ್ದದ್ದು ಸುಧಾಮನಗರ ಅರ್ಥಾತ್ ಕೆ.ಎಸ್. ಗಾರ್ಡನ್ ವಾರ್ಡಿನಲ್ಲೇ. ಅಲ್ಲಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದದ್ದು ಮಾಜಿ ಕೌನ್ಸಿಲರ್ ಅಂಗಮುತ್ತು ಎಂಬಾಕೆಯ ಮಗಳು ಅವ್ವಯ್ ಎಂಬಾಕೆ. ಕಲಾಸಿಪಾಳ್ಯದ ಹಳೇ ದೊರೆ ಆರ್.ವಿ. ದೇವರಾಜ್ ಖುದ್ದಾಗಿಯೇ ಆಸಕ್ತಿ ವಹಿಸಿ ಈಕೆಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದ ಈಕೆಯ ವಿರುದ್ಧ ಬಿಜೆಪಿ ಟಿಕೆಟ್ ಸಿಗದ ಕಾರಣ ಮತ್ತೊಬ್ಬ ರೌಡಿ ಪ್ರವೀಣ ತನ್ನ ಚೇಲಾ ಶ್ರೀನಿವಾಸ್ ಎಂಬಾತನನ್ನು ಪಕ್ಷೇತರನಾಗಿ ನಿಲ್ಲಿಸಿದ್ದ. ಈ ಮಧ್ಯೆ ಜೈಲಿಂದ ಹೊರಬಂದ ಮಾರ್ಕೆಟ್ ವೇಡಿ ಕೂಡ ತಾನೇನು ಕಮ್ಮಿ ಎಂಬಂತೆ ಪಕ್ಷೇತರನಾಗೇ ನಾಮಪತ್ರ ಹಾಕಿಬಿಟ್ಟ. ಆದರೆ ಕೊಂಪೆ ಸದೃಶ ಕೆ.ಎಸ್. ಗಾರ್ಡನ್‌ನ ಹಣಾಹಣಿಗೆ ಮಿಂಚಿನಂಥ ಖದರು ಬಂದದ್ದು ವಂಚಕ ಸುಂದರಿ ಮಂಜುಳಾ ಪಕ್ಷೇತರಳಾಗಿ ನಾಮಪತ್ರ ಸಲ್ಲಿಸಿದಾಗಲೇ.

ಮಾರ್ಕೆಟ್ ವೇಡಿ ರೌಡಿಗಳ ಹಿಂಡನ್ನೇ ಕರೆದೊಯ್ದು ನಾಮಪತ್ರ ಹಾಕಿದ್ದು ಗೊತ್ತಿದ್ದೂ ಆತನದೇ ಗ್ಯಾಂಗಿನ ಮತ್ತೊಬ್ಬ ರೌಡಿ ಸೆಂದಿಲ್ ತನ್ನ ಪ್ರೇಯಸಿ ಮಂಜುಳಾಳನ್ನು ಕಣಕ್ಕಿಳಿಸಿದ್ದ. ಆ ಕಾಲದಿಂದಲೂ ಕೆ.ಎಸ್. ಗಾರ್ಡನ್ನಿನಲ್ಲಿ ತಾನೊಬ್ಬ ಲೇಡಿ ರೌಡಿಯಂತೆ ಮೆರೆದ ಮಂಜುಳಾ ಒಂದಾನೊಂದು ಕಾಲಕ್ಕೆ ಚಾಮರಾಜಪೇಟೆಗೆ ಶಾಸಕರಾಗಿದ್ದ ಮಾರ್ಕೆಟ್ ದೇವಿಗೆ ಪರಮಾಪ್ತೆಯಾಗಿದ್ದವಳು. ಹಾಗೆ ಪ್ರತಿನಿತ್ಯ ಶಾಸಕ ಮಾರ್ಕೆಟ್ ದೇವಿಯ ಅಂತಃಪುರಕ್ಕೆ ಬರುತ್ತಿದ್ದ ಮಂಜುಳಾಳನ್ನು ಅಲ್ಲೇ ಇದ್ದು ದೇವಿಗೆ ಭಟ್ಟಂಗಿಯಂತಿದ್ದ ರೌಡಿ ಸೆಂದಿಲ್ ಪಟಾಯಿಸಿಬಿಟ್ಟ.



ಸೆಂದಿಲ್



ಪ್ರವೀಣ

ಆ ಹೊತ್ತಿಗೆ ಮಾರ್ಕೆಟ್ ದೇವಿಯ ಜೆ.ಸಿ. ರಸ್ತೆಯ ಅಡ್ಡೆಯೆಂದರೆ ಅದು ಬೆಂಗಳೂರಿನ ಬಹುತೇಕ ರೌಡಿಗಳು, ಹಂತಕರು, ವಂಚಕರು, ಭೂಕಂಟಕರೆಲ್ಲರ ಸಂಗಮ ಕ್ಷೇತ್ರವಾಗಿತ್ತು, ಬೆಕ್ಕಿನ್ ಕಣ್ ರಾಜೇಂದ್ರನಿಂದ ಹಿಡಿದು ಕಾಟನ್‌ಪೇಟೆಯ ಪುಷ್ಪನ ತನಕ, ಕಾಲಾಪತ್ಥರ್, ಕೋಟೆ ನಾರಾಯಣ, ಕೋಟೆ ನಾಗರಾಜರಿಂದ ಮೊದಲಾಗಿ ಪೂಣೆ, ಲೋಕಿ, ಗೇಟ್ ಗಣೇಶರ ತನಕ ಮತ್ತು ಆಗಷ್ಟೇ ಚಿಗುರೊಡೆಯುತ್ತಿದ್ದ ಮಾರ್ಕೆಟ್ ವೇಡಿ, ಸೆಂದಿಲ್, ಕೆ.ಎಸ್. ಗಾರ್ಡನ್ನಿನ ಗುಪ್ಪಾ, ಚಾಮರಾಜಪೇಟೆಯ ಮಾಹಿನ್, ಆಂಜನಪ್ಪ ಗಾರ್ಡನ್ನಿನ ಅತ್ತೂಫ್, ಕ್ವಾಟ್ರಸ್ ಶಿವು, ಗುಟ್ಟಳ್ಳಿಯ ಮುಗ್ಯಾಂಬೋ; ಹೀಗೆ ಅರ್ಧ ಬೆಂಗಳೂರಿನ ರೌಡಿಗಳಿಗೆಲ್ಲ ಅಣ್ಣನಂತಿದ್ದು ಆಶ್ರಯ ನೀಡುತ್ತಿದ್ದ ಆರ್.ವಿ. ದೇವರಾಜ್ ಯಾನೇ ಮಾರ್ಕೆಟ್ ದೇವಿಯ ಜೇಸಿ ರೋಡ್ ಅಡ್ಡೆಯಲ್ಲಿ ಪಟ್ಟದ ರಾಣಿಯಂತೆ ಮೆರೆದವಳು ಮಂಜುಳಾ.

ಹೆಸರಿಗಷ್ಟೇ ಚಿಕ್ಕಪೇಟೆಯಲ್ಲಿ ರೇಷ್ಮೇ ಸೀರೆಗಳ ಷೋ ರೂಮ್ ನಡೆಸಿಕೊಂಡಿದ್ದ ಮಂಜುಳಾಳ ಫುಲ್‌ಟೈಮ್ ದಂಧೆ ಚೀಟಿಂಗ್. ತಮಿಳುನಾಡಿನ ಕಾಂಜೀವರಮ್, ಆಂಧ್ರದ ತಾಡಪತ್ರಿ, ಧರ್ಮಾವರಮ್ ಇತ್ಯಾದಿ ಊರುಗಳ ಮುಗ್ಧ ಕೈಮಗ್ಗದ ನೇಕಾರರನ್ನು ನಂಬಿಸಿ ಲಕ್ಷಗಟ್ಟಲೇ ಬೆಲೆಬಾಳುವ ರೇಷ್ಮೆ ಸೀರೆಗಳನ್ನು ತರಿಸಿಕೊಂಡು ಲಕ್ಷವೋ ಎರಡು ಲಕ್ಷವೋ ಅಡ್ವಾನ್ಸ್ ಕೊಡುತ್ತಿದ್ದಳು. ಮಿಕ್ಕ ಇಪ್ಪತ್ತೋ ಮೂವತ್ತೋ ಲಕ್ಷಕ್ಕೆ ಚೆಕ್ ಕೊಡುತ್ತಿದ್ದಳು. ಕೊಟ್ಟ ಚೆಕ್ಕು ಬೌನ್ಸ್ ಆಗುವುದು ಶತಸ್ಸಿದ್ಧ. ವಸೂಲಿಗೆ ಬಂದ ಆಂಧ್ರ-ತಮಿಳುನಾಡಿನ ನೇಕಾರರನ್ನು ಚಿಕ್ಕಪೇಟೆಯ ಲಾಡ್ಜುಗಳಲ್ಲಿ ಕೂಡಿ ಹಾಕಿ ರೌಡಿಗಳನ್ನು ಬಿಟ್ಟು ಹೊಡೆಸುತ್ತಿದ್ದಳು. ಹೀಗೆ ತನ್ನಿಂದ ಮುಂಡಾಯಿಸಿಕೊಂಡವರನ್ನು ಬೆದರಿಸಲೆಂದೇ ಮಾರ್ಕೆಟ್ ವೇಡಿಯ ಶಿಷ್ಯ ಸೆಂದಿಲ್‌ನನ್ನು ಬುಟ್ಟಿಗೆ ಹಾಕಿಕೊಂಡಿದ್ದಳು. ಅಧಿಕಾರ ಮತ್ತು ಯೌವನವಿದ್ದಷ್ಟೂ ಕಾಲ ದೇವಿ ಈ ತಮಿಳು ಸುಂದರಿಯನ್ನು ಮೆರೆದಾಡಿಸಿದ್ದರು. ಜಮೀರ್ ಗೆಲ್ಲುತ್ತಿದ್ದಂತೆ ಮಂಜುಳಾ 'ದೇವಿ' ಆಸ್ಥಾನ ಬಿಟ್ಟು ಫುಲ್‌ಟೈಮ್ ಸೋಷಿಯಲ್ ವರ್ಕ್ ಅರ್ಥಾತ್ ವಂಚನೆಯನ್ನೇ ಕಾಯಕ ಮಾಡಿಕೊಂಡಳು.


ಯಾವತ್ತು ಪಾಲಿಕೆ ಎಲೆಕ್ಷನ್ ಘೋಷಣೆಯಾಯಿತೋ ಕಾಂಗ್ರೆಸ್ ಟಿಕೆಟ್ಟಿಗಾಗಿ ಏನೆಲ್ಲಾ ಸರ್ಕಸ್ ಮಾಡಿದ ಮಂಜುಳಾ ಅಂಗಮುತ್ತು ಮಗಳಿಗೆ ದೇವಿ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದು ಖಾತರಿಯಾದದ್ದೇ ಪಕ್ಷೇತರಳಾಗಿ ನಾಮಿನೇಷನ್ ಮಾಡಿಬಿಟ್ಟಳು. ಆದರೆ ಕೆ.ಎಸ್. ಗಾರ್ಡನ್ ವಾರ್ಡಿಗಾಗಿ ಅಂಗಮುತ್ತು ಮಗಳು ಅವ್ವೈ ಮಾತ್ರವಲ್ಲದೇ ಇಬ್ಬರು ಅಪಾಯಕಾರಿ ರೌಡಿಗಳ ಮಧ್ಯೆ ಜಿದ್ದಾಜಿದ್ದಿಯೇರ್ಪಟ್ಟಿತ್ತು. ಪಕ್ಷೇತರನಾಗಿಯೇ ನಿಂತಿದ್ದ ಮಾರ್ಕೆಟ್ ವೇಡಿಯದು 'ಆಪಲ್' ಗುರುತಾದರೆ ಪ್ರವೀಣನ ಬಂಟನದು 'ತಕ್ಕಡಿ' ಸಿಂಬಲ್ಲು!

ಶತಗತಾಯ ಗೆದ್ದು ಕೌನ್ಸಿಲರ್‌ಗಳಾಗಲು ಪ್ರವೀಣ ಮತ್ತು ವೇಡಿ ಇಬ್ಬರೂ ಜಿದ್ದಾಜಿದ್ದಿಗಿಳಿದಿದ್ದರು. ವೇಡಿ ತನ್ನ ಸುತ್ತ ಹಿಂಡುಗಟ್ಟಲೇ ರೌಡಿಗಳನ್ನು ಕರಕೊಂಡು ಪ್ರಚಾರಕ್ಕಿಳಿದಿದ್ದರೆ ಪ್ರವೀಣ ಕೂಡ ತನ್ನ ಗ್ಯಾಂಗ್ ಸಮೇತ ಅಖಾಡಕ್ಕಿಳಿದಿದ್ದ. ಈ ಮಧ್ಯೆ ಮಂಜುಳಾಳ ಪ್ರಿಯಕರ ಸೆಂದಿಲ್‌ನನ್ನು ಕರೆಸಿಕೊಂಡಿದ್ದೇ ವೇಡಿ ಜೈಲಲ್ಲಿದ್ದ ಸುನೀಲನಿಗೆ ಫೋನಾಯಿಸಿ 'ಹುಕುಂ' ಕೇಳಿಸಿಬಿಟ್ಟ. ಆ ಪ್ರಕಾರ ಸೆಂದಿಲ್

ಮಾರ್ಕೆಟ್ ದೇವಿಯ ರೌಡಿರಾಜ್ಯ ಈಗ ಸ್ಮಶಾನ?

ಜಮೀರ್ ಗೆದ್ದು ಮಾರ್ಕೆಟ್ ದೇವಿ ನಿರುದ್ಯೋಗಿಯಾಗುತ್ತಿದ್ದಂತೆ ಕಲಾಸಿಪಾಳ್ಯದ ಅಂಡರ್‌ವರ್ಲ್ಡ್ ಲೆಕ್ಕಾಚಾರವೇ ತಲೆಕೆಳಗಾಗಿದೆ.

ದೇವಿಗೆ ಅಧಿಕಾರವಿದ್ದಾಗ ಯಾವ್ಯಾವ ರೌಡಿಗಳೆಲ್ಲ ಅಟ್ಟಹಾಸ ಗೈದಿದ್ದರೋ ಅವರೆಲ್ಲ ಈಗ ದೇವಿಗೆ ಕೈಕೊಟ್ಟು ದಿಕ್ಪಾಪಾಲಾಗಿದ್ದಾರೆ. ಹಿಂದೆ ದೇವಿಯ ಬಲಗೈ ಬಂಟನಂತಿದ್ದ ಬೆಕ್ಕಿನಕಣ್ ರಾಜೇಂದ್ರನನ್ನು ದೇವಿಯೇ ಸಾಕಿ ಬೆಳೆಸಿದ ಸುನೀಲನ ಗ್ಯಾಂಗ್ ಕೊಂದು ಹಾಕಿತು. ಆವತ್ತು ಸುನೀಲನ ಜೊತೆ ನಿಂತು ರಾಜೇಂದ್ರನನ್ನು ಕೊಂದ ಮಾರ್ಕೆಟ್ ವೇಡಿ ಇದಾಗಿ ಕೆಲ ದಿನಕ್ಕೇ ದೇವಿಯ ಮತ್ತೊಬ್ಬ ರೈಟ್‌ಹ್ಯಾಂಡ್ ಗೇಟ್ ಗಣೇಶನನ್ನು ಕೊಂದ. ಈ ಗೇಟ್ ಗಣೇಶ ಆರ್.ವಿ. ದೇವರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷನಾಗಿದ್ದಾತ. ಈತನಿಗೆ ಗುರುವಿನಂತಿದ್ದವನು ದೇವಿಯ ಮತ್ತೊಬ್ಬ ಬಂಟ ಪೂಣೆ. ಪೂಣೆ ಮತ್ತು ಲೋಕಿ ಜೋಡಿಯೆಂದರೆ ದೇವಿಯ ಎಡಗೈ-ಬಲಗೈಗಳಿದ್ದಂತೆ ಎಂಬುದು ಇಡೀ ಕಲಾಸಿಪಾಳ್ಯಕ್ಕೇ ಮನೆಮಾತಾಗಿತ್ತು.




ಮಾರ್ಕೆಟ್ ವೇಡಿ


ದೇವಿಗೆ ವಕ್ಕರಿಸಿದ ಕೇಡುಗಾಲಕ್ಕೆ ಕೊನೆಗೆ ಪೂಣೆಯೇ ಬಲಿಯಾದ. ಗೇಟ್ ಗಣೇಶನನ್ನು ಕೊಂದ ಒಂದೇ ವಾರಕ್ಕೆ ಕಪಾಲಿ ಆನಂದನ ಗ್ಯಾಂಗ್ ಪೂಣೆಯನ್ನು ಕತ್ತರಿಸಿ ಹಾಕಿತು. ಪೂಣೆಯಿಲ್ಲದೇ ಒಬ್ಬಂಟಿಯಾದ ಲೋಕಿ ಕೊನೆಗೆ ತನ್ನ ಪ್ರಾಣ ಉಳಿಸಿಕೊಳ್ಳಲು ಬಿಜೆಪಿಗೆ ಶರಣಾದ. ಎಡಗೈ ಬಲಗೈಗಳಂತಿದ್ದ ಪೂಣೆ-ಲೋಕಿಯೇ ದೇವಿಯಿಂದ ದೂರಾದ ನಂತರ ಯಾವ ರೌಡಿ ತಾನೇ ದೇವಿಯ ಜೊತೆ ಹೆಣಗುತ್ತಾನೆ?

ಗಾರ್ಡನ್ ಗುಪ್ಪ ಮತ್ತು ಕ್ವಾಟ್ರಸ್ ಶಿವು ಕ್ರಮೇಣ ದೇವಿಯ ಕಡುವೈರಿ ಮಾಜಿ ಕೌನ್ಸಿಲರ್ ಅಪ್ಪೋಡನ ಜೊತೆ ಸೇರಿ ಜೆಡಿಎಸ್ ಸೇರಿಕೊಂಡರೆ, ಮಾರ್ಕೆಟ್ ವೇಡಿ, ಮಾಹಿನ್, ಸುಬ್ರ, ಆತನ ತಮ್ಮ ವೇಲು ಮುಂತಾದವರೆಲ್ಲ ಜಮೀರ್ ಜೊತೆ ಕೈಜೋಡಿಸಿದ್ದರು. ಮಾರ್ಕೆಟ್ ವೇಲು ಕ್ರಮೇಣ ದೇವಿಯ ಅಡ್ಡೆಯತ್ತ ತಲೆ ಹಾಕುವುದನ್ನೇ ಬಿಟ್ಟುಬಿಟ್ಟ. ಗುಟ್ಟಳ್ಳಿ ಮುಂಗ್ಯಾಂಬೋ ಹಂದಿಜ್ವರಕ್ಕೆ ಬಲಿಯಾದರೆ ಅತ್ತೂಫ್ ಥರದವರು ಜಮೀರ್ ಪಾಳಯ ಸೇರಿಕೊಂಡರು. ಮತ್ತೊಬ್ಬ ರೌಡಿ ಪ್ರವೀಣ ಬೇಸತ್ತು ದೇವಿಯ ಎದುರಾಳಿ ಉದಯ್ ಗರುಡಾಚಾರ್‌ನ ಅನುಯಾಯಿಯಾಗಿ ಬಿಜೆಪಿ ಹೊಕ್ಕ, ಕೋಟೆ ನಾರಾಯಣ ಅಂಡರ್‌ವರ್ಲ್ಡ್ ಉಸಾಬರಿಯನ್ನೇ ಬಿಟ್ಟು ನಾಪತ್ತೆಯಾದ.

ಸದ್ಯ ಮಾರ್ಕೆಟ್ ದೇವಿಯ ರೌಡಿ ರಾಜ್ಯ ಪೂರ್ತಿ ನಾಮಾವಶೇಷಗೊಂಡಿದೆ. ತಾನೇ ಸಾಕಿದ ರೌಡಿಗಳ ವಿರುದ್ಧ ಈಗ ದೇವಿಯೇ ಹೆಣಗಾಡಬೇಕಾಗಿದೆ. ರೌಡಿಗಳು, ಕ್ರಿಮಿನಲ್ಸ್ ಕಟ್ಟಿಕೊಂಡು ರಾಜಕೀಯ ಮಾಡಹೊರಟರೆ ಏನಾಗುತ್ತದೆ ಎಂಬುದಕ್ಕೆ ದೇವಿಯ ದುರಂತವೊಂದೇ ನಿದರ್ಶನದಂತಿದೆ.



ದೇವಿ



ಪೂಣೆ

ತನ್ನ ಪ್ರೇಯಸಿ ಮಂಜುಳಾಳನ್ನು ಮಾರ್ಕೆಟ್ ವೇಡಿಯ ಪರ ಪ್ರಚಾರಕ್ಕಿಳಿಸಬೇಕು. ಅದಕ್ಕೆ ಪ್ರತಿಯಾಗಿ ವೇಡಿ ಮಂಜುಳಾಗೆ ಐದು ಲಕ್ಷ ಕೊಡಬೇಕು!


ಹೀಗಿದ್ದಳು ಮಂಜುಳಾ


ಇದು ಮಂಜುಳಾ-ಸೆಂದಿಲ್ ಮತ್ತು ವೇಡಿಯ ಮಧ್ಯದ ಡೀಲಾಗಿತ್ತು. ನಿಯತ್ತಾಗಿಯೇ ವೇಡಿ ಮಂಜುಳಾ ಕೈಗೆ ರೊಕ್ಕ ಮಡಗಿದ್ದ. ಇದು ಗೊತ್ತಾಗಿದ್ದೇ ತಡ ಉಪಾಯವಾಗಿ 'ದೇವಿ' ಮಂಜುಳಾಳನ್ನು ಕರೆಸಿಕೊಂಡ. ಎಷ್ಟಾದರೂ ಹಳೇ ಸಖಿ. ಸೆಂದಿಲ್ ಬೇರೆ ಹಳೇ ಶಿಷ್ಯ. ಗುರು ಹೇಳಿದ ಮಾತನ್ನು ತಳ್ಳಿ ಹಾಕುವುದುಂಟಾ?

ಅತ್ತ ವೇಡಿಯಿಂದ ಐದು ಲಕ್ಷ ಕಿತ್ತ ಮಂಜುಳಾ ಇತ್ತ ದೇವಿಯಿಂದಲೂ ದುಡ್ಡು ಕಿತ್ತಳು. ವೇಡಿಯ ಜೊತೆಗಿದ್ದೇ ತಾನು ದೇವಿಯ ಶಿಷ್ಯೆ ಅಂಗಮುತ್ತು ಮಗಳನ್ನು ಗೆಲ್ಲಿಸುತ್ತೇನೆಂದು ಮಾತು ಕೊಟ್ಟು ಬಂದಳು. ಪಾಪ, ಪ್ರವೀಣ ತಾನೇ ಇನ್ನೇನು ಮಾಡಿಯಾನು? ದೇವಿಯ ಜೊತೆ ಕೈಜೋಡಿಸಿದ್ದು ಗೊತ್ತಿಲ್ಲದೇ ರಹಸ್ಯವಾಗಿ ಮಂಜುಳಾಳನ್ನು ಕರೆಸಿಕೊಂಡು ಮೂರು ಲಕ್ಷ ಕೊಟ್ಟ. ಪ್ರವೀಣನಿಗೂ ದೇವಿಯನ್ನು ನಂಬಿಸಿದಂತೆ ಮಾತು ಕೊಟ್ಟು ಬಂದಿದ್ದ ಮಂಜುಳಾ ವೇಡಿಯ ಜೊತೆ ಮನೆ ಮನೆ ಸುತ್ತಿ ಮಿಂಚಿದ್ದೇ ಬಂತು.

ಯಾವತ್ತು ಪಾಲಿಕೆ ಎಲೆಕ್ಷನ್ ಮುಗಿದು ಫಲಿತಾಂಶ ಹೊರಬಿತ್ತೋ ವೇಡಿ ಮತ್ತು ಪ್ರವೀಣ ಇಬ್ಬರಿಗೂ ಹಕೀಕತ್ತು ಅರ್ಥವಾಗಿತ್ತು. ಕಾಂಗ್ರೆಸ್ ಅಭ್ಯರ್ಥಿ ಅನ್ವಯ್‌ಗೆ 3900 ಮತಗಳು ಸಿಕ್ಕು ಮಾರ್ಕೆಟ್ ದೇವಿ ಗೆಲುವಿನ ನಗೆ ಬೀರಿದರೆ ವೇಡಿಗೆ ಕೇವಲ 3066 ಮತಗಳು ಬಂದಿದ್ದವು. ಇನ್ನೂ ವಿಚಿತ್ರವೆಂದರೆ ಪ್ರವೀಣನ ಚೇಲಾ ಶ್ರೀನಿವಾಸ್ ವೇಡಿಗಿಂತಲೂ 600 ಮತಗಳನ್ನು ಹೆಚ್ಚಿಗೆ ಪಡೆದು ಎರಡನೇ ಸ್ಥಾನಕ್ಕೆ ಬಂದಿದ್ದ!

ವಿಕಟ ಹೇಗಿತ್ತೆಂದರೆ ವೇಡಿಯ ಪರ ಬೂತ್ ಇನ್‌ಚಾರ್ಜ್ ವಹಿಸಿಕೊಂಡಿದ್ದ ಮಂಜುಳಾಳ ಮನೆ ಸುತ್ತಮುತ್ತಲ ರಾಮಣ್ಣ ಗಾರ್ಡನ್ ಮತಗಟ್ಟೆಯಲ್ಲೇ ವೇಡಿಗೆ ದಕ್ಕಿದ್ದು ಕೇವಲ ಏಳು ಓಟುಗಳು ಮಾತ್ರ!

ಒಂದೆಡೆ ಮಂಜುಳಾ ತನಗೆ ದ್ರೋಹ ಮಾಡಿದ್ದು ಗೊತ್ತಾಗಿ ಕುಸಿದು ಕೂತ ವೇಡಿಗೆ ಗಾಯದ ಮೇಲೆ ಬರೆ ಎಳೆದಂತೆ ಮತ್ತೊಂದು ಆಘಾತಕಾದಿತ್ತು. 'ನಿನ್ನನ್ನೇ ಗೆಲ್ಲಿಸ್ತೀನಿ' ಎಂದು ಮಾತು ಕೊಟ್ಟಿದ್ದ ಮತ್ತೊಬ್ಬ ರೌಡಿ ಮಾಹಿನ್ ಕೂಡ ವೇಡಿಗೆ ಕೈಕೊಟ್ಟು ಒಳಗೊಳಗೇ ದೇವಿಯ ಜೊತೆ ಕೈಜೋಡಿಸಿದ್ದ!


ರೌಡಿ ಮಾಹಿನ್

ಏಪ್ರಿಲ್ 28 ರ ಎಲೆಕ್ಷನ್ನಿನ ದಿನ ಎಂಥಾ ಜಿದ್ದಾಜಿದ್ದಾಯಿತ್ತೆಂದರೆ ಸುಧಾಮನಗರದಲ್ಲಿ ವೇಡಿಗೂ ಪ್ರವೀಣನಿಗೂ ನಡುರಸ್ತೆಯ ಕಾಳಗವೇ ನಡೆದಿತ್ತು. ಇನ್ನೇನು ಮಾರಾಮಾರಿ ಗ್ಯಾರಂಟಿ ಯೆನ್ನುವ ಹೊತ್ತಿಗೆ ಧಾವಿಸಿ ಬಂದ ಸಿಲ್ವರ್ ಜ್ಯೂಬಲಿ ಪಾರ್ಕ್ ಪೊಲೀಸರನ್ನು ಕಂಡಿದ್ದೇ ವೇಡಿ ಎದ್ದೂಬಿದ್ದು ಓಡಿಹೋದ. ಸಿಕ್ಕಿಬಿದ್ದ ಪ್ರವೀಣನನ್ನು ಪೊಲೀಸರು ಎಳೆದೊಯ್ದರೆ ಮುನ್ನೂರಕ್ಕೂ ಅಧಿಕ ಮಂದಿಯಿದ್ದ ಆತನ ಬೆಂಬಲಿಗರು ಠಾಣೆಗೆ ಲಗ್ಗೆಯಿಟ್ಟರು. ಫಲಿತಾಂಶದ ದಿನವಂತೂ ಎಣಿಕೆ ಕೇಂದ್ರದ ಆವರಣದಲ್ಲೇ ಮಾಹಿನ್ ಮತ್ತು ಪ್ರವೀಣನ ಬೆಂಬಲಿಗರ ಮಧ್ಯೆ ಹೊಡೆದಾಟವಾಯಿತು.

ಹೀಗೆ ರೌಡಿಗಳೆಲ್ಲ ಒಬ್ಬರ ವಿರುದ್ಧ ಇನ್ನೊಬ್ಬರು ಬಡಿದಾಡುತ್ತಿದ್ದರೆ ಐನಾತಿ ಮಂಜುಳಾ ಇವರೆಲ್ಲರ ಜೊತೆಗೆ ಒಳಗೊಳಗೇ ಕೈಜೋಡಿಸಿ ಎಲ್ಲರಿಂದಲೂ ರೊಕ್ಕ ತಿಂದು ಅವರೆಲ್ಲರಿಗೂ ಟೋಪಿ ಹಾಕಿದ್ದಳು. ಅದಕ್ಕೆ ಸಾತು ಕೊಟ್ಟವನು ಪ್ರಿಯಕರ ಸೆಂದಿಲ್. ಹೀಗೆ ಮಂಜುಳಾ ಟೋಪಿ ಹಾಕಿದ್ದು ಗೊತ್ತಾಗಿದ್ದೇ ತಡ ತಲೆ ಕೆಡಿಸಿಕೊಂಡ ವೇಡಿ ಫಲಿತಾಂಶ ಬಂದ ಎರಡನೇ ದಿನಕ್ಕೇ ಅಂದರೆ ಮೇ ಏಳರಂದು ಮಂಜುಳಾಳ ಪ್ರಿಯಕರ ಸೆಂದಿಲ್‌ನನ್ನು ಎತ್ತಾಕಿಕೊಂಡು ಬಂದಿದ್ದೇ ತನ್ನ ಮಾರ್ಕೆಟ್ ಅಡ್ಡೆಯಲ್ಲಿ ಹಾಕಿ ಸಮಾ ರಿಪೇರಿ ಮಾಡಿಬಿಟ್ಟ. ಕೊಟ್ಟ ಐದು ಲಕ್ಷವನ್ನು ಮಡಗು ಎಂದು ಮಂಜುಳಾಳನ್ನು ಕರೆದು ಆವಾಜು ಬಿಟ್ಟ.

ಇತ್ತ ಪ್ರವೀಣ ಕೂಡ ಈಗ ಮಂಜುಳಾ ವಿರುದ್ಧ ಕಿಡಿಕಾರುತ್ತಿದ್ದಾನೆ. ಎಲೆಕ್ಷನ್ ಜಿದ್ದಾಜಿದ್ದಿಯಲ್ಲಿ ನಡೆದ ಘರ್ಷಣೆಯ ದುಷ್ಮನಿ ಕೂಡ ವೇಡಿ ಮತ್ತು ಪ್ರವೀಣರ ಮಧ್ಯೆ ಹೊಗೆಯಾಡುತ್ತಿದೆ. ತನ್ನನ್ನು ನಂಬಿಸಿ ಕೈಕೊಟ್ಟ ರೌಡಿ ಮಾಹಿನ್ ವಿರುದ್ಧ ವೇಡಿ ಎಲ್ಲೆಂದರಲ್ಲಿ ಕಿಡಿಕಾರುತ್ತಿದ್ದಾನೆ. ವೇಡಿಯ ವಿರುದ್ಧ ಆತನದೇ ಗ್ಯಾಂಗಿನ ಸೆಂದಿಲ್ ಕೂಡ ಕತ್ತಿ ಮಸೆಯುತ್ತಿದ್ದಾನೆ. ತನ್ನ ಪ್ರೇಯಸಿಯನ್ನು ಮಾನಾಮಾನ ಬೈದದ್ದೂ ಅಲ್ಲದೇ ತನ್ನ ಮೇಲೇ ಕೈ ಮಾಡಿದ ವೇಡಿಯನ್ನು ಮುಗಿಸದೇ ಬಿಡಲ್ಲ ಎಂದು ಸೆಂದಿಲ್ ಶಪಥಗೈದರೆ ಅತ್ತ ರೌಡಿ ಮಾಹಿನ್‌ಗೆ ತನ್ನನ್ನೇ ವಾಚಾಮಗೋಚರ ಬೈದ ವೇಡಿಯ ಮೇಲೆ ಹಗೆ ಶುರುವಾಗಿದೆ.


ವೇಡಿ

ವೇಡಿಯನ್ನು ಸೆಂದಿಲ್ ಮುಗಿಸುತ್ತಾನಾ? ಸೆಂದಿಲ್ ಜೊತೆ ವೇಡಿ ವಿರುದ್ಧ ಮಾಹಿನ್ ಕೈಜೋಡಿಸುತ್ತಾನಾ? ಅಥವಾ ಮಾಹಿನ್‌ನನ್ನು ವೇಡಿಯೇ ಗತಿ ಕಾಣಿಸಬಹುದಾ? ಅದಕ್ಕೂ ಮುನ್ನ ಮಾಹಿನ್ ಪ್ರವೀಣನನ್ನು ತದುಕಿಕೊಳ್ಳಬಹುದಾ? ಅಥವಾ ವೇಡಿ ಗ್ಯಾಂಗ್ ಮೊದಲು ಪ್ರವೀಣನನ್ನು ನಿಕಾಲಿ ಮಾಡುತ್ತಾ? ಯಾರು ಯಾರ ಜೊತೆ ಕೈಜೋಡಿಸಬಹುದು? ಯಾರು ಯಾರನ್ನು ಮುಗಿಸಬಹುದು? ಇತ್ಯಾದಿ ತಲೆಗೊಂದು ಲೆಕ್ಕಾಚಾರ ಸದ್ಯ ಕಲಾಸಿಪಾಳ್ಯದುದ್ದಕ್ಕೂ ಹೊಗೆಯಾಡುತ್ತಿದೆ.


ಯಾವ ರೌಡಿಯನ್ನು ಯಾವ ರೌಡಿ ಕೊಂದರೂ ಲಾಭ ಮಾರ್ಕೆಟ್ ದೇವಿಗೆ ಮತ್ತು ವಂಚಕಿ ಮಂಜುಳಾಳಿಗೇ!

ಕಲಾಸಿಪಾಳ್ಯದಲ್ಲಿ ವಾರ್ಡ್‌ವಾರ್‌ಗೂ ಗ್ಯಾಂಗ್‌ವಾರ್‌ಗೂ ಅಂಥ ವ್ಯತ್ಯಾಸವೇನಿಲ್ಲ.

• ರಾ. ಸೋಮನಾಥ್

ಈ ಬಂಗಾರಪ್ಪನ ಸ್ಟೈಲೇ ಅದು ಕಂಡ್ರಿ!

ತಮ್ಮನ್ನು ತಾವು ಬಗ್ಗಿ ನೋಡಿಕೊಳ್ಳಲಾಗದ ಸ್ಥಿತಿ ಮುಟ್ಟಿರುವ ಬಿಜೆಪಿಗಳು ತಮ್ಮ ಎಲೆಯಲ್ಲಿ ಬಿದ್ದಿರುವ ಹೆಗ್ಗಣ ತೆಗೆಯಲಾಗದೆ, ದಿಲ್ಲಿ ಎಲೆಯಲ್ಲಿ ಬಿದ್ದಿರುವ ನೊಣ ತೆಗೆಯಲು ಹೋಗಿದ್ದವಂತಲ್ಲಾ, ಒಂದು ಕಾಲದಲ್ಲಿ ಚಿತ್ರಾನ್ನಕ್ಕೂ ಕಾಸಿಲ್ಲದೆ, ಅವರಿವರ ಎಲೆ ನೋಡುತ್ತಿದ್ದ ಬಿಜೆಪಿಗಳು ಇಂದು ಹಿಂಡುಕಟ್ಟಿಕೊಂಡು ದಿಲ್ಲಿ ನೋಡುವಂತಾಗಿವೆಯಲ್ಲಾ ಎಂದು ಕಾಂಗೈಗಳು ಫ್ಯಾನಿನ ಗಾಳಿ ಎದುರು ಕೂತು ಹರಟುತ್ತಿವೆಯಂತಲ್ಲಾ, ಅದೇ ಹೊತ್ತಿಗೆ ರಾಮಲೀಲಾ ಮೈದಾನದಲ್ಲಿ ಗಡ್ಕರಿ ಎಂಬ ಗಡವ ಬಿಸಿಲಿನ ಝಳ ತಾಳದೆ ಮುಖ ಮುಂದಾಗಿ ಬಿದ್ದನಂತಲ್ಲಾ! ಆತನ ಸುತ್ತಲೂ ಇದ್ದ ಚೆಡ್ಡಿಗಳು ತಮ್ಮ ನಾಯಕ ವೀರಮರಣವನ್ನಪ್ಪಿದನೆಂದ ಹೆಮ್ಮೆಯಿಂದ ಆನಂದಭಾಷ್ಪಗಳನ್ನು ಹರಿಸುತ್ತ 'ಶ್ರೀರಾಮಕಿ ಜೈ!', 'ಗೋಳ್ವಾಲ್ಕರ್ ಕಿ ಜೈ', 'ಸಾವರ್ಕರ್ ಕಿ ಜೈ' ಎನ್ನುತ್ತಿರುವಾಗಲೇ ಗಡ್ಕರಿ ಎಂಬ ಮೂಟೆಗೆ ಜೀವ ಬಂದು ಮಿಸುಕಾಡಿದನಂತಲ್ಲಾ! ಕೂಡಲೇ ಚೆಡ್ಡಿಗಳು "ಪ್ರತಿಭಟನೆ ವೇಳೆ ವೀರಮರಣವನ್ನಪ್ಪಿ ಮರುಹುಟ್ಟು ಪಡೆದು ಮಿಸುಕಾಡಿದ ಗಡ್ಕರಿಗೆ ಜಯವಾಗಲಿ" ಎಂದು ಗಂಟಲು ಹರಿದುಕೊಂಡರಂತಲ್ಲಾ, ಥೂತ್ತೇರಿ!



* * * * * * * *

ಅತ್ತ ಗಡ್ಕರಿ ಮಕಾಡೆ ಬಿದ್ದಿದ್ದರೆ, ಇತ್ತ ಚೆಡ್ಡಿಗಳಿಗೆ ಪ್ರಿಯನಾದ ನಿತ್ಯಾನಂದಸ್ವಾಮಿ ಪೊಲೀಸರ ಇಲಿ ಬೋನಿಗೆ ಸರಾಗವಾಗಿ ಬಿದ್ದನಂತಲ್ಲಾ, ರಾಸಲೀಲೆ ಪ್ರಕರಣದ ನಂತರ ಹಿಮಾಚಲ ಪ್ರದೇಶದಲ್ಲಿ ನೆಲೆಸಿ, ಹಿಮದುಂಡೆಗಳನ್ನು ಮರ್ಮಾಂಗಕ್ಕೆ ತಾಗಿಸಿಕೊಂಡು ಅನಿರ್ವಚನೀಯ ಸುಖ ಅನುಭವಿಸುತ್ತ ಮತ್ತೊಂದು ಮಜಲಿನ ಆನಂದ ಪಡೆಯುತ್ತಿದ್ದ ಈ ಬಿದೆ ಸ್ವಾಮಿ "ಆನಂದಮಯ ಈ ಲೋಕವೆಲ್ಲಾ, ನಿತ್ಯಾನಂದಮಯ ಈ ದೇಹವೆಲ್ಲಾ" ಎಂದು ಹಾಡುತ್ತಿದ್ದನಂತಲ್ಲಾ, ಹಾಗೆಯೇ ಅಲ್ಲಿಂದಲೇ ತನ್ನ ಢೋಂಗಿ ಭಕ್ತರಿಗೆ "ಎಲ್ಲರೂ ಪ್ರೀತಿ ಮಾಡಿ, ಮನುಷ್ಯನಾಗಿ ಹುಟ್ಟಿದ ಮೇಲೆ ಪ್ರೀತಿ ಮಾಡಬೇಕು. ಆಲಿಂಗನವಿರಬೇಕು. ಅಪ್ಪುಗೆಯಿರಬೇಕು. ಆದರೆ ಎಚ್ಚರ! ಆಧುನಿಕ ಜಗತ್ತಿನ ಅಮಾನುಷ ಕಣ್ಣುಗಳು ನಿಮ್ಮನ್ನ ನೋಡದಂತೆ ಎಚ್ಚರವಹಿಸಿ. ಇಲ್ಲವಾದರೆ ತಲೆಮರೆಸಿಕೊಂಡು ಹಿಮಾಲಯದ ಹಿಮಾಚ್ಛಾದಿತ ಪ್ರದೇಶದಲ್ಲಿ ಅಲೆಯುತ್ತಿರುವ ನನ್ನ ಸ್ಥಿತಿ ನಿಮಗೂ ಬಂದೀತು. ಇಂತಹ ಭೂಗತ ಬದುಕು ನನಗಷ್ಟೇ ಸಾಕು. ನಿಮಗೆ ಬೇಡ" ಎಂಬ ಉಪದೇಶವನ್ನು ರವಾನಿಸುತ್ತಿದ್ದನಂತಲ್ಲಾ, ಥೂತ್ತೇರಿ!

* * * * * * * *

ನಿತ್ಯಾನಂದ ಸ್ವಾಮಿ ಪೊಲೀಸರ ಅತಿಥಿಯಾದುದನ್ನು ಕೇಳಿ ಬೆಚ್ಚಿಬಿದ್ದ ಕೆಲವು ಸ್ವಾಮಿಗಳು "ಛಲಬೇಕು ಸ್ವಾಮಿಗೆ, ಪರಸತಿಯನೊಲ್ಲೆನೆಂಬ ಛಲಬೇಕು ಸ್ವಾಮಿಗೆ, ಪರಧನವನೊಲ್ಲೆನೆಂಬ ಛಲಬೇಕು ಸ್ವಾಮಿಗೆ ಪರಜನವನೊಲ್ಲೆ" ಎಂಬ ಆಧುನಿಕ ವಚನವನ್ನು ಹೊಸೆದು ಅದನ್ನ ಖಂಡ್ರೆ ಕಡೆಯವರಿಗೆ ತೋರಿಸಿದರಂತಲ್ಲಾ, ಖಂಡ್ರೆ ಕಡೆಯ ಕಿಡಿಗೇಡಿಗಳು ಸ್ವಾಮಿಗಳಿಗೆ ತಿರುಮಂತ್ರ ಹೇಳಿ "ಬರೀ ಸ್ವಾಮಿಗಳ ಬಗ್ಗೆ ಬರದಿದ್ದೀರಲ್ರಿ ನಮ್ಮ ಬಗ್ಗೆ ಒಂದಿಷ್ಟು ವಚನ ಬರೀರಲ್ಲ" ಎನ್ನಲಾಗಿ ಕೂಡಲೇ ಶರಣ ಸ್ವಾಮಿಗಳು "ಶರಣರು ಶರಣರನ್ನು ಸಮಾನವಾಗಿ ಕಾಣಬೇಕಯ್ಯಾ, ಛಲಬೇಕು ಶರಣಂಗೆ ಶರಣಧನವನೊಲ್ಲೆನೆಂಬ, ಛಲಬೇಕು, ಶರಣಂಗೆ, ಶರಣರ ಸತಿಯನೊಲ್ಲೆನೆಂಬ, ಛಲಬೇಕು ಶರಣಂಗೆ ಇತ್ಯಾದಿ ಕೆರೆದು ಭಕ್ತರಿಗೆ ಹಂಚಿದರಂತಲ್ಲಾ, ಸದರೀ ವಚನದಿಂದ ಸ್ಫೂರ್ತಿ ಪಡೆದ ಜಂಗಮ ಶರಣರು "ಶರಣರು ತಂದೆ ತಾಯಿಗಳನ್ನು ಗೌರವಿಸಬೇಕು. ಅಕ್ಕತಂಗಿಯರನ್ನು ಅಕ್ಕತಂಗಿಯರಂತೆಯೇ ಕಾಣಬೇಕು. ಎಲ್ಲೇ ಹೋದರೂ ವೀರಶೈವ ಅಥವಾ ಲಿಂಗಾಯತ ಎಂದೇ ಹೇಳಬೇಕು" ಎಂದು ಮುದ್ರಿಸಿಕೊಂಡು ಹಂಚುತ್ತಿವೆಯಂತಲ್ಲಾ, ಸದರಿ ಸೂಕ್ತಿಗಳನ್ನ ನೋಡಿದ ದಲಿತ ಹುಡುಗರು ಬಿದ್ದು ಬಿದ್ದು ನಗುತ್ತಾ "ಈ ಹಾಳು ಶರಣರು ಈಗಲೇ ಹಿಂಗಿದ್ದಾರಲ್ಲಾ, ಇನ್ನ ಬಸವಣ್ಣನ ಕಾಲದಲ್ಲಿ ಹೇಗಿರಬಹುದು? ಈ ಖಂಡ್ರೆ ಪಂಡ್ರೆ ಎಂಬ ಜಾಲಿಮರಗಳನ್ನು ನೋಡಿದರೆ ಬಸವನನ್ನ ಹತ್ಯೆ ಮಾಡಿದವರು ಇಂತವರೇ ಎಂಬುದು ಗದುಗಿನ ಸ್ವಾಮಿಗಳ ಮೇಲಿನ ಹಲ್ಲೆಯಿಂದ ಸಾಬೀತಾಗಿ ಹೋಯ್ತು" ಎಂದು ನಕ್ಕರಂತಲಾ, ಥೂತ್ತೇರಿ!!

* * * * * * * *

ಶರಣರು ಶರಣರ ಮೇಲೆ ಜಗಳಕ್ಕೆ ಬಿದ್ದಿವೆ, ಕಾಂಗೈಗಳು ಕಾಂಗೈ ಮೇಲೆಯೇ ಮಸಲತ್ತು ನಡೆಸಿವೆ ಇವೆಲ್ಲಾ ಸಹಜವೆಂಬಂತೆ ಕಾಣುತ್ತಿರುವಾಗ ನಮ್ಮ ನೆಚ್ಚಿನ ಬಂಗಾರಿ ಮತ್ತೇ ಕುಮಾರ್ ಬಂಗಾರಪ್ಪನ ಮೇಲೆ ಮಚ್ಚುಗತ್ತಿ ಮಸೆಯುತ್ತಿದ್ದಾರಂತಲ್ಲಾ, ಅಸೆಂಬ್ಲಿ ಚುನಾವಣೆ ಇನ್ನು ಮೂರು ವರ್ಷವಿರುವಾಗಲೇ, ಪ್ರೀತಿಯ ಮಗ ಮಧುಬಂಗಾರಪ್ಪನಿಗೆ ಟಿಕೆಟ್ ಕೊಡಿಸಲು ಕುಳಿತಲ್ಲೇ ಮಸಲತ್ತು ಮಾಡುತ್ತಿರುವ ಬಂಗಾರಿಯನ್ನ ಈ ವಿಷಯವಾಗಿ ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಿದಾಗ ರಿಂಗಾಯ್ತು;

ರಿಂಗ್‌ಟೋನ್ : "ಯಾರೇ ಕೂಗಾಡಲಿ, ಊರೇ ಹೋರಾಡಲಿ, ನಿನ ನೆಮ್ಮದಿಗೆ ಭಂಗವಿಲ್ಲ, ಎಮ್ಮೆ ನಿನಗೆ...... "

"ಹಲೋ ಯಾರು?"

"ನಾನು ಸಾರ್ ಯಾಹೂ."

"ಏನ್ರಿ ಯಾಹೂ ಅವ್ರರೆ?"

"ಚೆನ್ನಾಗಿದ್ದೀರ ಸಾರ್?"

"ನನಿಗೇನಾಗಿದೆ, ಚೆನ್ನಾಗೇ ಇದ್ದೀನಿ."

ಥೂತ್ತೇರಿ
ಯಾಹೂ

"ತಾವು ಸೆಟ್ಟುಷ್ಪೇಯರ್ ಅಲವಾ, ಚನ್ನಾಗೇ ಇರತಿರಿ ಆದ್ರೂ ಸುಮ್ಮನೆ ಕೇಳಿದೆ. ಒಂದೆರಡು ಪ್ರಶ್ನೆ ಅವೆ ಸಾರ್."

"ಬೇಗ ಕೇಳಿ."

"ಕುಮಾರ್ ಬಂಗಾರಪ್ಪ ಮತ್ತು ನೀವು ಇನ್ನೂ ಒಂದಾಗಿಲವಂತಲ್ಲಾ ಸಾರ್?"

"ಅದೆಂಗ್ರಿ ಒಂದಾಗಕ್ಕೆ ಸಾಧ್ಯ? ಆತನ್ನ ಹೆತ್ತು, ಹೊತ್ತು, ಬೆಳೆಸಿ, ಮದುವೆ ಮಾಡಿ, ಶಾಸಕನ್ನ ಮಾಡಿ, ಬೇರೆ ಕಳಿಸಿದ್ದಿನಿ. ಇಷ್ಟಾದ್ರು ಜೊತೆಲಿರಕ್ಕಾಗತ್ತ."

"ಅದು ಸಂಸಾರದ ಮಾತಾಯ್ತು ಸಾರ್. ರಾಜಕೀಯವಾಗಿ ಒಂದಾಗಿಲ್ಲವಂತೆ?"

"ಯಾಕ್ರಿ ಒಂದಾಗಬೇಕು? ಅವ್ರರ ದಾರಿ ಅವ್ರರಿಗೆ, ನನ್ನ ದಾರಿ ನನಗೆ."

"ನೀವಿಬ್ರೂ ಒಂದೇ ಪಾರ್ಟಿಲಿದ್ದೀರಲ್ಲವಾ ಸಾರ್?"

"ಒಂದೇ ಪಾರ್ಟಿಲಿರೋರು ಒಂದಾಗಿರಬೇಕು ಅಂತ ನಿಯಮ ಇದಿಯೇನ್ರಿ? ಆ ಶಿವಕುಮಾರ, ಸಿದ್ದರಾಮಯ್ಯ, ಖರ್ಗೆ, ಧರ್ಮಸಿಂಗ್ ಒಂದಾಗಿದ್ದಾರೇನ್ರಿ? ಅವ್ರರೆಲ್ಲಾ ಕಾಂಗ್ರೆಸ್ಸಿಗರೇ ಅಲ್ಲವಾ?"

"ಕಾಂಗ್ರೆಸ್ ಪಾರ್ಟಿ ಮೊದ್ಲಿಂದ ಇರದೆ ಅಂಗಲ್ಲವಾ ಸಾರ್? ಅದಕ್ಕೆ ಅದು ಕಾಂಗ್ರೆಸ್ಸು. ಆದ್ರೆ ಪಂಚಾಯ್ತಿ ಚುನಾವಣೆ ಟೈಮಲ್ಲಿ ಜಗಳ ಆಡಿದ್ರೆ ಹರತಾಳ ಕಾಳಪ್ಪನ ಜನ ಬಂದು ಹರತಾಳ ಮಾಡಲ್ವೇ?"

"ನೋಡ್ರಿ, ಈ ಬಂಗಾರಪ್ಪ ಮೊದ್ಲಿಂದ ಯಾರಿಗೂ ಕೇರ್ ಮಾಡಿಲ್ಲ, ಅಂತ ಇಂದ್ರಾಗಾಂಧಿ, ನರಸಿಂಗರಾವ್, ಹೆಗಡೆ ಗಿಗಡೆ ಯಾರಿಗೂ ಕೇರ್ ಮಾಡದೆ ರಾಜಕಾರಣ ಮಾಡಿದ್ದಿನಿ. ಅಂತಾದ್ರಲ್ಲಿ ಹರತಾಳು, ಗಿರತಾಳು ನನಗೆ ಏನೂ ಮಾಡಕ್ಕಾಗಲ್ಲ."

"ಹರತಾಳು ನಿಮ್ಮ ಮಕ್ಕಳನ್ನ ಸೋಲಿಸಿ ಮಂತ್ರಿ ಆಗಿದ್ದಾರೆ ಸಾರ್. ಮನುಷ್ಯನ ಅವನತಿಗೂ ಒಂದು ಮಿತಿ ಇದೆ ಅಲ್ಲವ ಸಾರ್?"

"ಸರಿಯಾಗಿ ಪ್ರಶ್ನೆ ಕೇಳದ ಕಲ್ತಗಳಿ ಯಾಹೂ."

"ನನಿಗೇನೊ ನಿಮ್ಮ ಹೋರಾಟ ಎಡೂರಪ್ಪ ಮತ್ತು ಅವನ ಮಗನ ವಿರುದ್ಧ ಇರಬೇಕು ಅನ್ನಿಸುತ್ತೆ ಸಾರ್. ಆ ದೇವೇಗೌಡ್ರು ನೋಡಿ ಸಾರ್, ಮಕ್ಕಳು, ಮರಿ, ಸೊಸೆರು, ಬೀಗರು, ಬಿಜ್ಜರು ಎಲ್ಲಾರ್ನು ಎಷ್ಟು ಚೆನ್ನಾಗಿ ಮುಂದಕ್ಕೆ ತಂದು ಸಾಕ್ತಾ ಅವ್ರರೆ. ನೀವು ನಿಮ್ಮ ಏನರ್ಜಿನ ನಿಮ್ಮ ಮಗನ ಅವನತಿಗೆ ಬಳುಸ್ತಿರಲ್ಲ, ಇದು ಸರೀನಾ ಸಾರ್?"


"ಈ ಬಂಗಾರಪ್ಪನ ರಾಜಕಾರಣದ ವಿಶೇಷನೆ ಅದು ಕಂಡ್ರಿ. ನನಗೆ ದ್ರೋಹ ಮಾಡಿದ ಯಾರೇ ಆಗ್ಲಿ, ಅತ ಮಗ ಇರಬವುದು, ಹೆಂಡತಿ ಆಗಿರಬವುದು, ಬ್ರದರಾಗಿರಬವುದು ನಾನು ಸುಮ್ಮನೆ ಬುಡಲ್ಲ, ಈ ಬಂಗಾರಪ್ಪನ ಸ್ಟೈಲೇ ಅದು."

"ಥೂತ್ತೇರಿ!!!"

ಒಂದು ನಿಗೂಢ ಕೊಲೆ!

ರಾಘವೇಂದ್ರ ಏಪ್ರಿಲ್ 15ರ ಬೆಳಗ್ಗೆ ಇದ್ದಕ್ಕಿದ್ದಂತೆ ನಾಪತ್ತೆಯಾದ. ಮಾರನೇ ದಿನ ಏಪ್ರಿಲ್ 16ರಂದು ಹೆಣವಾಗಿ ತಮಿಳುನಾಡಿನಲ್ಲಿ ಪತ್ತೆಯಾದ. ಈ ನಿಗೂಢ ಹತ್ಯಾ ಪ್ರಕರಣದ ಬೆನ್ನು ಹತ್ತಿ ಹೋಗುತ್ತಿದ್ದಂತೆ ತೆರೆಮರೆಯಲ್ಲಿದ್ದ ಅನೇಕ ಸಂಗತಿಗಳು ಹೊರಬೀಳುತ್ತಿವೆ. ಪ್ರೇಮಪ್ರಕರಣ, ಗೂಂಡಾಗಿರಿ ಹಾಗೂ ಹೈಲೆವೆಲ್ ರಾಜಕೀಯ ಲಿಂಕುಗಳಿರುವ ಜನರಿಂದ ಈ ಹತ್ಯೆ ನಡೆದಿರಬಹುದು ಗೃಹಮಂತ್ರಿ ಆಚಾರ್ಯರ ಬಂಟ ಯಶವಂತ ಸುವರ್ಣನಿಗೆ ಈಗ ಹತ್ಯೆಗೀಡಾಗಿರುವ ರಾಘವೇಂದ್ರನ ಬಗ್ಗೆ ಅಸಹನೆ ಇತ್ತು

• ಪಾರ್ವತೀಶ
bparvateesha@gmail.com



ಗೃಹಸಚಿವ ಆಚಾರ್ಯ ಭಂಟನ ಕೈವಾಡ ಶಂಕೆ?

ಕರ್ನಾಟಕದ ಹಾಲಿ ಗೃಹ ಸಚಿವ ವಿ.ಎಸ್. ಆಚಾರ್ಯ ಪಾಲಿಗೆ ಇನ್ನೊಂದು 'ರಶೀದ್ ಕೊಲೆ' ಪ್ರಕರಣ ಆಗಬಹುದಾದಂತಹ ಹತ್ಯೆಯೊಂದು ತಣ್ಣಗೆ ನಡೆದುಹೋಗಿದೆ. ಮೊನ್ನೆ ಏಪ್ರಿಲ್ 16ರಂದು ಬೆಳಗ್ಗೆ ಉಲಂದೂರು ಪೇಟ್ ಎಂಬಲ್ಲಿ 28 ವರ್ಷದ ಯುವಕನೊಬ್ಬನ ಅರೆಸುಟ್ಟ ಶವವೊಂದು ಪತ್ತೆಯಾಯಿತು. ಈ ಉಲಂದೂರ್ ಪೇಟ್ ಇರುವುದು ತಮಿಳುನಾಡಿನಲ್ಲಿ. ಬೆಂಗಳೂರಿನಿಂದ ದಕ್ಷಿಣಕ್ಕೆ ಅಂದಾಜು 300 ಕಿ.ಮೀ.ನಷ್ಟು ದೂರದಲ್ಲಿ ಸಿಕ್ಕ ಆ ಯುವಕನ ಶವದೊಂದಿಗೆ ಸುಟ್ಟುಹೋದ ಟಿವಿಎಸ್ ವಿಕ್ಟರ್ ಬೈಕ್ ಸಹ ಇತ್ತು.

ಅಸಹಜ ಸಾವಿನ ಪ್ರಕರಣ ದಾಖಲಿಸಿಕೊಂಡ ಉಲಂದೂರ್‌ಪೇಟ್ ಪೋಲೀಸರಿಗೆ ಮೃತದೇಹದ ಬಳಿ ಒಂದು ವಾಚು, ಉಂಗುರು, ಬೆಳ್ಳಿಯ ಉಡುದಾರ, ಅರೆಸುಟ್ಟಿದ್ದ ಮೊಬೈಲ್ ಹಾಗೂ ಮೋಟಾರ್ ಬೈಕಿನ ನಂಬರ್ ಪ್ಲೇಟ್ ಸಿಕ್ಕಿದೆ.



ಬಿಜೆಪಿ ನಾಯಕರೊಂದಿಗೆ ಯಶವಂತ

ಕೆಎ-20 ಯು 4756 ನಂಬರಿನ ಬೈಕಿನ ಜಾತಕ ಹುಡುಕಿದ ತಮಿಳು ನಾಡಿನ ಪೋಲೀಸರಿಗೆ ಕೊಲೆಗೀಡಾಗಿದ್ದ ಯುವಕನ ವಿವರ ತಿಳಿಯುವುದು ತಡವಾಗಲಿಲ್ಲ. ಅದು ಉಡುಪಿ ಜಿಲ್ಲೆಯ ರಿಜಿಸ್ಟ್ರೇಷನ್ ನಂಬರ್ ಹೊಂದಿದ್ದ ಮೋಟಾರ್ ಬೈಕ್ ಆಗಿತ್ತು. ಹಾಗೂ ಆ ಬೈಕ್ ರಾಘವೇಂದ್ರ ಎಂಬುವವನ ಹೆಸರಿನಲ್ಲಿತ್ತು.

ಕಾರ್ಕಳ ತಾಲ್ಲೂಕಿನ ಅಜೆಕಾರು ಗ್ರಾಮದವನಾಗಿದ್ದ ರಾಘವೇಂದ್ರನಿಗೆ ಯಾರೂ ಶತ್ರುಗಳಿರಲಿಲ್ಲ. ಉಡುಪಿಯ ವೈಕುಂಠ ಬಾಳಿಗ ಲಾ ಕಾಲೇಜಿನಲ್ಲಿ ಲಾ ಓದಿದ್ದ ರಾಘವೇಂದ್ರ ಕಳೆದ ನಾಲ್ಕು ವರ್ಷಗಳಿಂದ ಬೆಂಗಳೂರಿನ ಕೋರಮಂಗಲದಲ್ಲಿರುವ ಪ್ರಾಪರ್ಟಿ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಎನ್ನುವ ದೊಡ್ಡ ರಿಯಲ್ ಎಸ್ಟೇಟ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ. ಬೆಂಗಳೂರಿನ ಮುನೇಶ್ವರ ಬ್ಲಾಕ್‌ನಲ್ಲಿ ಪುಟ್ಟ ಮನೆಯೊಂದನ್ನು ಬಾಡಿಗೆಗೆ ಹಿಡಿದು ವಾಸವಿದ್ದ. ಜೊತೆಯಲ್ಲಿ ಬಾಲಚಂದ್ರ ಎಂಬ ವಕೀಲ ಮಿತ್ರನೂ ಅದೇ ಬಾಡಿಗೆ ಮನೆಯಲ್ಲಿದ್ದರು.

ಹೀಗಿದ್ದ ರಾಘವೇಂದ್ರ ಏಪ್ರಿಲ್ 15ರ ಬೆಳಗ್ಗೆ ಇದ್ದಕ್ಕಿದ್ದಂತೆ ನಾಪತ್ತೆಯಾದ. ಮಾರನೇ ದಿನ ಏಪ್ರಿಲ್ 16ರಂದು ಹೆಣವಾಗಿ ತಮಿಳುನಾಡಿನಲ್ಲಿ ಪತ್ತೆಯಾದ. ಈ ನಿಗೂಢ ಹತ್ಯಾ ಪ್ರಕರಣದ ಬೆನ್ನು ಹತ್ತಿ ಹೋಗುತ್ತಿದ್ದಂತೆ ತೆರೆಮರೆಯಲ್ಲಿದ್ದ ಅನೇಕ ಸಂಗತಿಗಳು ಹೊರಬೀಳುತ್ತಿವೆ.

ಪ್ರೇಮಪ್ರಕರಣ, ಗೂಂಡಾಗಿರಿ ಹಾಗೂ ಹೈಲೆವೆಲ್ ರಾಜಕೀಯ ಲಿಂಕುಗಳಿರುವ ಜನರಿಂದ ಹತ್ಯೆ ನಡೆದಿರಬಹುದಾದ ಸಾಧ್ಯತೆಗಳಿವು.

ಯಶವಂತ ಸುವರ್ಣನ ಮನೆ ವ್ಯವಹಾರ

ಉಡುಪಿಯ ನಟೋರಿಯಸ್ ಭಜರಂಗಿ ಯಶವಂತ ಸುವರ್ಣ ಈಗ ಸ್ಥಳೀಯ ಬಿಜೆಪಿ ಲೀಡರ್‌ಗಳಲ್ಲಿ ಒಬ್ಬನಾಗಿದ್ದಾನೆ. ಜೊತೆಗೆ ಗೃಹಸಚಿವ ಡಾ.ವಿ.ಎಸ್. ಆಚಾರ್ಯರ ಬಲಗೈ ಬಂಟನಂತೆಯೂ ಓಡಾಡುತ್ತಿರುತ್ತಾನೆ. ಈ ಯಶವಂತ ಸುವರ್ಣನೇ 2005ರ ಕುಖ್ಯಾತ ಆದಿ ಉಡುಪಿ ದೌರ್ಜನ್ಯ ಪ್ರಕರಣದಲ್ಲಿ ಹಾಜಬ್ಬ-ಹುಸನಬ್ಬರನ್ನು ಬೆತ್ತಲುಗೊಳಿಸಿ ದಾಂಧಲೆ ಎಬ್ಬಿಸಿದ್ದಾತ. ಆ ನಂತರವೂ ಅನೇಕ ಕ್ರಿಮಿನಲ್ ಕೆಲಸಗಳನ್ನು ನಡೆಸಿರುವ ಯಶವಂತ ಸುವರ್ಣನು ಈಗ ಹತ್ಯೆಗೀಡಾಗಿರುವ ರಾಘವೇಂದ್ರನ ರಾಶಿಯೊಳಗೆ ಬಂದಿರಬಹುದಾದ ಸಾಧ್ಯತೆಗಳಿವೆ.

ರಾಘವೇಂದ್ರ ಉಡುಪಿಯ ವೈಕುಂಠ ಬಾಳಿಗಾ ಲಾ ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಯಶವಿಲ್ ಎಂಬ ಹುಡುಗಿಯನ್ನು ಪ್ರೀತಿಸುತ್ತಿದ್ದ ಎನ್ನಲಾಗಿದೆ. ನಂತರ ರಾಘವೇಂದ್ರ ಬೆಂಗಳೂರಿಗೆ ಬಂದ. ಯಶವಿಲ್ ಈಗ ಗೋವಾದಲ್ಲಿ ಕರ್ನಾಟಕ ಬ್ಯಾಂಕ್‌ನಲ್ಲಿ ಕೆಲಸದಲ್ಲಿದ್ದಾಳೆ. ಈ ನಡುವೆ ರಾಘವೇಂದ್ರ ಮತ್ತು ಯಶವಿಲ್‌ರ ಮದುವೆಗೆ ಜಾತಿ, ಅಂತಸ್ತು ಹಿರಿಯರ ಪ್ರತಿಷ್ಠೆಗಳೆಲ್ಲಾ ಅಡ್ಡಿಯಾಗಿ ಮದುವೆ ಅಸಾಧ್ಯ ಎಂಬ ಪರಿಸ್ಥಿತಿ ಬಂದಿದೆ. ಆದರೆ ಇವರಿಬ್ಬರೂ ಅದನ್ನೂ ಲೆಕ್ಕಿಸದೆ ಪರಸ್ಪರ ಸಂಪರ್ಕದಲ್ಲೇ ಇದ್ದರು. ಆದರೆ ಕಳೆದ ತಿಂಗಳು ಯಶವಿಲ್‌ಳ ಮದುವೆಯ ನಿಶ್ಚಿತಾರ್ಥ ಬೇರೊಬ್ಬ ಹುಡುಗನೊಂದಿಗೆ ಆಗೇ ಹೋಯಿತು. ಆದರೂ ಯಶವಿಲ್‌ಳ ಮದುವೆ ಸರಾಗವಾಗಿ ಮಾಡಿ ಮುಗಿಸಲು ರಾಘವೇಂದ್ರನೇ ಅಡ್ಡಿ ಎಂಬ ಅನುಮಾನ ಯಶವಿಲ್‌ಳ ಕುಟುಂಬದವರಿಗಿತ್ತು. ಈ ನಡುವೆ ರಾಘವೇಂದ್ರ ಆಫೀಸು ಹಾಗೂ ಮನೆಯಲ್ಲಿ ಮಂಕಾಗಿರುತ್ತಿದ್ದ. ಕೊನೆಗೆ ಏಪ್ರಿಲ್ 15ರಂದು ನಿಗೂಢವಾಗಿ ಕಾಣೆಯಾಗಿ ಹತ್ಯೆಗೀಡಾಗಿದ್ದಾನೆ.



ಯಶವಂತ

ಅಂದಹಾಗೆ ಈ ಯಶವಿಲ್ ಬೇರೆ ಯಾರೂ ಅಲ್ಲ.

ಉಡುಪಿಯ ನಟೋರಿಯಸ್ ಭಜರಂಗಿ ಯಶವಂತ್ ಸುವರ್ಣನ ಖಾಸಾ ತಂಗಿ. ಇದೇ ಯಶವಂತ್ ಸುವರ್ಣ ರಾಜ್ಯ ಗೃಹ ಸಚಿವ ಆಚಾರ್ಯರ ಬಲಗೈ ಬಂಟನೂ ಹೌದು. ಯಶವಿಲ್‌ಳ ಈ ಕೌಟುಂಬಿಕ ಹಿನ್ನೆಲೆ ಹಾಗೂ ಯಶವಂತ್ ಸುವರ್ಣನ ಕ್ರಿಮಿನಲ್ ಟ್ರ್ಯಾಕ್ ರೆಕಾರ್ಡ್ ಗಮನಿಸಿದರೆ ರಾಘವೇಂದ್ರನ ಅಸಹಜ ಸಾವಿನ ಸುತ್ತಾ ಅನುಮಾನ ಬಾರದಿರದು.

ಏಪ್ರಿಲ್ 15, ನಡೆದದ್ದೇನು?

ತನ್ನ ಕೆಲಸದಲ್ಲಿ ಯಾವಾಗಲೂ ಅಚ್ಚುಕಟ್ಟುತನ ತೋರುತ್ತಿದ್ದ ರಾಘವೇಂದ್ರ, ಗೆಳತಿ ಯಶವಿಲ್‌ಳ ಎಂಗೇಜ್‌ಮೆಂಟ್ ಆದಾಗಿನಿಂದ ಡಲ್ಲಾಗಿಬಿಟ್ಟಿದ್ದ. ತಾನು ಕೊಲೆಗೀಡಾಗುವ ಒಂದು ವಾರದ ಹಿಂದೆ ಧರ್ಮಸ್ಥಳಕ್ಕೂ ಹೋಗಿಬಂದಿದ್ದಾನೆ. ಏಪ್ರಿಲ್ ಮೊದಲ ವಾರದಲ್ಲಿ ತನ್ನ ಕಂಪೆನಿಯ ಕೆಲಸದ ಮೇಲೆ ದೇವನಹಳ್ಳಿಯ ಪ್ರಾಜೆಕ್ಟ್ ಏರಿಯಾಗೂ ಹೋಗಿಬಂದಿದ್ದಾನೆ. ಆದರೆ ಕಂಪೆನಿಯ ಹ್ಯೂಮನ್ ರಿಸೋರ್ಸಸ್ ವಿಭಾಗದಲ್ಲಿದ್ದ ರಾಘವೇಂದ್ರ ಏಪ್ರಿಲ್ 12ರ ನಂತರ ಆಫೀಸಿಗೆ ಹೋಗಲಿಲ್ಲ. ಸದಾ ಮುನೇಶ್ವರ ಬ್ಲಾಕಿನಲ್ಲಿನ ಮನೆಯಲ್ಲೇ ಇರುತ್ತಿದ್ದ. ಅದೇರೀತಿ ಏಪ್ರಿಲ್ 15ರ ಬೆಳಗ್ಗೆ ಅವನ ರೂಂಮೇಟ್ ಬಾಲಚಂದ್ರ ಕೋರ್ಟ್‌ಗೆ ಹೊರಟಾಗಲೂ ರಾಘವೇಂದ್ರ ಇನ್ನೂ ಮಲಗೇ ಇದ್ದ. ಆಗ ಸಮಯ ಬೆಳಗ್ಗೆ ಎಂಟೂವರೆ ಆಗಿತ್ತು.

ಆಚಾರ್ಯ ಕೈಗೆ ಮತ್ತೆ ನೆತ್ತರು

ಡಾ. ವಿ.ಎಸ್. ಆಚಾರ್ಯ ರಾಜ್ಯದ ಗೃಹ ಸಚಿವರಾದ ನಂತರ ಅವರ ಆಪ್ತವಲಯದವರಿಗೇ ನೇರವಾಗಿ ಸಂಬಂಧಿಸಿದ ಎರಡನೇ ಕೊಲೆ ಪ್ರಕರಣ ಇದು.

ಮೊದಲನೆಯದು ಪದ್ಮಾಪ್ರಿಯ ಭಟ್ ಹತ್ಯೆ. ಈಕೆ ಉಡುಪಿಯ ಶಾಸಕ ರಘುಪತಿ ಭಟ್‌ರ ಪತ್ನಿ. ಈಕೆಯ ಸಾವಿನ ತನಿಖೆಯು ಎಂದಿಗೂ ದಡ ಸೇರದಂತೆ ನೋಡಿಕೊಂಡವರಲ್ಲಿ ಆಚಾರ್ಯರೇ ಪ್ರಮುಖರು.



ಏಕೆಂದರೆ ರಘುಪತಿ ಭಟ್ಟ ಪಕ್ಷ, ಜಾತಿ ಸಿದ್ಧಾಂತದಲ್ಲಿ ಆಚಾರ್ಯರ ಪಟಾಲಮ್ಮೇ ತಾನೆ. ಈಗ ರಾಘವೇಂದ್ರನ ಕೊಲೆಯಾಗಿದೆ. ಉಡುಪಿಯಲ್ಲಿ ಆಚಾರ್ಯರ ಬಲಗೈ ಭಂಟನಂತಿರುವ ಯಶವಂತ ಸುವರ್ಣನ ತಂಗಿಯನ್ನು ಪ್ರೀತಿಸಿದ ತಪ್ಪಿಗೆ ರಾಘವೇಂದ್ರನ ಕೊಲೆಯಾಗಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ.

ಆದರೂ ಆಚಾರ್ಯರಿಗದು ಕಾಣುತ್ತಿಲ್ಲ. ದುರಂತ ಏನೆಂದರೆ ಉಲಂದೂರು ಪೇಟ್‌ನಿಂದ ಪೊಲೀಸರು ಬಂದು ಇಲ್ಲಿ ತನಿಖೆ ಶುರು ಮಾಡಿದ್ದಾರೆ. ಆದರೆ ರಾಜ್ಯ ಪೊಲೀಸರಿಂದ ಅವರಿಗೆ ಸಹಕಾರ ಸಿಗುತ್ತಿಲ್ಲ. ತನ್ನ ಭಂಟನ ವಿರುದ್ಧ ತನಿಖೆಗೆ ಆಚಾರ್ಯರು ಒಪ್ಪುತ್ತಾರೆಂಬುದು ಭ್ರಮೆಯಷ್ಟೇ?

ಯಶವಂತ್ ಸುವರ್ಣನ ಕ್ರಿಮಿನಲ್ ಜಾತಕ

ರಾಘವೇಂದ್ರನ ಹತ್ಯೆಯ ಹಿಂದೆ ಬೇರೆ ಏನೇನು ಕಾರಣಗಳಿರಬಹುದು ಎಂದು ಹುಡುಕುವ ಮೊದಲು ಪೊಲೀಸರು ಭಜರಂಗಿ ಕ್ರಿಮಿನಲ್ ಯಶವಂತ್ ಸುವರ್ಣನ ಚಲನವಲನಗಳನ್ನು ತನಿಖೆಗೆ ಒಳಪಡಿಸಬೇಕಿದೆ.

ಹಾಲಿ ದಕ್ಷಿಣ ಕನ್ನಡ ಜಿಲ್ಲಾ ಮೀನುಗಾರರ ಫೆಡರೇಷನ್ನಿನ ಅಧ್ಯಕ್ಷನಾಗಿರುವ ಸುವರ್ಣ ಅದೇ ವೇಳೆಯಲ್ಲಿ ಹಿಂದೂ ಯುವಜನ ಸಭಾದ ನಾಯಕನೂ ಆಗಿದ್ದಾನೆ.

2005 ರ ಮಾರ್ಚ್ ತಿಂಗಳಿನಲ್ಲಿ ಹಾಜಬ್ಬ-ಹುಸನಬ್ಬರೆಂಬ ಇಬ್ಬರು ಬಡ ಮುಸಲ್ಮಾನರನ್ನು ದನ ಸಾಗಾಣಿಕೆಯ ಆರೋಪ ಹೊರಿಸಿ ತಾನೇ ನ್ಯಾಯಾಧೀಶನಂತೆ ಅವರಿಬ್ಬರ ಬಟ್ಟೆ ಬಿಚ್ಚಿಸಿ ದೌರ್ಜನ್ಯ ನಡೆಸಿದ್ದ ಇವನು. ಮೀಟರ್ ಬಡ್ಡಿ ದಂಧೆಕೋರನಾಗಿ, ನಂತರ ಫೈನಾನ್ಸ್ ರಿಕವರಿ ಏಜೆಂಟನಾಗಿದ್ದ ಸುವರ್ಣ ಆಮೇಲೆ ಪಾಲುದಾರಿಕೆಯಲ್ಲಿ ಒಂದು ಬಸ್‌ಗೆ ಮಾಲೀಕನಾಗಿಬಿಟ್ಟ. ಹಾಲಿ ಉಡುಪಿ ಶಾಸಕ ರಘುಪತಿ ಭಟ್ಟನ ವಿರೋಧಿ ಗ್ಯಾಂಗ್ ಸೇರಿಕೊಂಡು ಕೆಲಕಾಲ ಸುಧಾಕರ ಶೆಟ್ಟಿ ಜೊತೆಗೂ ಇದ್ದ. ಉಡುಪಿ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲೊಮ್ಮೆ ಕಲ್ಯಾಣಪುರ ಕ್ಷೇತ್ರದಲ್ಲಿ ವಿವಾದವೆದ್ದಾಗ ತಾಲ್ಲೂಕು ಪಂಚಾಯತಿಯ ಮಾಜಿ ಮೆಂಬರ್ ಸುಧಾಕರ್‌ಗೆ ಚಾಕು ಹಾಕಿ ತಿವಿದುಬಿಟ್ಟಿದ್ದ ಈ ಸುವರ್ಣ. ಇವನ ನಟೋರಿಟಿ ನೋಡಿ ತಾಳಲಾಗದೆ ಭಜರಂಗ ದಳದವರೇ ಆಚೆ ಓಡಿಸಿದರೆಂದರೆ ಯಶವಂತ್ ಸುವರ್ಣನ ಭಯೋತ್ಪಾದನೆ ಅದಿನ್ನೆಷ್ಟು ಮಟ್ಟಕ್ಕಿರಬಹುದು ಯೋಚಿಸಿ?



ಯಶವಂತ್ ಸುವರ್ಣ

ಈಗ ರಾಘವೇಂದ್ರನ ಕೊಲೆ ವಿಚಾರಕ್ಕೆ ಮತ್ತೆ ಬರುವುದಾದರೆ ಈ ಸುವರ್ಣನಿಗೆ ತನ್ನ ತಂಗಿ ಯಶವಿಲ್‌ಳ ತಲೆ ಕೆಡಿಸುತ್ತಿದ್ದಾನೆ ರಾಘವೇಂದ್ರ ಎಂಬ ಆಕ್ರೋಶವಿದ್ದಿರಬಹುದು. ಜೊತೆಗೆ ಆಕೆಗೆ ಎಂಗೇಜ್‌ಮೆಂಟ್ ಕೂಡ ಮುಗಿದು ಹೋಗಿರುವಾಗ ರಾಘವೇಂದ್ರ ಈಗಲೂ ತಂಗಿಯ ಜೊತೆ ಮಾತನಾಡುತ್ತಿರುವುದು ಅವನಿಗೆ ಉರಿ ತರಿಸಿರಲಿಕ್ಕೂ ಸಾಕು. ಏಕೆಂದರೆ ರಾಘವೇಂದ್ರನ ಮನೆಯಲ್ಲಿ ಸಿಕ್ಕಿರುವ ಡೈರಿಯಲ್ಲಿ ಯಶವಿಲ್ ಹಾಗೂ ತನ್ನ ಸ್ನೇಹದ ಬಗ್ಗೆ ರಾಘವೇಂದ್ರ ಅನೇಕ ಸಂಗತಿಗಳನ್ನು ಬರೆದುಕೊಂಡಿರುವುದು ಪೊಲೀಸರ ಗಮನಕ್ಕೆ ಬಂದಿದೆ. ಅಷ್ಟೇ ಅಲ್ಲ ಯಶವಿಲ್‌ಗೆ ಗಿಫ್ಟ್ ನೀಡಲು ರಾಘವೇಂದ್ರ ಕೆಲವು ಹೊಸ ಬಟ್ಟೆಗಳನ್ನು ತಂದಿರಿಸಿದ್ದು ಮನೆಯಲ್ಲೇ ಸಿಕ್ಕಿದೆ.

ಇದರರ್ಥ

ಎಂಗೇಜ್‌ಮೆಂಟ್ ನಂತರವೂ ಯಶವಿಲ್ ಹಾಗೂ ರಾಘವೇಂದ್ರ contact ನಲ್ಲಿದ್ದರು ಎಂತಲೇ ಆಗುತ್ತದೆ. ಈಗ ಹೇಳಿ, ರಾಘವೇಂದ್ರನನ್ನು ಶಾಶ್ವತವಾಗಿ ಇಲ್ಲವಾಗಿಸುವ ಯೋಚನೆ ಯಾರಿಗೆ ಬರಲು ಸಾಧ್ಯ ಎಂದು?

ಂದೇ ಕೊನೆ.

ಾಘವೇಂದ್ರನನ್ನು ಯಾರೂ ಜೀವಂತವಾಗಿ ನೋಡಲೇ ಸಂಜೆ ಕೋರ್ಟು ಮುಗಿಸಿಕೊಂಡು ರೂಂಮೇಟ್ ಚಂದ್ರ ವಾಪಸ್ ಬಂದಾಗ ಅಲ್ಲಿ ಅವರಿಗೊಂದು ಸಿಕ್ಕಿದೆ.

ನಾನು ಅರ್ಜೆಂಟಾಗಿ ಆಚೆ ಹೋಗುತ್ತಿದ್ದೇನೆ. ಮುಲ್ಲಿರುವ ನನ್ನ ವಸ್ತುಗಳನ್ನು ನಮ್ಮ ಊರಿಗೆ ಕಳಿಸಿ ನೇ ಮನೆಯ ಅಡ್ವಾನ್ಸ್ ಹಣವನ್ನು ವಾಪಸ್ ು ಯಶವಿಲ್‌ಳ ಆಕ್ಸಿಸ್ ಬ್ಯಾಂಕ್ ಅಕೌಂಟ್ ್...ಗೆ ಜಮಾ ಮಾಡಿಬಿಡಿ" ಎಂಬ ಒಕ್ಕಣೆ ಆ ್ಲಿತ್ತು. ಪತ್ರ ಓದಿ ಗಾಬರಿಯಾದ ಬಾಲಚಂದ್ರ ವನ್ನು ರಾಘವೇಂದ್ರರ ಅಣ್ಣ ಶ್ರೀನಿವಾಸ್‌ಗೆ ಸಿದ್ದಾರೆ. ಅವರು ಕಾರ್ಕಳದಿಂದ ಬೆಂಗಳೂರಿನತ್ತ ು ಬರುತ್ತಿರುವಾಗಲೇ ತಮಿಳುನಾಡು ಪೊಲೀಸ ಾಘವೇಂದ್ರನ ಶವ ಪತ್ತೆಯಾದ ಮಾಹಿತಿ ಸಿಕ್ಕಿದೆ. ನ ನೇರ ಬೆಂಗಳೂರು-ಹೊಸೂರು-ಕೃಷ್ಣಗಿರಿ- ್ಣಾಮಲೈ ಮಾರ್ಗ ಹಿಡಿದು ವೆಲ್ಲುಪುರಂ ಜಿಲ್ಲೆಯ ದೂರ್ ಪೇಟೆಗೆ ಹೋದ ಕುಟುಂದವರು ರಾಘ ನ ಅರೆ ಸುಟ್ಟ ಶವ ಗುರುತು ಹಚ್ಚಿದ್ದಾರೆ.

ನದ ಬಳಿ ರಾಘವೇಂದ್ರನ ವಾಚು, ಉಂಗುರ, ಉಡುದಾರ ಇತ್ತು. ಆದರೆ ಬೈಕ್ ಹತ್ತಿರ ಹೆಲ್ಮೆಟ್ ್ತೆ.

ಘವೇಂದ್ರ ಭಗ್ನಪ್ರೇಮಿಯಾಗಿ ಆತ್ಮಹತ್ಯೆ ಕೊಂಡಿರಬಹುದಾ ಎನ್ನಲು ಸಕಾರಣಗಳಿಲ್ಲ. ವುದೇ ನಿಜವಾದರೆ ಬೆಂಗಳೂರಿನಿಂದ ಮುನ್ನೂರು ಗಳಷ್ಟು ದೂರದ ಅಪರಿಚಿತ ಸ್ಥಳವನ್ನು ಯಾರಾದರೂ ಆರಿಸಿಕೊಳ್ಳುತ್ತಾರೆ? ಇಷ್ಟಕ್ಕೂ ರಾಘವೇಂದ್ರ ನೇಣು, ವನೆ ಅಥವಾ ಆಕ್ಸಿಡೆಂಟ್‌ನಿಂದಾಗಿ ಸತ್ತಿಲ್ಲ. ಅವನ ಬೆಂಕಿಹಚ್ಚಿ ಬೈಕ್ ಸಮೇತ ಸುಡಲಾಗಿದೆ. ನ್ಯಾಷನಲ್ 45 ಉಲಂದೂರ್‌ಪೇಟೆಯನ್ನು ಸೀಳಿ ಹೋಗುತ್ತದೆ. ಂದ್ರನ ಶವ ಊರಿಂದ ಕೊಂಚ ಹೊರಭಾಗದಲ್ಲಿ ್ ಠಾಣೆಯಿಂದ ಒಂದೂವರೆ ಕಿ.ಮೀ. ದೂರದಲ್ಲಿ ಗಿದೆ. ಅವನ ವಾಚ್ ಏಪ್ರಿಲ್ 15ರ ಬೆಳಗ್ಗೆ ಕ್ಕೆ ನಿಂತುಹೋಗಿದೆ.

ಮಿಳುನಾಡಿನ ಉಲಂದೂರ್‌ಪೇಟೆಯ ಇನ್ಸ್‌ಪೆಕ್ಟರ್ ಲನ್ ರಾಘವೇಂದ್ರನ ಕೊಲೆಯ ಜಾಡು ಬೆನ್ನತ್ತಿ ಂಗಳೂರಿಗೆ ಬಂದಿದ್ದಾರೆ. ರಾಘವೇಂದ್ರನ ಹತ್ತಿರ ಬಳಕೆಯ ಎರಡು ಮೊಬೈಲ್‌ಗಳಿದ್ದವು. ಅವನು ಳಸುತ್ತಿದ್ದ ಮೊಬೈಲ್ ನಂಬರ್ 9964245344ಗೆ 14 ಹಾಗೂ ಏಪ್ರಿಲ್ 15ರ ಬೆಳಗ್ಗೆ ಯಾರ್‍ಯಾರು ಿಡಿದ್ದಾರೆಂಬುದನ್ನು ಪತ್ತೆ ಹಚ್ಚಬೇಕಿದೆ. ಸುಮ್ಮನೆ ಡಿಗೆ ಮನೆಯಲ್ಲಿ ಇದ್ದ ರಾಘವೇಂದ್ರನಿಗೆ ಏಪ್ರಿಲ್ ಬೆಳಗ್ಗೆ ಯಾರೋ ಫೋನ್ ಮಾಡಿ ಆಚೆ ಂಡಿದ್ದಾರೆ. ಹಾಗೆ ಹೊರಡುವ ಮುನ್ನ ತಾನು ಮನೆಗೆ ಮರಳಿ ಬರುವ ಅಗತ್ಯವಿಲ್ಲ ಅನ್ನಿಸಿದೆ, ಂದ್ರನಿಗೆ. ಹಾಗಾಗಿಯೇ ಅವನು ಪತ್ರ ಬರೆದಿಟ್ಟು ನರ್ ಚಿಕ್ಕಣ್ಣನಿಂದ ಅಡ್ವಾನ್ಸ್ ವಾಪಸ್ ಪಡೆದು ಶವಿಲ್‌ಳ ಬ್ಯಾಂಕ್ ಖಾತೆಗೆ ಜಮಾ ಮಾಡುವಂತೆ ನೆ. ಆದರೆ ಆ ಪತ್ರದಲ್ಲೆಲ್ಲೂ ಆತ್ಮಹತ್ಯೆಯ ಅಥವಾ ಸೂಚನೆಗಳಿರಲಿಲ್ಲ. ಬದಲಾಗಿ ಹೊಸ ಸಾಧ್ಯತೆ ನ್ನು ಕಂಡುಕೊಳ್ಳುವ ಪ್ರಯತ್ನವಾಗಿ ಅವನು ಂದ ಹೊರಹೋಗಿದ್ದಾನೆ ಅಥವಾ ಹಾಗೆ ನಂಬಿಸಿ ಂದ್ರನನ್ನು ಯಾರೋ ಕರೆಸಿಕೊಂಡಿದ್ದಾರೆ. ನಂತರ ಯಿತೋ ಏನೋ ಕರೆಸಿಕೊಂಡವರು ರಾಘವೇಂದ್ರನ ಗೆದಿದ್ದಾರೆ. ನಂತರ ಬೈಕ್ ಸಮೇತ ಶವವನ್ನು ು ದಿಕ್ಕಿನತ್ತ ಗಾಡಿಯೊಂದರಲ್ಲಿ ಹೇರಿಕೊಂಡು ್ನ ಪ್ರಯಾಣಿಸಿ ಕೊನೆಗೆ ಉಲಂದೂರ್‌ಪೇಟೆಯಲ್ಲಿ ಹಚ್ಚಿ ಸುಟ್ಟು ಹಾಕಿದ್ದಾರೆ. ಇಲ್ಲಿ ಕೊಲೆಗಾರರ ಸ್ಪಷ್ಟವಾಗಿದೆ. ಶವದ ಗುರುತು ಪತ್ತೆಯಾಗಬಾರದು ು!


ಎಲ್ಲರ ಅನುಮಾನವಿಷ್ಟೇ, 15ರ ಬೆಳಗ್ಗೆ ಂದ್ರನನ್ನು ಕರೆಸಿದ್ದು ಯಾರು? ಈ ಕೊಲೆ ್‌ಳ ಮದುವೆಗಿದ್ದ ಅಡ್ಡಿಯನ್ನು ನಿವಾರಿಸಿಬಿಡುವ

ವಿಲ್‌ಳ ಅಣ್ಣ ಯಶವಂತ ಸುವರ್ಣನಿಗೆ ಂದ್ರನ ಬಗ್ಗೆ ಅಸಹನೆಯಿತ್ತಾ?

ಿ ಬೆಂಗಳೂರಿನ ಮಾಫಿಯಾಗಳು ಮಾಡಿದರಾ? ಾದರೆ ಅವರಿಗೆ ಸುಪಾರಿ ಕೊಟ್ಟವರ್‍ಯಾರಿರ ?

ಪ್ರಶ್ನೆಗಳಿಗೆ ಉತ್ತರ ಕೇಳೋಣವೆಂದರೆ ಮಂತ್ರಿ ರ ಬಲಗೈ ಬಂಟ ಯಶವಂತ ಸುವರ್ಣನೆ ರೋಪಿಯಾಗಿದ್ದಾನೆ. ಇನ್ನು ರಾಘವೇಂದ್ರನಿಗೆ ಗುವುದೆಂತು?

ಸ್ ಹಾಗೂ ಜೆಡಿಎಸ್ ನಾಯಕರು ಈ ಕೊಲೆ ಬಗ್ಗೆ ಕೊಂಚ ಗಮನ ಹರಿಸಿದರೆ ಒಳಿತು.



ನಿತ್ಯಾನಂದ ಸಿಕ್ಕಿಬಿದ್ದಿದ್ದಾನೆ. ಅದೂ ಬೆಂಗಳೂರಿನ ಸಿಓಡಿ ಪೊಲೀಸರ ಕೈಗೇ ಆರಾಮವಾಗಿ ಸೆರೆಸಿಕ್ಕಿದ್ದಾನೆ. ದೂರದ ಹಿಮಾಚಲದ ಯಾವುದೋ ಕುಗ್ರಾಮದಲ್ಲಿ ಬಾಡಿಗೆಗೆ ಬಂಗಲೆ ಹಿಡಿದು ಹಾಯಾಗಿ ಟೈಮ್‌ಪಾಸ್ ಮಾಡಿಕೊಂಡಿದ್ದ ಖದೀಮ ಸ್ವಾಮಿ ನಿತ್ಯಾನಂದನನ್ನು ಸಿಓಡಿ ಪೊಲೀಸರು ಹಿಡಿದು ಹಿಮಾಚಲದ ಕೋರ್ಟಿಗೆ ಕರೆತರುತ್ತಿದ್ದರೆ ಸಣ್ಣದೊಂದು ಉದ್ವೇಗ, ಗಾಬರಿ, ನಾಚಿಕೆ, ಭಯ ಏನೊಂದೂ ಆತನ ಮುಖದಲ್ಲಿರಲಿಲ್ಲ. ಪೊಲೀಸರ ಜೊತೆಗಿನ ಸಲಿಗೆ, ಆತನ ಬಾಡಿ ಲಾಂಗ್ವೇಜ್, ಬಂಧಿಸಿ ಕರೆತಂದ ಪೊಲೀಸರ ವರ್ತನೆ ಮತ್ತು ಇಡೀ ಸನ್ನಿವೇಶದ ನಾಟಕೀಯತೆಯನ್ನು ಗಮನಿಸಿದ ಯಾರಿಗಾದರೂ ನಿತ್ಯಾನಂದನ ಬಂಧನದ 'ಮರ್ಮ' ಅರ್ಥವಾಗಲೇಬೇಕು.

ಹೇಗೂ ತಲೆಮರೆಸಿಕೊಂಡಿದ್ದಷ್ಟು ಕಾಲ ಒಂದಲ್ಲಾ ಒಂದು ತಾಪತ್ರಯವಿದ್ದೇ ಇರುತ್ತೆ. ಅದೇ ಒಮ್ಮೆ ಕೋರ್ಟ್‌ನಿಂದ ಜಾಮೀನು ಸಿಕ್ಕಿತೆಂದರೆ ಆರಾಮವಾಗಿ ಬಿಡದಿ ಆಶ್ರಮ ಸೇರಿಕೊಳ್ಳಬಹುದು. ಯಾವುದಕ್ಕೂ ಹೆದರುವಂತಿಲ್ಲ, ಯಾರ ಮುಲಾಜಿಗೂ ಕಾಯುವಂತಿಲ್ಲ, ತಾನಾಯಿತು, ತನ್ನ ಸಾಮ್ರಾಜ್ಯವಾಯಿತು ಎಂಬಂತಿದ್ದುಬಿಡಬಹುದು. ಆಶ್ರಮದ ಆಸ್ತಿಯನ್ನು ಮಾರುವುದಕ್ಕಾಗಲಿ, ಕೊಟ್ಟ ಸಾಲದ ವಸೂಲಿಗಾಗಲಿ, ಮತ್ತೆ ತನ್ನಿಚ್ಛೆಯ ಕಾರ್ಯಾಚರಣೆಗಾಗಲಿ ಯಾವ ಅಡೆತಡೆಯೂ ಇರುವುದಿಲ್ಲ. ಇಡೀ ಧ್ಯಾನ ಪೀಠ ಮತ್ತದರ ಆಸ್ತಿಪಾಸ್ತಿಯೆಲ್ಲ ತನ್ನ ಸ್ವಂತ ಗಳಿಕೆಯಾದ್ದರಿಂದ ತಾನೇನು ಮಾಡಿದರೂ ಅದನ್ನು ಯಾರೂ ಪ್ರಶ್ನಿಸುವಂತಿಲ್ಲ. ಇಂಥದೊಂದು ಲೆಕ್ಕ ಹಾಕಿಯೇ ನಿತ್ಯಾನಂದ ಪೊಲೀಸರ ಜೊತೆ ಡೀಲು ಕುದುರಿಸಿದನಾ? ಅಥವಾ ಬಿಜೆಪಿ ಸರ್ಕಾರವೇ ಅಂಥದೊಂದು ಅನುಕೂಲವನ್ನು ನಿತ್ಯಾನಂದನಿಗೆ ಕಲ್ಪಿಸಿಕೊಡುತ್ತಿದೆಯಾ?

ಈ ಥರದ ಗುಮಾನಿಗೂ, ಏಪ್ರಿಲ್ 21ರ ಬುಧವಾರ ನಿತ್ಯಾನಂದನ 'ಅರೆಸ್ಟ್' ಕಾರ್ಯಾಚರಣೆಗೂ ಸಂಬಂಧವಿದೆ. ತಿಂಗಳ ಹಿಂದಷ್ಟೇ ಲೈಂಗಿಕ ಹಗರಣಕ್ಕೆ ಸಿಲುಕಿ ರಾತ್ರೋರಾತ್ರಿ ಪರಾರಿಯಾದ ನಿತ್ಯಾನಂದ ಪರಾರಿಯಾದ ಒಂದು ವಾರಕ್ಕೇ ಹರಿದ್ವಾರದ ಲಾಡ್ಜ್ ಒಂದರಲ್ಲಿ ಕಾಣಿಸಿಕೊಂಡಿದ್ದ. ಅದು ನ್ಯೂಸ್ ಚಾನಲ್ಲುಗಳ ಕಣ್ಣಿಗೆ ಬಿದ್ದಿದ್ದೇ ತಡ, ಅಲ್ಲಿಂದ ನಾಪತ್ತೆಯಾದ. ಅನಂತರ ತನ್ನ ಅಡಗುದಾಣದಲ್ಲಿದ್ದುಕೊಂಡೇ ತನ್ನ ಹಿಂಬಾಲಕರಿಗೆ ಸಂದರ್ಶನಗಳನ್ನು ಕೊಟ್ಟ. ಆ ಸಂದರ್ಶನಗಳು ಟೀವಿ ಚಾನೆಲ್‌ಗಳಲ್ಲಿ ಪ್ರಸಾರವಾಗುವಂತೆ ನೋಡಿಕೊಂಡನಲ್ಲದೆ ಅವುಗಳನ್ನು ತನ್ನ ಧ್ಯಾನ ಪೀಠದ ಅಧಿಕೃತ ವೆಬ್‌ಸೈಟಿನಲ್ಲೂ ಪ್ರಕಟಿಸಿಕೊಂಡ. ಸಾಲದ್ದಕ್ಕೆ ತನ್ನ ಪರಮಾಪ್ತರು, ಗೆಳತಿಯರು, ಆಶ್ರಮದ ಸಿಬ್ಬಂದಿಗಳಿಗೆಲ್ಲ ತೆರೆಮರೆಯಲ್ಲಿದ್ದೇ 'ಇಮೇಲ್' ಕಳಿಸುತ್ತಿದ್ದ. ಯಾವತ್ತು ಹರಿದ್ವಾರದ ಲಾಡ್ಜಿನಲ್ಲಿ ನ್ಯೂಸ್ ಚಾನಲ್ಲುಗಳ ಕಣ್ಣಿಗೆ ಬಿದ್ದನೋ ಆನಂತರ ನಿತ್ಯಾನಂದನನ್ನು ನೋಡಿದವರಿಲ್ಲ. ಹೀಗೆ ನಿಗೂಢವಾಗಿ ಹರಿದ್ವಾರದಿಂದ ಕಣ್ಮರೆಯಾದ ನಿತ್ಯಾನಂದನ ವಿರುದ್ಧ ಈ ಹೊತ್ತಿಗಾಗಲೇ ತಮಿಳುನಾಡು ಪೊಲೀಸರು ಕ್ರಿಮಿನಲ್ ಕೇಸುಗಳನ್ನು ದಾಖಲಿಸಿದ್ದರು. ನಂತರ ಅವನ್ನೂ ಕೇಸುಗಳನ್ನು ಬಿಡದಿ ಪೊಲೀಸರಿಗೆ ಒಪ್ಪಿಸಿದ್ದರು. ತನ್ನ ವಿರುದ್ಧ ದಾಖಲಾದ ಕೇಸುಗಳೇನು? ತನಿಖೆ ನಡೆಸುತ್ತಿರುವ ಅಧಿಕಾರಿ ಯಾರು? ದೂರು ಕೊಟ್ಟವರ್‍ಯಾರು? ಇತ್ಯಾದಿ ವಿವರಗಳನ್ನೆಲ್ಲ ಭೂಗತನಾಗಿದ್ದುಕೊಂಡೇ ಕಲೆ ಹಾಕುತ್ತಿದ್ದ ನಿತ್ಯಾನಂದ ಏಪ್ರಿಲ್ ಮೊದಲನೇ ವಾರದ ಹೊತ್ತಿಗೆ ಹಿಮಾಚಲ ಪ್ರದೇಶದ ಮಾವ್ಲಿಗ್ ಎಂಬ ಕುಗ್ರಾಮವನ್ನು ಸೇರಿಕೊಂಡಿದ್ದ.



ಈ ಮಾವ್ಲಿಗ್ ಎಂಬ ಊರಿರುವುದು ಹಿಮಾಚಲ ಪ್ರದೇಶದ ಸೋಲನ್ ಜಿಲ್ಲೆಯ ಕಾರ್ಗಿಯ ಹೊರವಲಯದಲ್ಲಿ. ಪ್ರವಾಸಿಗರು ಬರುವುದೂ ಅಪರೂಪ. ತನ್ನ ದೆಹಲಿ ಮೂಲದ ಗೆಳೆಯ ಮತ್ತು ಕೈಗಾರಿಕೋದ್ಯಮಿಯೊಬ್ಬನ ಬಂಗಲೆಯನ್ನು ಬಾಡಿಗೆಗೆ ಹಿಡಿದಿದ್ದ ನಿತ್ಯಾನಂದ ಅಲ್ಲಿಂದಲೇ ಕಾರ್ಯಾಚರಣೆಗಿಳಿದಿದ್ದಾನೆ. ಅದಕ್ಕೆಂದೇ ತನ್ನ ಶಿಷ್ಯ ಗೋಪಾಲಸೀಲನ್ ರೆಡ್ಡಿ ಅಲಿಯಾಸ್ ನಿತ್ಯ ಭಕ್ತಾನಂದನನ್ನು ಜೊತೆಗಿಟ್ಟುಕೊಂಡಿದ್ದ. ಈ ನಿತ್ಯ ಭಕ್ತಾನಂದ ಹೆಸರಿಗಷ್ಟೇ ಸನ್ಯಾಸಿ. ಅಸಲಿಗಾತ ನಿತ್ಯಾನಂದನ ಪಕ್ಕಾ ಚೇಲಾ. ಬಿಡದಿ ಆಶ್ರಮದಲ್ಲಿ ನಿತ್ಯಾನಂದ ಶುರುವಿಟ್ಟುಕೊಂಡ ವಿಕೃತಿಗಳಿಗೆಲ್ಲ ಸರಬರಾಜುದಾರನಂತಿದ್ದ ಈ ಗೋಪಾಲರೆಡ್ಡಿಯೇ ತಮಿಳು ನಟಿ ರಂಜಿತಾಳನ್ನು ಬೆಂಗಳೂರಿನಿಂದ ಪಿಕ್ ಮಾಡಿಕೊಂಡು ಬಿಡದಿಗೆಕರೆದೊಯ್ಯುತ್ತಿದ್ದಾತ. ಈತನಲ್ಲದೇ ಇನ್ನೂ ಮೂವರು ಖದೀಮ ಶಿಷ್ಯರನ್ನು ನಿತ್ಯಾನಂದ ಕರೆಸಿಕೊಂಡ. ಅವರ ಪೈಕಿ ಒಬ್ಬನ ಹೆಸರೇ ವಿತ ಸಂತಾನಾನಂದ. ಮತ್ತೊಬ್ಬ ಶಿಮ್ಲಾದ ಅರ್ಚಿಲ್ ಸಂಗಿಲ್ ಎಂಬಾತ. ಈತ ಹರಿದ್ವಾರದ 'ತಾಂತ್ರಿಕ್ ಸೆಕ್ಸ್' ಎಂಬ ವಿಕೃತ ಕಾಮಾರಾಧಕ ಸಂತೆ. ಈತನಲ್ಲದೇ ನಿತ್ಯಾನಂದನ ಜೊತೆಗಿದ್ದ ಮತ್ತೊಬ್ಬ ಶಿಷ್ಯನೆಂದರೆ ತಮಿಳುನಾಡಿನ ಕಂಪ್ಯೂಟರ್ ತಜ್ಞ, ಅರುಣ್‌ರಾಜ್!

ಹೀಗೆ ತನಗೆ ಬೇಕಾದ ಒಬ್ಬೊಬ್ಬರನ್ನೇ ಹಿಮಾಚಲಕ್ಕೆ ಕರೆಸಿಕೊಂಡು ಕಾರ್ಯಾಚರಣೆಗಿಳಿದ ನಿತ್ಯಾನಂದನ ಮೊದಲ ಉದ್ದೇಶವೇ ಕೋರ್ಟಿನಿಂದ ಜಾಮೀನು ಗಿಟ್ಟಿಸುವುದಾಗಿತ್ತು. ಅದಕ್ಕೊಂದು ತನ್ನ ಬಿಡದಿ ಆಶ್ರಮದ ಭಟ್ಟಂಗಿಗಳಂತಿದ್ದ ಇಬ್ಬರನ್ನು ನಿತ್ಯಾನಂದ ನೇಮಿಸಿದ್ದ. ಈ ಪೈಕಿ ಒಬ್ಬ ರಾಮನಗರದ ಶಾಂತಿನಿಕೇತನ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ರಾಮಕೃಷ್ಣಯ್ಯನಾದರೆ ಮತ್ತೊಬ್ಬ ಬಿಡದಿಯ ಚೇಲಾ ಪಿಂಗಿ ರಾಜಣ್ಣ. ಇವರಿಬ್ಬರ ಮೂಲಕವೇ ನಿತ್ಯಾನಂದ ವಕೀಲ ಚಂದ್ರಮೌಳಿಯವರನ್ನು ಸಂಪರ್ಕಿಸಿದ್ದಾನೆ. ಆ ಹೊತ್ತಿಗಾಗಲೇ ತಮಿಳುನಾಡು ಪೊಲೀಸರು ನಿತ್ಯಾನಂದನ ವಿರುದ್ಧದ ಪ್ರಕರಣಗಳನ್ನು ಬಿಡದಿ ಪೊಲೀಸರಿಗೆ ಒಪ್ಪಿಸಿಯಾಗಿತ್ತು.

ಒಮ್ಮೆ ಕೋರ್ಟಿನಿಂದ ಜಾಮೀನು ಸಿಕ್ಕಿಬಿಟ್ಟರೆ ತನ್ನ ರಿಯಲ್ ಎಸ್ಟೇಟ್ ವ್ಯವಹಾರದ ಅಡ್ಡಿ ಆತಂಕಗಳೆಲ್ಲ ನಿವಾರಣೆಯಾದಂತೆಯೇ ಎಂದು ನಿತ್ಯಾನಂದ ಲೆಕ್ಕ ಹಾಕಿದ್ದ. ತನಗೆ ಅಂಟಿದ ಕಳಂಕಕ್ಕಿಂತಲೂ ಮಠದ ನೂರಾರು ಕೋಟಿಯ ಆಸ್ತಿಯನ್ನು ಹೇಗೆ ದಕ್ಕಿಸಿಕೊಳ್ಳಬೇಕೆಂಬುದೇ ಆತನ ಮೊದಲ ಉದ್ದೇಶವಾಗಿತ್ತು.

ಏಕೆಂದರೆ ತನ್ನನ್ನು ಮುಗಿಸಲು ಸಂಘ ಪರಿವಾರವೇ ಮುತುವರ್ಜಿ ವಹಿಸಿದೆಯೆಂಬುದು ಆತನಿಗೆ ಚೆನ್ನಾಗಿ ಗೊತ್ತಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ತಾನು ಬೆಳೆಯುವುದನ್ನು ಆರ್ಟ್ ಆಫ್ ಲೀವಿಂಗ್‌ನ ರವಿಶಂಕರ್ ಗುರೂಜಿ ಸಹಿಸುತ್ತಿಲ್ಲ ಎಂಬುದು ಕೂಡ ನಿತ್ಯಾನಂದನ ಗಮನಕ್ಕೆ ಬಂದಿತ್ತು. ಆರೆಸ್ಸೆಸ್, ರವಿಶಂಕರ್ ಗುರೂಜಿ ಮತ್ತು ಬಿಜೆಪಿ ಸರ್ಕಾರಗಳೆಲ್ಲ ಒಟ್ಟಾಗಿಯೇ ತನ್ನ ಮೇಲೆ ಬಿದ್ದಿವೆ ಎಂಬುದು ಮನದಟ್ಟಾಗಿಯೇ ನಿತ್ಯಾನಂದ ಹಿಮಾಚಲ ಹೊಕ್ಕಿ ಕೂತಿದ್ದು. ಇಲ್ಲದಿದ್ದರೆ ಬಿಡದಿ ಆಶ್ರಮದಲ್ಲೋ ಯಾರಾದರೋ ಭಕ್ತರ ಮನೆಯಲ್ಲೋ ಇದ್ದೇ ಜಾಮೀನಿಗೆ ಅರ್ಜಿ ಹಾಕುತ್ತಿದ್ದ.

ಹೀಗೆ ರವಿಶಂಕರ್ ಗುರೂಜಿ, ಆರೆಸ್ಸೆಸ್ ಮತ್ತು ಬಿಜೆಪಿ ಸರ್ಕಾರದ ವಿರುದ್ಧ ವಿಚಿತ್ರ ಭ್ರಾಂತಿಗೆ ಬಿದ್ದ ನಿತ್ಯಾನಂದ ತನ್ನ ಬಳಕೆಗೆಂದು ಒಂದಲ್ಲ ಮೂರು ಲ್ಯಾಪ್‌ಟಾಪ್‌ಗಳನ್ನು ಇಟ್ಟುಕೊಂಡಿದ್ದ. ಎಂಟು ಮೊಬೈಲ್ ಫೋನ್‌ಗಳನ್ನು ಅಸಂಖ್ಯಾತ ಸಿಮ್‌ಕಾರ್ಡುಗಳನ್ನೂ ಒಂದರ ಮೇಲೊಂದಾಗಿ ಬಳಸುತ್ತಿದ್ದ. ಜೊತೆಗೆ ಲಕ್ಷಾಂತರ ರೂಪಾಯಿಗಳ ನಗದು, ಅಮೆರಿಕನ್ ಡಾಲರ್‌ಗಳು ಮತ್ತು ವಿವಿಧ ಟ್ರಾವಲರ್ಸ್ ಚೆಕ್ಕುಗಳನ್ನೂ ಜೊತೆಗಿಟ್ಟುಕೊಂಡಿದ್ದ. ಈ ಪಾಟಿ ಸರಂಜಾಮುಗಳನ್ನಿಟ್ಟುಕೊಂಡು ತನ್ನ ಪರಮಾಪ್ತರನ್ನು ಸಂಪರ್ಕಿಸಿ ತನಗೆ ಜಾಮೀನು ದೊರಕುವಂತೆ ನೋಡಿಕೊಳ್ಳುವುದು ಆತನ ಮೊದಲ ಗುರಿಯಾಗಿತ್ತು. ರವಿಶಂಕರ್ ಗುರೂಜಿಯ ಮಾತುಕೇಳಿ ಬಿಜೆಪಿ ಸರ್ಕಾರ ತನ್ನ ವಿರುದ್ಧ ಮಕ್ಕಳನ್ನು ಲೈಂಗಿಕ ತೃಷೆಗೆ ಬಳಸಿಕೊಂಡ ಗಂಭೀರ ಪ್ರಕರಣಕ್ಕೆ ಸಿಲುಕಿಸುವ ಸಾಧ್ಯತೆಯಿದೆಯೆಂದು ನಿತ್ಯಾನಂದ ಲೆಕ್ಕ ಹಾಕಿದ್ದ. ಅಥವಾ ಯಾರಾದರೂ ಹೆಂಗಸರಿಂದ ತನ್ನ ವಿರುದ್ಧ ಹೊಸ ದೂರುಗಳನ್ನು ದಾಖಲಿಸುವ ಸಾಧ್ಯತೆಯಿದೆಯೆಂಬ ಭೀತಿಯೂ ಆತನಿಗಿತ್ತು.

ಇತ್ತ ರಾಮನಗರದ ಕೋರ್ಟು ಆತನ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮುಂದೂಡುತ್ತಲೇ ಇತ್ತು. ತನ್ನ ವಿರುದ್ಧದ ತನಿಖೆಯನ್ನು ಕೈಬಿಡುವಂತೆ ಹೈಕೋರ್ಟಿಗೆ ಆತ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಲಾಗಿತ್ತು. ಇದೆಲ್ಲವನ್ನೂ ತನ್ನನ್ನು ಮುಗಿಸಲೆಂದು ಬಿಜೆಪಿ ಸರ್ಕಾರ ಮಾಡುತ್ತಿರುವ ಹುನ್ನಾರವೆಂದು ಲೆಕ್ಕ ಹಾಕಿದ ನಿತ್ಯಾನಂದ ಹಿಮಾಚಲದಲ್ಲಿ ಅಡಗಿಟ್ಟುಕೊಂಡೇ ಒಂದಿಬ್ಬರು ಸುಪ್ರೀಂಕೋರ್ಟ್ ನ್ಯಾಯವಾದಿಗಳನ್ನು ಸಂಪರ್ಕಿಸಿದ್ದ. ಸುಪ್ರೀಂಕೋರ್ಟ್‌ನ ಜಡ್ಜ್ ಒಬ್ಬರ ಮೂಲಕ ಕರ್ನಾಟಕದ ಹೈಕೋಟಿನ ನ್ಯಾಯಮೂರ್ತಿಗೆ ಹೇಳಿಸುವ ಪ್ರಯತ್ನವನ್ನೂ ಮಾಡಿದ್ದ.

ಇದೆಲ್ಲವೂ ನಿತ್ಯಾನಂದನ ಭ್ರಾಂತಿ ಮತ್ತು ಭೀತಿಯಾಗಿತ್ತೇ ಹೊರತು ಬಿಜೆಪಿ ಸರ್ಕಾರಕ್ಕೆ ಆತನ ವಿರುದ್ಧ ಸಿಟ್ಟಾಗಲಿ ಜಿದ್ದಾಗಲಿ, ಇರಲೇ ಇಲ್ಲ. ಇಲ್ಲದ ರಿಸ್ಕಿಗೆ ಕೈಹಾಕಿ ಫಜೀತಿ ಮಾಡಿಕೊಳ್ಳುವುದಕ್ಕಿಂತ ಸಾಧ್ಯವಾದಷ್ಟು ಬೇಗ ಇದರಿಂದ ಕೈ ತೊಳೆದುಕೊಳ್ಳುವುದು ಪೊಲೀಸರ ಉದ್ದೇಶವಾಗಿತ್ತು.

ಅದೇ ಉದ್ದೇಶದಿಂದ ಬಿಡದಿ ಪೊಲೀಸರು ಮಾಡಬೇಕಿದ್ದ ತನಿಖೆಯನ್ನು ಸಿಓಡಿಗೆ ವಹಿಸಲಾಯ್ತು. ಸಿಓಡಿಯ ಡಿಜಿಪಿ ಗುರುಪ್ರಸಾದ್ ಉಪಾಯವಾಗಿ ಬಿಡದಿ ಧ್ಯಾನಪೀಠದ ಮುಖ್ಯಸ್ಥ ನಿತ್ಯ ಸಚ್ಚಿದಾನಂದನನ್ನು ಕರೆಸಿಕೊಂಡಿದ್ದೇ ಬುದ್ಧಿ ಹೇಳಿದ್ದಾರೆ. ಇನ್ನು ಎಷ್ಟು ದಿನ ಅಂತ ತಲೆ ಮರೆಸಿಕೊಂಡು ಇರೋದು? ಹಾಕಿರುವ ಕೇಸುಗಳು ಕೂಡ ಕೇಸುಗಳೇನಲ್ಲ, ಒಂದೇ ಹಿಯರಿಂಗ್‌ಗೆ ಜಾಮೀನು ಸಿಕ್ಕಿಬಿಡುತ್ತದೆ. ಒಮ್ಮೆ ಜಾಮೀನು ಸಿಕ್ಕಿತೆಂದರೆ ಅವರ ಪಾಡಿಗೆ ಅವರು ಇದ್ದುಬಿಡಬಹುದಲ್ಲ... ಸುಮ್ಮನೇ ಕೋರ್ಟಿಗೆ ಬಂದು ಅಟೆಂಡ್ ಆಗಲು ಹೇಳಿ.....! ಎಂದಿದ್ದಾರೆ.

ಯಾವತ್ತು ಸಿಓಡಿಯ ವರಿಷ್ಠರಿಂದ ಅಭಯ ಸಿಕ್ಕಿತೋ ಶಿಷ್ಯ ನಿತ್ಯ ಸಚ್ಚಿದಾನಂದ ಅದನ್ನು ಹಿಮಾಚಲದಲ್ಲಿದ್ದ ನಿತ್ಯಾನಂದನಿಗೆ ರವಾನಿಸಿದ್ದಾನೆ. ಹೀಗೆ ಪ್ಲಾನ್ ಮಾಡಿದ ಸಿಓಡಿ ಡಿಜಿಪಿ ಗುರುಪ್ರಸಾದ್, ಡಿವೈಎಸ್ ಯೋಗಪ್ಪನವರನ್ನು ಕರೆದು ನಿತ್ಯ ಸಚ್ಚಿದಾನಂದನ ಮೊಬೈಲ್ ಟ್ಯಾಪ್ ಮಾಡುವ ಸೂಚನೆಯನ್ನೂ ಕೊಟ್ಟಿದ್ದಾರೆ. ಸಿಓಡಿ ಪೊಲೀಸ್ ಸೂತ್ರವನ್ನು ಶಿಷ್ಯ ಸಚ್ಚಿದಾನಂದ ನಿತ್ಯಾನಂದನಿಗೆ ಫೋನ್ ಮಾಡಿ ತಿಳಿಸುವಾಗಲೇ ಹಿಮಾಚಲ ಪ್ರದೇಶದ ವಿಳಾಸ ಪತ್ತೆಯಾಗಿದೆ. ಏಪ್ರಿಲ್ 18 ರ ಭಾನುವಾರವೇ ಸಿಓಡಿಯ ಡಿವೈಎಸ್‌ಪಿಗಳಾದ ಚಂದ್ರಶೇಖರ್ ಹೊಸಕೇರಿ ಮತ್ತು ಹುಸೇನ್ ತಂಡ ಶಿಮ್ಲಾಕ್ಕೆ ಪ್ರಯಾಣ ಬೆಳೆಸಿದೆ.

ಅತ್ತ ಶಿಮ್ಲಾದಲ್ಲಿ ಆ ಹೊತ್ತಿಗಾಗಲೇ ಹಿಮಾಚಲ ಸಿಓಡಿಯ ಡಿಐಜಿ ಚರಣ್ ರೆಡ್ಡಿ ನಿತ್ಯಾನಂದ ಅಡಗುತಾಣವನ್ನು ಪತ್ತೆಹಚ್ಚಿದ್ದರು. ಸೋಲನ್‌ನ ಎಸ್.ಪಿ. ಪ್ರೇಮ್‌ಕುಮಾರ್ ಠಾಕುರ್ ತಂಡ ಬೆಂಗಳೂರು ಪೊಲೀಸ್‌ರಿಗಾಗಿ ಕಾಯುತ್ತಿತ್ತು. ಮಂಗಳವಾರದ ಹೊತ್ತಿಗೆ ಬೆಂಗಳೂರಿನ ಸಿಓಡಿ ತಂಡ ಮಾವ್ಲಿಗ್ ಗ್ರಾಮದ ನಿತ್ಯಾನಂದನ ಮನೆಯನ್ನು ಸುತ್ತುವರಿದಿತ್ತು. ಅತ್ತ ನಿತ್ಯಾನಂದ ಮತ್ತು ಆತನ ನಾಲ್ವರು ಸಹಚರರು ಸಿಕ್ಕಿಬಿದ್ದಿದ್ದು (!) ಅಂದರೆ ಬೆಂಗಳೂರಿನ ಪೊಲೀಸರೊಂದಿಗೆ ಮುಖಾಮುಖಿಯಾಗಿದ್ದು ಖಚಿತವಾಗುತ್ತಿದ್ದಂತೆ ಇತ್ತ ಬೆಂಗಳೂರಿನ ಸಿಓಡಿ ಎಸ್‌.ಡಿ. ಯೋಗಪ್ಪನವರ ತಂಡ ಬಿಡದಿ ಆಶ್ರಮದ ಮೇಲೆ ದಾಳಿ ನಡೆಸಿದೆ.

ಒಂದೆಡೆ ಉಪಾಯವಾಗಿ ರಾಜಿ ನಟಿಸಿ ನಿತ್ಯಾನಂದನನ್ನು ಬಂಧಿಸುವುದು. ಆತ ಬಲೆಗೆ ಬೀಳುತ್ತಿದ್ದಂತೆ ಆತನನ್ನು ಹೇಗೆಲ್ಲ ಕಟ್ಟಿ ಹಾಕಲು ಸಾಧ್ಯ ಎಂದು ಕತ್ತಿ ಮಸೆಯುವುದು ಬಿಜೆಪಿ ತಂತ್ರ?

ಈಗಾಗಲೇ ಅರಣ್ಯ ಇಲಾಖೆ ಬಿಡದಿ ಆಶ್ರಮವನ್ನು ಜಪ್ತಿ ಮಾಡಿದೆ. ಬಿಡದಿ ಪೊಲೀಸರೂ ಧ್ಯಾನಪೀಠದ ಶೋಧನೆ ಮುಗಿಸಿದ್ದಾಗಿದೆ. ಹಾಗಿದ್ದೂ ಸಿಓಡಿ ಪೊಲೀಸರು ಮಂಗಳವಾರ ಮತ್ತೇಕೆ ನಿತ್ಯಾನಂದನ ಬಿಡದಿ ಅಂತಃಪುರವನ್ನು ಶೋಧಿಸಿದ್ದಾರೆ. ಸಿಕ್ಕ ದಾಖಲೆಗಳಲ್ಲಿ ಏನಿತ್ತು? ನಿತ್ಯಾನಂದನ ಕಂಪ್ಯೂಟರ್‌ನ ಹಾರ್ಡ್ ಡಿಸ್ಕುಗಳಲ್ಲಿ ಯಾವ ರಹಸ್ಯ ಅಡಗಿತ್ತು? ಅದನ್ನು ಬಿಜೆಪಿ ಸರ್ಕಾರ ಬಹಿರಂಗಗೊಳಿಸುತ್ತಾ ಅಥವಾ ಅದನ್ನಿಟ್ಟುಕೊಂಡೇ ನಿತ್ಯಾನಂದನ ಆಸ್ತಿಗೆ ಅಥವಾ ಪೀಠಕ್ಕೆ ಬೇಕಾದ ಉತ್ತರಾಧಿಕಾರಿಯೊಬ್ಬನನ್ನು ಸೇಫಾಗಿ ಬಿಡುಗಡೆ ಮಾಡುವ ತಂತ್ರವೂ ಇರಬಹುದಾ? ಇದು ಬಿಜೆಪಿ ತಂತ್ರವಾ ಅಥವಾ ರವಿಶಂಕರ್ ಗುರೂಜಿಯ ಕುತಂತ್ರವೋ?

ಉತ್ತರಕ್ಕೆ ಹೆಚ್ಚು ದಿನ ಕಾಯಬೇಕಿಲ್ಲ.

● ರಾ. ಸೋಮನಾಥ್
ra.somanath2010@gmail.com

ಜ್ಯೋತಿಷಿಗಳ ಸಮ್ಮೇಳನಕ್ಕೇ ಗ್ರಹದೋಷ!

ಕೆಲ ತಲೆಕೆಟ್ಟ ಜ್ಯೋತಿಷಿಗಳು ಇತ್ತೀಚೆಗೆ ಕುಕ್ಕೆ ಸುಬ್ರಹ್ಮಣ್ಯದಲ್ಲಿ 'ವಿಶ್ವ ಜ್ಯೋತಿಷಿ ಸಮ್ಮೇಳನ' ಮಾಡಹೊರಟಿದ್ದರು. ಅದೆಂತದ್ದೋ ಗ್ರಹ, ಮೂಲೆ ಇತ್ಯಾದಿಗಳನ್ನಾಧರಿಸಿ ತಾವು ಜಗತ್ತಿನ ಭವಿಷ್ಯವನ್ನೇ ಹೇಳುತ್ತೇವೆನ್ನುವ ಈ ಹುಚ್ಚರಿಗೆ ತಮ್ಮ ಸಮ್ಮೇಳನಕ್ಕೇ 'ಗ್ರಹದೋಷ' ಬಡಿದಿದೆ ಎಂದೇ ಗೊತ್ತಿರಲಿಲ್ಲ. ಈಗ ಲಕ್ಷಾಂತರ ರೂಪಾಯಿಗಳಿಗೆ ಕೈ ಎತ್ತಿ ಯಾರ ಕೈಗೂ ಸಿಗದಂತೆ ನಾಪತ್ತೆಯಾಗಿರುವ ಈ ಜ್ಯೋತಿಷಿಗಳ ಬಗ್ಗೆ ಒಂದು ಮಜವಾದ ವರದಿ ಇಲ್ಲಿದೆ...

• ಪ್ರಕಾಶ್ ಪಿಂಟೋ


ಜ್ಯೋತಿಷ್ಯದ ಸತ್ಯ-ಮಿಥ್ಯೆಯ ಕುರಿತ ಚರ್ಚೆ ಒತ್ತಟ್ಟಿಗಿರಲಿ. ಹಳಿ ಇಲ್ಲದೆ ರೈಲು ಬಿಡುವುದರಲ್ಲಿ ಈ ಜ್ಯೋತಿಷಿಗಳು ಎಕ್ಸ್‌ಪರ್ಟ್‌ಗಳು ಎನ್ನುವುದಕ್ಕೆ ತಾಜಾ ಉದಾಹರಣೆಯೇ ಈ 'ವಿಶ್ವ ಜ್ಯೋತಿಷಿ ಸಮ್ಮೇಳನ'ವೆಂಬ ಪ್ರಸಂಗ. ಎಲ್ಲವೂ ಯೋಜಿಸಿದ್ದಂತೆ ನಡೆದಿದ್ದರೆ ಇದೇ ಏಪ್ರಿಲ್ 9,10 ಮತ್ತು 11ರಂದು ಮೂರು ದಿನಗಳ ಕಾಲ 'ಸರ್ಪ ಸಂಸ್ಕಾರ' ಕುಖ್ಯಾತಿಯ ಸುಬ್ರಹ್ಮಣ್ಯದಲ್ಲಿ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಶ್ರೀಕ್ಷೇತ್ರ ಸಿದ್ಧರಬೆಟ್ಟ ಶ್ರೀ ವೀರಭದ್ರ ಶಿವಾಚಾರ್ಯ ಮತ್ತು ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮಭೂಷಣ ಡಾ. ವೀರೇಂದ್ರ ಹೆಗ್ಗಡೆಯವರ ಅನುಗ್ರಹ, ಆಶೀರ್ವಾದಗಳ ನೆರಳಲ್ಲಿ ವಿಶ್ವ ಜ್ಯೋತಿಷಿ ಸಮ್ಮೇಳನ ವೈಭವೋಪೇತವಾಗಿ ನಡೆದು ಹೊಸ ಇತಿಹಾಸ ಸೃಷ್ಟಿಯಾಗುತ್ತಿತ್ತು!

ಇಷ್ಟು ಹೊತ್ತಿಗೆ ಸುಬ್ರಹ್ಮಣ್ಯಕ್ಕೆ ಸುಬ್ರಹ್ಮಣ್ಯವೇ ಮದುವಣಗಿತ್ತಿಯಂತೆ ಶೋಭಿತವಾಗಿ ನೆಟ್ಟಿದ್ದ ಕಟೌಟ್, ಪೆಂಡಾಲುಗಳೆಲ್ಲ ಮೂಲೆ ಸೇರಿರುತ್ತಿದ್ದವು. ಆದರೆ ಜಗತ್ತಿನ ಭವಿಷ್ಯ ಹೇಳುವ ವಿಶ್ವ ಜ್ಯೋತಿಷಿಗಳ ಈ ಸಮ್ಮೇಳನಕ್ಕೆ ಅದೇನು ಗ್ರಹದೋಷ ಅಡ್ಡಿ ಬಂತೋ ಗೊತ್ತಿಲ್ಲ, ಭಾರೀ ಪ್ರಚಾರ, ನಿರೀಕ್ಷೆ, ಕುತೂಹಲಗಳನ್ನು ಸೃಷ್ಟಿಸಿದ್ದ ಈ ವಿಶ್ವ ಸಮ್ಮೇಳನ ಬಣ್ಣದ ಮಾತುಗಳ ಮತ್ತು ಮನವಿಪತ್ರಗಳಲ್ಲೇ ಉಳಿದುಬಿಟ್ಟಿದೆ. ಈ ಸಮ್ಮೇಳನದ ಸಂಘಟಕ ಮಹಾಶಯರಂತೂ ಈಗ ಸಾಲಗಾರರ ಹಿಂಸೆ ತಾಳಲಾರದೇ ತಲೆಮರೆಸಿಕೊಂಡಿದ್ದಾರೆ.

ತುಳು ಸಮ್ಮೇಳನದ ಸ್ಫೂರ್ತಿ


ಕಳೆದ ಫೆಬ್ರವರಿಯಲ್ಲಿ ಉಜಿರೆಯಲ್ಲಿ ವಿಶ್ವ ತುಳು ಸಮ್ಮೇಳನ ಗಡದ್ದಾಗಿ ನಡೆಯಿತ್ತಲ್ಲ, ಈ ತುಳು ಸಮ್ಮೇಳನವೇ ವಿಶ್ವ ಜ್ಯೋತಿಷಿಗಳ ಸಮ್ಮೇಳನಕ್ಕೆ ಸ್ಫೂರ್ತಿಯಂತೆ. ಅದು ತುಳು ಸಮ್ಮೇಳನಕ್ಕೆ ದ.ಕ. ಜಿಲ್ಲೆಯೇ ಶೋಭಿತವಾಗಿದ್ದ ಕಾಲ. ಕುಂಬಳೆಯ ಡಿ. ಶ್ಯಾಮಪ್ರಸಾದ್ ಶಾಸ್ತ್ರಿ ಎಂಬ ಜ್ಯೋತಿಷಿಯು ಮಂಗಳೂರಿನಿಂದ ಬೆಂಗಳೂರಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಆತನ ಜೊತೆಗಿದ್ದ ಮಾರವಾಡಿ ಗಿರಾಕಿಯೋರ್ವ 'ತುಳು ವಿಶ್ವ ಸಮ್ಮೇಳನದಂತೆ ನೀವ್ಯಾಕೆ ವಿಶ್ವ ಜ್ಯೋತಿಷಿಗಳ ಸಮ್ಮೇಳನ ಮಾಡಬಾರದು?' ಅಂದದ್ದೇ ಶ್ಯಾಮಪ್ರಸಾದ್ ಶಾಸ್ತ್ರಿಯ ಕಿವಿ ನಿಮಿರಿತು. ಬೆಂಗಳೂರು ತಲುಪುವಷ್ಟರಲ್ಲಿ ಈ ಮಹಾಶಯ ಅಂತಹ ಒಂದು ಸಮ್ಮೇಳನದ ಪ್ಲಾನ್‌ಅನ್ನು ತನ್ನ ತಲೆಯಲ್ಲೇ ಸಿದ್ಧಮಾಡಿದ್ದ. ಈ ಸಮ್ಮೇಳನಕ್ಕೆ ಸ್ವತಃ ಶ್ಯಾಮಪ್ರಸಾದ್ ಶಾಸ್ತ್ರಿಯೇ ಪ್ರಧಾನ ಸಂಚಾಲಕನಾದರೆ, ಕೃಷ್ಣಪ್ರಸಾದ್ ಮುನಿಯಂಗಳ ಎಂಬ ವಾಸ್ತುಶಿಲ್ಪಿ ಪ್ರಧಾನ ಕಾರ್ಯಾಧ್ಯಕ್ಷನಾಗಿ ಕೈ ಜೋಡಿಸಿದ.

ಈ ಸಮ್ಮೇಳನವನ್ನು ಎಲ್ಲಿ ಯೋಜಿಸುವುದು ಎಂಬ ಪ್ರಶ್ನೆ ತಲೆ ಎತ್ತಿದಾಗ ಏನಿಲ್ಲವೆಂದರೂ ಊಟವಂತೂ ಬಿಟ್ಟಿಯಾಗಿ ಸಿಗುವ ಶ್ರೀ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯವೇ ಸೂಕ್ತವೆಂದು ಸ್ಥಳ ನಿಗದಿಯಾಯಿತು. ಆದರೆ ಹಿಂದು-ಮುಂದು ಒಂದೂ ಇಲ್ಲದ ಈ ವಿಶ್ವ ಜ್ಯೋತಿಷಿಗಳ ಸಮ್ಮೇಳನದೊಂದಿಗೆ ಕೈ ಜೋಡಿಸಲು ದೇವಸ್ಥಾನದ ಆಡಳಿತಾಧಿಕಾರಿಗಳಾದ ಎ.ಸಿ. ಹರೀಶ್ ಕುಮಾರ್ ಒಪ್ಪಲಿಲ್ಲ. ಆಗ ಇವರು ಎಡತಾಕಿದ್ದೇ ಪಕ್ಕದಲ್ಲೇ ಇರುವ ಸುಬ್ರಹ್ಮಣ್ಯ ಸ್ವಾಮಿಗಳ ಪಾದದ ಬುಡಕ್ಕೆ.



ಬುಲ್ಡೋಜರ್ ಬಾಯಿಗೆ ಸಿಕ್ಕ ಮರಗಳು

ಜಿಲ್ಲೆಯ ಬಹಳಷ್ಟು ದೇವಸ್ಥಾನಗಳ ನವೀಕರಣ, ಬ್ರಹ್ಮಕಲಶ ಸಂಭ್ರಮಗಳಿಗೆ ಗೌರವಾಧ್ಯಕ್ಷರಾಗುವುದನ್ನೇ ತಮ್ಮ ದಿನಚರಿಯ [illegible]ಕೊಂಡಿರುವ ಸುಬ್ರಹ್ಮಣ್ಯದ ಸ್ವಾಮೀಜಿಗಳು "ಆಯಿತು" ಅಂದರು. ಇನ್ನು ಸಮ್ಮೇಳನ ನಡೆಸಲು ಜಾಗ ಬೇಕಲ್ವ? ಮುಜರಾಯಿ ಮತ್ತು ವಿನಯತೆಗೆ ಹೆಸರಾಗಿರುವ ಸ್ವಾಮೀಜಿಗಳು ಮಠದ ಆರು ಎಕರೆ ಭೂಮಿಯಲ್ಲೇ ಮಾಡಲು ಆಕ್ಷೇಪವೆತ್ತಲಿಲ್ಲ. ಈ ಸಮ್ಮೇಳನದ ನೆಪದಲ್ಲಾದರೂ ಅಷ್ಟು ಅಚ್ಚುಕಟ್ಟಿನ ಭೂಮಿ ಮಟ್ಟಸವಾಗುತ್ತದೆಯಲ್ಲ ಎಂಬ ಮುಂದಾಲೋಚನೆಯೂ ಅವರದ್ದಾಗಿರಬಹುದು.



ತಲೆಕೆಟ್ಟ ಜ್ಯೋತಿಷಿಗಳ ಅಂತರ್ಜಾಲ ಆರಂಭ...

ವಿಶ್ವ ತುಳು ಸಮ್ಮೇಳನಕ್ಕೆ ಒಂದು ವರ್ಷದ ಪೂರ್ವ ತಯಾರಿ ನಡೆದರೆ, ವಿಶ್ವ ಜ್ಯೋತಿಷಿಗಳ ಸಮ್ಮೇಳನದ ನಕಾಶೆಯು ಜ್ಯೋತಿಷಿ ಪುರುಷೋತ್ತಮರ ಪ್ರಚಂಡ ತಲೆಯಲ್ಲಿ ಒಂದೆರಡು ವಾರದಲ್ಲೇ ತಯಾರಾಯಿತು. ವಿವಿಧ ಸಮಿತಿ-ಉಪಸಮಿತಿಗಳ ಸದ್ದಿಲ್ಲದೇ ಸೃಷ್ಟಿಯಾಗಿ ಜನವರಿ 25, 2010ರಂದು ಸಮ್ಮೇಳನಕ್ಕೆ ಗುದ್ದಲಿ ಪೂಜೆಯೂ ನಡೆಯಿತು.

ಭರ್ಜರಿ ಪೂರ್ವಭಾವಿ ಸಭೆ

ಅದರ ಬೆನ್ನಿಗೇ ಪೂರ್ವಭಾವಿ ಸಭೆಯೊಂದನ್ನು ಸುಬ್ರಹ್ಮಣ್ಯದಲ್ಲಿ ಸಂಘಟಿಸಲಾಗಿತ್ತು. ಈ ಸಭೆಗೆ ಸಂಸದ ನಳಿನ್ ಕುಮಾರ್, ಎಂಎಲ್‌ಸಿ ಗಣೇಶ್ ಕಾರ್ನಿಕ್, ಕುಂಟಾರು ರವೀಶ ತಂತ್ರಿಯನ್ನೊಳಗೊಂಡಂತೆ 600 ಜನ ಹಾಜರಾಗಿದ್ದರು. ಭರ್ಜರಿ ಟೀ ಪಾರ್ಟಿಯೊಂದಿಗೆ ಆರಂಭವಾದ ಈ ಸಭೆಯಲ್ಲಿ ಜ್ಯೋತಿಷಿಗಳು ಬೊಂಗು ಬಿಟ್ಟಿದ್ದೇ ಬಿಟ್ಟಿದ್ದು. "ಸುಮಾರು ಒಂಭತ್ತು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಡೆಯುವ ಈ ಸಮ್ಮೇಳನಕ್ಕೆ ಬಳ್ಳಾರಿಯ ಗಣಿದಣಿಗಳಿಂದ ಹಿಡಿದು ಇತರೆ ಉದ್ಯಮಿಗಳಿಂದ ಹಣದ ಹೊಳೆಯೇ ಹರಿದು ಬರುತ್ತಿದೆ. ಅಶೋಕ್ ಖೇಣಿಯೇ ಖಜಾಂಚಿ ಅಂದ ಮೇಲೆ ಕೇಳಬೇಕೆ? ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ ಸೇರಿದಂತೆ ನಾಸಾದ ವಿಜ್ಞಾನಿಗಳು ಮತ್ತು ಜಗತ್ತಿನ ಖ್ಯಾತ ಜ್ಯೋತಿಷಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಾರೆ. ಇನ್ನೆರಡು ವರ್ಷಗಳಲ್ಲಿ - ಅಂದರೆ 2012ರಲ್ಲಿ - ಸಂಭವಿಸಲಿರುವ ಪ್ರಳಯದ ಬಗ್ಗೆ ಶಾಸ್ತ್ರೀಯವಾಗಿ ವಿಮರ್ಶೆ ನಡೆಸುವುದೇ ಈ ಸಮ್ಮೇಳನದ ಪ್ರಮುಖ ಉದ್ದೇಶ" ಎಂದೆಲ್ಲಾ ಪುಂಗಿ ಊದಿದ್ದರು.

ಅಷ್ಟೇಅಲ್ಲ, ಈ 'ಬೃಹತ್' ಸಮ್ಮೇಳನಕ್ಕೆಂದು ಸುಬ್ರಹ್ಮಣ್ಯಕ್ಕೆ ಬರುವ ಗಣ್ಯಾತಿಗಣ್ಯರ ಅನುಕೂಲಕ್ಕೆ ಆರು ಹೆಲಿಪ್ಯಾಡ್‌ಗಳ ನಿರ್ಮಾಣ, ಧರ್ಮಸ್ಥಳ-ಸುಬ್ರಹ್ಮಣ್ಯ ನಡುವೆ 20 ವೋಲ್ವೋ ಬಸ್ಸುಗಳ ವ್ಯವಸ್ಥೆ, ಸಮ್ಮೇಳನದಲ್ಲಿ ಭಾಗವಹಿಸುವ ಸುಮಾರು 1000 ಜ್ಯೋತಿಷಿಗಳಿಗೆ ಹವಾನಿಯಂತ್ರಿತ ಪೆಂಡಾಲ್ ಎಂದೆಲ್ಲಾ ಜ್ಯೋತಿಷಿ ಪುರುಷೋತ್ತಮರು ಮಾತಲ್ಲೇ ಕನಸಿನ ಗೋಪುರ ಸೃಷ್ಟಿಸಿದರೆ ಅಲ್ಲಿ ಸೇರಿದ್ದ ಜನ ಆಂಬೊಡೆ ಮೆಲ್ಲುತ್ತಾ ತಲೆದೂಗಿದರು.

ಸಮತಟ್ಟು ಶುರು

ಈ ಸಮ್ಮೇಳನಕ್ಕೆಂದು ಜನವರಿ 28ರಿಂದ ಮಾರ್ಚ್ 3ರ ತನಕ ಸುಬ್ರಹ್ಮಣ್ಯದಲ್ಲಿ ಜೆಸಿಬಿ, ಬುಲ್ಡೋಜರ್‌ಗಳದ್ದೇ ಕಾರುಬಾರು. ರಾತ್ರಿ-ಹಗಲೆನ್ನದೇ ಗುಡ್ಡದ ಮೇಲೆ ಬೆಳೆದಿದ್ದ ಮರಗಳನ್ನೆಲ್ಲ ಕಡಿದು ಭೂಮಿಯನ್ನು ಅಗೆಯಲಾರಂಭಿಸಿದವು ಈ ಯಂತ್ರಗಳು. ಅರಣ್ಯ ಇಲಾಖೆಯವರು ನೆಟ್ಟು ದಿವಿನಾಗಿ ಬೆಳೆಸಿದ್ದ ಅಕೇಶಿಯಾ ತೋಪಿಗೂ ಇದೇ ಗತಿ ಕಾಣಿಸಿದ್ದಾಯಿತು. ಈ ನಡುವೆ ವಿಶ್ವ ಜ್ಯೋತಿಷಿ ಸಮ್ಮೇಳನದ ವೆಬ್‌ಸೈಟನ್ನು ಸ್ವಾಮೀಜಿಗಳ ದಿವ್ಯ ಹಸ್ತದಿಂದ 'ಲೋಕಕ್ಕೆ ಅರ್ಪಿಸಿ'ದ್ದೂ ಆಯಿತು. ಫೆಬ್ರವರಿ 17ರಂದು ಸಮ್ಮೇಳನದ ಕಚೇರಿ ಉದ್ಘಾಟನೆಗೆ ಆರೋಗ್ಯ ಸಚಿವ ಶ್ರೀರಾಮುಲು ಬರುತ್ತಾರೆ ಎಂದು ಪ್ರಚಾರ ಮಾಡಿದ್ದೂ ಆಯಿತು. ಆದರೆ ಅಂದು ಅದ್ಯಾವ ಮೂಲೆಯಲ್ಲಿ ಅದ್ಯಾವ ಶನಿ ಕೂತಿದ್ದನೋ, ಅಂದು ಯಾವ ಉದ್ಘಾಟನೆಯೂ ಆಗಲಿಲ್ಲ, ಶ್ರೀರಾಮುಲು ಕೂಡಾ ಬರಲಿಲ್ಲ.

ಇದೆಲ್ಲ ನಡೆಯುತ್ತಿದ್ದಾಗಲೇ ಶ್ಯಾಮಪ್ರಸಾದ್ ಶಾಸ್ತ್ರಿ ಎಂಬ ಜ್ಯೋತಿಷಿಗಳ ಸಮ್ಮೇಳನದ ಪ್ರಧಾನ ಸಂಚಾಲಕ ಕೊಟ್ಟಿದ್ದ ಎರಡೆರಡು ಚೆಕ್‌ಗಳು ಟೆನ್ನಿಸ್ ಆಟದ ಚೆಂಡುಗಳಂತೆ ಬೌನ್ಸ್ ಆದ ಸುದ್ದಿ ಹುಟ್ಟಿತು. ಕುಂಟಾರು ರವೀಶ ತಂತ್ರಿಗಳು ಪೂರ್ವಭಾವಿ ಸಭೆಯಲ್ಲಿ ಸಮ್ಮೇಳನದ ಬಗ್ಗೆ ತೋರಿದ್ದ ಅನುಮಾನಗಳು ಕೆಲವೇ ದಿನಗಳಲ್ಲಿ ನಿಜವಾಗತೊಡಗಿದವು. ಜೆಸಿಬಿ, ಬುಲ್ಡೋಜರ್‌ಗಳು ಮಾಡಿದ್ದ ಕೆಲಸಕ್ಕೇ ಬಾಡಿಗೆ ಸಿಗದೆ ಅವು ತಮ್ಮ ಕೆಲಸ ಸ್ಥಗಿತಗೊಳಿಸಿದವು. ಇಷ್ಟಾಗುವ ಹೊತ್ತಿಗೆ ಪ್ರಧಾನ ಕಾರ್ಯಾಧ್ಯಕ್ಷ ಕೃಷ್ಣ ಪ್ರಸಾದ್ ಮುನಿಯಂಗಳ ಮತ್ತು ಸಂಚಾಲಕ ಶ್ಯಾಮಪ್ರಸಾದ್ ಶಾಸ್ತ್ರಿಗಳು ಯಾರ ಕೈಗೂ ಸಿಗದ ಸ್ಥಿತಿ ನಿರ್ಮಾಣವಾಗಿತ್ತು.

ಇದೀಗ ಕೋಲು ಕೊಟ್ಟು ಹೊಡೆಸಿಕೊಂಡ ಅನುಭವವಾಗುತ್ತಿರುವುದು ಮಾತ್ರ ಸುಬ್ರಹ್ಮಣ್ಯದ ಸ್ವಾಮೀಜಿಗಳಿಗೆ. ತಾನು ಗೌರವಾಧ್ಯಕ್ಷನಾದ ತಪ್ಪಿಗೆ, ಮಠದ ಭೂಮಿಯನ್ನು ಸಮತಟ್ಟು ಮಾಡಿ ಮಣ್ಣು ಕೊಚ್ಚಿ ಹೋಗಿ ರಸ್ತೆಯೇ ಮುಚ್ಚಿ ಹೋಗದಂತೆ ಜೆಸಿಬಿಯಿಂದ ನೀರು ಕಾಲುವೆ ಮಾಡಿಸುವುದು ಈಗ ಸ್ವಾಮೀಜಿಯ ಪ್ರಮುಖ ಕೆಲಸವಾಗಿದೆ. ಅವತ್ತು ಅಕೇಶಿಯಾ ತೋಪನ್ನು ಅರಣ್ಯ ಸಿಬ್ಬಂದಿಗಳ ಕಣ್ಣೆದುರೇ ಕಡಿದು ಹಾಕಿದಾಗ, ಎಲ್ಲವನ್ನೂ ಮೊದಲಿನಂತೆಯೇ ಸರಿ ಮಾಡುತ್ತೇವೆ ಎಂದಿದ್ದವರು ಈಗ ಕಾಣಿಸಿಕೊಳ್ಳುವುದಿರಲಿ, ಅವರು ಫೋನಿಗೂ ಸಿಗುತ್ತಿಲ್ಲ.

ಆದ್ದರಿಂದ ಅರಣ್ಯ ಇಲಾಖೆಯವರು ಕೂಡಾ ಸ್ವಾಮೀಜಿ[...] ನೋಟೀಸು ಕಳುಹಿಸಿದ್ದಾರೆ. ಅದನ್ನೂ ಈಗ ಸ್ವಾಮೀಜಿಗ[...] ಎದುರಿಸಬೇಕಿದೆ.

ವಿಶ್ವ ಜ್ಯೋತಿಷ್ಯ ಸಮ್ಮೇಳನಕ್ಕೆ ಎಂದಾದರೂ ಭೂಮಿ[...] ಸಮತಟ್ಟುಮಾಡಿದ್ದು ಮಠದಲ್ಲವೇ ಎಂಬ ಕಾರಣಕ್ಕೆ ಜೆಸಿ[...] ಮತ್ತು ಬುಲ್ಡೋಜರ್‌ಗಳ ಡೀಸೆಲ್ ಬಿಲ್ ಆದ 3[...] ಲಕ್ಷ ರೂಪಾಯಿಗಳನ್ನೂ ಸ್ವಾಮೀಜಿಯೇ ಕೈಯಾರೆ ತುಂ[...] ಈಗ ತಾನು ಪರಿಸ್ಥಿತಿಯ ಬಲಿಪಶುವಾದೆನೆಂ[...] ಪರಿತಪಿಸುತ್ತಿದ್ದಾರೆ. ಆದರೂ ಜೆಸಿಬಿ ಮಾಲೀಕರು ಅಂದಾ[...] 50 ಲಕ್ಷದಷ್ಟು ಬಾಡಿಗೆ ಹಣಕ್ಕಾಗಿ ಆಕಾಶ ನೋಡುತ್ತಿದ್ದಾ[...]

ಹೀಗೆ ವಿಶ್ವ ಜ್ಯೋತಿಷಿಗಳ ಸಮ್ಮೇಳನ ಮಾಡ[...] ಹೊರಟು, ಶನಿ ಗ್ರಹವನ್ನು ಪ್ರವೇಶಿಸಿದ ಶ್ಯಾಮಪ್ರಸಾ[...] ಶಾಸ್ತ್ರಿ ಎಂಬ ಜ್ಯೋತಿಷಿಯೂ, ಕೃಷ್ಣಪ್ರಸಾದ್ ಮುನಿಯಂ[...] ಎಂಬ ವಾಸ್ತುಶಿಲ್ಪಿಯೂ ಈಗ ತಮ್ಮ ಭವಿಷ್ಯ[...] ಕತ್ತಲಕೂಪವಾಯಿತಲ್ಲಾ ಎಂದು ರಾಜ್ಯದ ಅದಾ[...] ಮೂಲೆಯಲ್ಲಿ ಕೂತು ಪರಿತಪಿಸುತ್ತಿದ್ದಾರೆ ಎಂಬುದ[...] ಪೊಲೀಸರಾದರೂ ಪತ್ತೆ ಹಚ್ಚಬೇಕಿದೆ...

ಜೀವರಾಮ್‌ರ ಸ್ಟೇಜ್

ರಂಗಕಲಾವಿದ ಜೀವನ್‌ರಾಮ್ ಸುಳ್ಯ ಜಿಲ್ಲೆಯ[...] ನಾಟಕಗಳನ್ನು ತಮ್ಮದೇ ಆದ ವಿಭಿನ್ನ ಮತ್ತು ವಿಶಿಷ್ಟವಾ[...] ಶೈಲಿಯಲ್ಲಿ ಕಲಾತ್ಮಕ ವೇದಿಕೆಗಳನ್ನು ನಿರ್ಮಿಸಿ ಅವುಗಳಿಂ[...] ಬರುವ ಸಂಭಾವನೆಗಿಂತ ಜನರಿಂದ ಶಹಬ್ಬಾಸ್‌ಗಿ[...] ಗಿಟ್ಟಿಸುವುದರಲ್ಲೇ ಹೆಚ್ಚು ಸಂತೃಪ್ತಿ ಪಡುವ ವ್ಯಕ್ತಿ.

ಕಳೆದ ಜನವರಿ ತಿಂಗಳಲ್ಲಿ ನಡೆದ ವಿಶ್ವ ತು[...] ಸಮ್ಮೇಳನದಲ್ಲಿ ತುಳುಗ್ರಾಮದ ಪರಿಕಲ್ಪನೆಯನ್ನು ತೋರು[...] ಮೂಲಕ ಜನರ ಗಮನಸೆಳೆದ ಜೀವರಾಮ್‌ರೊಂದಿ[...] ವಿಶ್ವ ಜ್ಯೋತಿಷ್ಯ ಸಮ್ಮೇಳನದ ವೇದಿಕೆ ನಿರ್ಮಿಸಲು [...] ಲಕ್ಷಕ್ಕೆ ಒಪ್ಪಂದ ಮಾಡಿಕೊಂಡಿದ್ದರು ಸಂಘಟಕರು. ಇದ[...] ಸಂತೋಷದಿಂದಲೇ ಒಪ್ಪಿಕೊಂಡಿದ್ದ ಜೀವನ್‌ರಾಮ್ [...] ಅವಕಾಶವನ್ನು ಸದುಪಯೋಗಪಡಿಸಿಕೊಂಡು ವಿನೂತ[...] ಪ್ರಯೋಗ ಮಾಡುವ ಬಗ್ಗೆ ತಲೆಕೆಡಿಸಿಕೊಂಡಿದ್ದರು.


ಆದರೆ ಆಗ ಅವರನ್ನು ಸಂಪರ್ಕಿಸಿದ ಸಂಘಟಕ[...] "ಸ್ಟೇಜಿನ ಕೆಲಸವನ್ನು ಮುಂಬೈಯ ಖ್ಯಾತ ಈವೆಂ[...] ಮ್ಯಾನೇಜ್‌ಮೆಂಟ್ ಸಂಸ್ಥೆಯೊಂದಕ್ಕೆ ವಹಿಸಿಕೊಟ್ಟಿದ್ದೇ[...] ಈಗಾಗಲೇ 250 ಲಾರಿಯಷ್ಟು ಬೃಹತ್ ಸೆಟ್‌ಗ[...] ಮುಂಬೈಯಿಂದ ಹಡಗಿನ ಮೂಲಕ ಮಂಗಳೂ[...] ಹೊರಟಿವೆ. ನೀವು ಸುಬ್ರಹ್ಮಣ್ಯ ಪೇಟೆಯನ್ನು ಮ[...] ಶೃಂಗಾರ ಮಾಡಿ" ಎಂದು ಬೂಸಿ ಬಿಟ್ಟರು.

ವಿಚಿತ್ರವೆಂದರೆ ಮುಂಬೈಯಿಂದ ಹಲವು ವಾರ[...] ಹಿಂದೆಯೇ ಹೊರಟ ಆ ಹಡಗು ಮಾತ್ರ ಇನ[...] ಮಂಗಳೂರು ಬಂದರನ್ನು ತಲುಪಿಲ್ಲ!

ಇನ್ನು ಸಮ್ಮೇಳನದಲ್ಲಿ ವಿಐಪಿ, ಪ್ರತಿನಿಧಿ ಮ[...] ಸಾಮಾನ್ಯ ಎಂದು ಮೂರು ನಮೂನೆಯ ವರ್ಗ[...] ಜನರಿಗೆ ಮೂರು ರೀತಿಯ ಊಟಗಳನ್ನು ನೀಡುವುದ[...] ನಿರ್ಧರಿಸಲಾಗಿತ್ತು. ಅಂತೆಯೇ ಮೂರು ದಿನಗಳ ಕ[...] 'ಸಾಮಾನ್ಯ'ರಿಗೆ 'ಸಾಮಾನ್ಯ' ಊಟ ಬಡಿಸುವ ಜವಾಬ[...] ಯನ್ನು ಗಿರಿಗದ್ದೆ ಜೋಯಿಸರಿಗೆ ವಹಿಸಿಕೊಡಲಾಗಿ[...] ಈಗ ಜೋಯಿಸರು ಊಟದ ವಿಲೇವಾರಿಗೆಂದು ಶ್ಯಾ[...] ಪ್ರಸಾದ ಜ್ಯೋತಿಷಿಯನ್ನು ಸಂಪರ್ಕಿಸಿದರೆ ಆತ ಫೋ[...] ಎತ್ತುತ್ತಿಲ್ಲ.

ಹಾಗಂತ ಅಡಿಗೆ ಬಿದ್ದರೂ ಮೂಗು ಮೇಲೆ ಎಂಬ[...] ಶ್ಯಾಮಪ್ರಸಾದ್ ಜ್ಯೋತಿಷಿ ಸೋಲೊಪ್ಪಿಕೊಳ್ಳಲು ತಯಾ[...] ಈಗ ಸಮತಟ್ಟು ಮಾಡಿದ ಜಾಗದಲ್ಲಿ ಗಿಡಮೂ[...] ಸಸ್ಯಗಳನ್ನು ನೆಡಲಾಗುವುದು, ಅದು ಬೆಳೆದುನಿಂತ ಮೇ[...] ಸಮ್ಮೇಳನ ಮಾಡುತ್ತೇನೆ ಎಂದು ಪ್ಲೇಟು ಬದಲಾಯಿ[...] ತ್ತಿದ್ದಾನೆ ಈ ಶಾಸ್ತ್ರಿ ಎಂಬ ಜ್ಯೋತಿಷಿ.





ಕೊಳ್ಳೇಗಾಲ: ಮರಿ ವೀರಪ್ಪನ್ ಅಪ್ಪಾದೊರೈ ಅರೆಸ್ಟ್

ಕೊಳ್ಳೇಗಾಲ ಭಾಗದಲ್ಲಿ ಮರಿ ವೀರಪ್ಪನ್ ಎಂದೇ ಕುಖ್ಯಾತನಾಗಿದ್ದ ಕಳ್ಳ ಖದೀಮ ಕಂಟ್ರಾಕ್ಟರ್ ಅಪ್ಪಾದೊರೈ ಮಾಲುಸಮೇತ ಸಿಕ್ಕುಬಿದ್ದಿದ್ದಾನೆ. ಕರ್ನಾಟಕದಿಂದ ತಮಿಳುನಾಡಿಗೆ ಅಕ್ರಮವಾಗಿ 650 ಲೀಟರ್ ಸೀಮೆಎಣ್ಣೆಯನ್ನು ಸಾಗಿಸುವಾಗ ಸಿಕ್ಕುಬಿದ್ದು ಚಾಮರಾಜನಗರ ಪೊಲೀಸ್ ಠಾಣೆಯ ಪಾಲಾಗಿದ್ದಾನೆ.

ರಾಜಕಾರಣಿಗಳ ಸಖ್ಯದಿಂದ ಸಿವಿಲ್ ಕಾಮಗಾರಿಗಳನ್ನು ಮಾಡುತ್ತ ಕಂಟ್ರಾಕ್ಟರು ಎಂದು ಪೋಸು ಕೊಡುತ್ತಿದ್ದ ಅಪ್ಪಾದೊರೈ ಮೂಲತಃ ಮರಗಳ್ಳ. ಜೊತೆಗೆ ಸೀಮೆಎಣ್ಣೆಯನ್ನೂ ಕದ್ದು ಸಾಗಿಸುತ್ತಿದ್ದ ಎಣ್ಣೆಗಳ್ಳ ಕೂಡಾ. ಹಿಂದೆ ಮಾಜಿ ಶಾಸಕ ರಾಜೂಗೌಡನ ಬಂಟನಾಗಿದ್ದ ಈ ಖದೀಮ ಈಗ ಹನೂರು ಶಾಸಕ ನರೇಂದ್ರನ ಹಿಂಬಾಲಕ.



ನಾರಾಯಣಸ್ವಾಮಿ
ಡಿ.ವೈ.ಎಸ್.ಪಿ. ಕೊಳ್ಳೇಗಾಲ

ಸತ್ತೇಗಾಲದ ಬಳಿಯಿರುವ ಜಾಗೇರಿ ಎಂಬ ಕಾಡಿನ ಮಧ್ಯದಲ್ಲಿರುವ ಪುಟ್ಟ ಗ್ರಾಮದವನಾದ ಈ ಅಪ್ಪಾದೊರೈ ಅಲ್ಲಿ ಕಾಡನ್ನೆಲ್ಲ ಸಣ್ಣಗೆ ಬೋಳು ಮಾಡುತ್ತಲೇ ಬಂದಿದ್ದು ಇವತ್ತು 80 ಕೋಟಿಗೆ ತೂಗುತ್ತಿದ್ದಾನೆ. ರಾಜೂಗೌಡ ಬದುಕಿರುವವರೆಗೆ ಮರಗಳ್ಳತನದಲ್ಲಿ ಪ್ರಾಕ್ಸಿಯಾಗಿದ್ದ ಇವನು ಆನಂತರ ಕಂಟ್ರಾಕ್ಟರ್‌ನಾಗಿ ನೀರಾವರಿ ಇಲಾಖೆ, ಜಿಲ್ಲಾ, ತಾಲ್ಲೂಕು ಪಂಚಾಯತಿಗಳಿಂದ ಕಾಂಟ್ರಾಕ್ಟು ಗಿಟ್ಟಿಸುತ್ತ ಕಳಪೆ ಕಾಮಗಾರಿಗಳ ಮೂಲಕ ದುಡ್ಡು ದೋಚುತ್ತ ಬಂದ. ನರೇಂದ್ರ ಶಾಸಕನಾದ ಮೇಲೆ ಮತ್ತೆ ಮರಗಳ್ಳತನ ಶುರು ಮಾಡಿದ ಅಪ್ಪಾದೊರೈ ಕಾಡುಪ್ರಾಣಿಗಳನ್ನು ಬೇಟೆಯಾಡಿ ಸ್ಮಗ್ಲಿಂಗ್ ಮಾಡತೊಡಗಿದ. ರಾಜಕೀಯ ಪ್ರಭಾವ ಇದ್ದುದರಿಂದ ಲೋಕಲ್ ಪೊಲೀಸರು ಇವನ ತಂಟೆಗೆ ಹೋಗಿರಲಿಲ್ಲ, ಕೊಳ್ಳೇಗಾಲಕ್ಕೆ ನಾರಾಯಣಸ್ವಾಮಿ ಡಿವೈಎಸ್‌ಪಿಯಾಗಿ ಬಂದ ನಂತರ ಈ ಅಪ್ಪಾದೊರೈಯ ಮೇಲೆ ನಿಗಾ ಇಡಲು ಆರಂಭಿಸಿದರು. ಅದರ ಫಲಿತಾಂಶ ಈಗ ಬಂದಿದೆ. ಕಳ್ಳಖದೀಮ ಜೈಲಿಗೆ ಬಿದ್ದಿದ್ದಾನೆ.

ಏಪ್ರಿಲ್ 12 ರಂದು ಅಪ್ಪಾದೊರೈ ಅಕ್ರಮವಾಗಿ ಸೀಮೆಎಣ್ಣೆ ಸಾಗಿಸುತ್ತಿರುವ ಸುಳಿವು ಪಡೆದ ಡಿವೈಎಸ್‌ಪಿ ನಾರಾಯಣಸ್ವಾಮಿ ಮಲೆಮಹದೇಶ್ವರ, ರಾಮಾಪುರ ಠಾಣೆಯ ಪೊಲೀಸರನ್ನು ಸಂಪರ್ಕಿಸಿದ್ದಾರೆ. ರಾಮಾಪುರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ, ಪೇದೆಗಳಾದ ನಾಗರಾಜು, ಮಲ್ಲಿಕಾರ್ಜುನ, ಶಿವಸ್ವಾಮಿ, ಅನ್ವರ್ ಪಾಷಾ, ಶಂಕರ್, ಜಮೀಲ್, ಸಕ್ರೂ ನಾಯ್ಕಗಳ ತಂಡ ಪನ್ನಾಚಿ ಬಳಿ ಸೀಮೆಎಣ್ಣೆಯ ಟ್ಯಾಂಕರ್ ಹಿಡಿದಿದೆ. ಅಪ್ಪಾದೊರೈಯ ಪರ್ಸನಲ್ ಸೆಕ್ರೆಟರಿ ಪೆರುಮಾಳನನ್ನು ಹಿಡಿದು ಒಳಗೆ ಹಾಕಿದ್ದೇ ತಡ ಕೊಳ್ಳೇಗಾಲದ ತನ್ನ ಭವ್ಯ ಬಂಗಲೆ ಹೊಕ್ಕ ಅಪ್ಪಾದೊರೈ ಕೇಸಿನಿಂದ ಬಚಾವಾಗಲು ರಾಜಕಾರಣಿಗಳಿಂದ ಪೊಲೀಸರಿಗೆ ಫೋನು ಮಾಡಿಸಿದ್ದಾನೆ. ಯಾವ ರಾಜಕಾರಣಿಯ ಮಾತಿಗೂ ಬಗ್ಗದ ಪೊಲೀಸರು ಅಪ್ಪಾದೊರೈಯನ್ನು ಎತ್ತಾಕಿಕೊಂಡು ಹೋಗಿ ಜನರ ಮೆಚ್ಚುಗೆ ಗಳಿಸಿದ್ದಾರೆ. ಅಪ್ಪಾದೊರೈಯ ನೈವೇದ್ಯ ತಿಂದಿದ್ದ ನೀರಾವರಿ ಇಲಾಖೆ, ಜಿ.ಪಂ., ತಾ.ಪಂ.ಗಳ ಕೆಲ ಅಧಿಕಾರಿಗಳು ಮಾತ್ರ ತಮ್ಮ ಬುಡಕ್ಕೆ ತಂದಿಟ್ಟನೇನೋ(?) ... ತಿಯುವನೇ ಸಿಕ್ಕಿಬಿದ್ದನೇನೋ ಎಂಬಂತೆ ಗೋಳಾಡಿದ್ದಲ್ಲದೇ, ಚಾಮರಾಜನಗರ ಜೈಲಿಗೂ ಹೋಗಿ ಅಪ್ಪಾದೊರೈಗೆ ಹಣ್ಣು-ಹಂಪಲು ನೀಡಿ ಕೃತಾರ್ಥರಾಗಿದ್ದಾರೆ. ಅಂತೂ ಮರಿ ವೀರಪ್ಪನ್ ಅಪ್ಪಾದೊರೈ ಸಿಕ್ಕಿದ್ದಾನೆ. ಅವನಿಂದ ಎಂಜಲು ತಿಂದ ಅಧಿಕಾರಿಗಳ ವಿಚಾರಣೆ ನಡೆಯಬೇಕಿದೆ. ಹನೂರು ಶಾಸಕ ನರೇಂದ್ರ ಇನ್ನಾದರೂ ಬುದ್ಧಿ ಕಲಿಯುವನೇ?

• ಕೊಳ್ಳೇಗಾಲ ಮಾಳಿಗೆ

ಹಾಲು ಉತ್ಪಾದಕರಿಗೆ ಯಡ್ಡಿ ಮೋಸ

ಮುಖ್ಯಮಂತ್ರಿ ಯಡಿಯೂರಪ್ಪಾಗೆ ಸತ್ಯದ ತಲೆ ಮೇಲೆ ಹೊಡೆದಂತೆ ಸುಳ್ಳು ಹೇಳುವುದು ರೂಢಿಯಾದಂತೆ ಕಾಣುತ್ತಿದೆ. ಕರ್ನಾಟಕದ ಲಕ್ಷಾಂತರ ಮಂದಿ ಹಾಲು ಉತ್ಪಾದಕ ರೈತರಿಗೆ ಲೀಟರ್‌ಗೆ ಎರಡು ರೂಪಾಯಿ ಪ್ರೋತ್ಸಾಹಧನ ನೀಡುವುದಾಗಿ ಅಧಿಕಾರಕ್ಕೆ ಬಂದ ಹೊಸದರಲ್ಲಿ ಬಿಜೆಪಿ ಸರ್ಕಾರ ಘೋಷಿಸಿತ್ತು. ಆದರೆ ಡೈರಿಗಳಿಗೆ ಹಾಲು ಸರಬರಾಜು ಮಾಡಿ ಆರು ತಿಂಗಳಾದರೂ ಈ ಪ್ರೋತ್ಸಾಹಧನ ರೈತರ ಕೈಗೆ ತಲುಪುತ್ತಿಲ್ಲ.


ಗ್ರಾಮೀಣ ಪ್ರದೇಶದ ರೈತರನ್ನು ಬಿಜೆಪಿಯತ್ತ ತಿರುಗಿಸಿಕೊಳ್ಳುವ ಉಪಾಯದ ಒಂದು ಭಾಗವಾಗಿ ಜಾರಿಗೆ ಬಂದಿರುವ ಈ ಯೋಜನೆಯಿಂದ ರೈತರಿಗೆ ಕೊಂಚ ಉಪಯೋಗವಾಗುತ್ತಿತ್ತು ಎಂಬುದೇನೋ ನಿಜ. ಆದರೆ ಹೊಸ ಯೋಜನೆಯನ್ನು ಘೋಷಿಸುವಾಗ ಇರುವ ಉತ್ಸಾಹ ಅದರ ಪ್ರಾಮಾಣಿಕ ಅನುಷ್ಠಾನದಲ್ಲೂ ಇರದಿದ್ದರೆ ಏನುಪಯೋಗ? ನೇರವಾಗಿ ಹೇಳಬೇಕೆಂದರೆ ಕಳೆದ ಏಳು ತಿಂಗಳುಗಳಿಂದ ರೈತರಿಗೆ ಈ ಎರಡು ರೂಪಾಯಿ ಪ್ರೋತ್ಸಾಹಧನ ಸಿಕ್ಕಿಲ್ಲ. 2009 ರ ಸೆಪ್ಟೆಂಬರ್‌ವರೆಗೆ ಮಾತ್ರ ಹಣ ನೀಡಿ ತಲೆ ಮರೆಸಿಕೊಂಡಿದ್ದ ಯಡ್ಡಿ ಸರ್ಕಾರ ಈಗ ಇದ್ದಕ್ಕಿದ್ದಂತೆ ರೈತರೆದುರು ಪ್ರತ್ಯಕ್ಷವಾಗಿದೆ. ರೈತರ ಪ್ರತಿಭಟನೆ, ವಿರೋಧ ಪಕ್ಷಗಳ ಒತ್ತಡದಿಂದಾಗಿ ಈಗತಾನೆ ಎರಡು ತಿಂಗಳ ಪ್ರೋತ್ಸಾಹಧನ ಬಿಡುಗಡೆಯಾಗಿದೆ. ಮೊನ್ನೆ ಮಾರ್ಚ್ 14ನೇ ತಾರೀಖು ಈ ಸಂಬಂಧ ಒಂದು ಸರ್ಕಾರಿ ಆದೇಶ ಹೊರಡಿಸಲಾಗಿದ್ದು 2009 ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳ ಪ್ರೋತ್ಸಾಹಧನ ಬಿಡುಗಡೆ ಮಾಡಲಾಗಿದೆ.



ಇದಕ್ಕೆ ಮುಖ್ಯ ಕಾರಣ ಯಡ್ಡಿ ಸರ್ಕಾರದ ರೈತ ಪರ ಕಾಳಜಿಯಲ್ಲ, ಗ್ರಾಮ ಪಂಚಾಯತಿ ಎಲೆಕ್ಷನ್‌ನ ಓಟುಗಳನ್ನು ಗೆಬರಿಕೊಳ್ಳಲು ಬಿಜೆಪಿಗಳು ಈ ನಿರ್ಧಾರ ಮಾಡಿದ್ದಾರೆ.

ಕರ್ನಾಟಕದಲ್ಲಿ ಈಗ ಪ್ರತಿ ದಿನ ಅಂದಾಜು 31 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಲೀಟರ್‌ಗೆ ಎರಡು ರೂಪಾಯಿ ಅಂದರೆ ಪ್ರತಿದಿನ 62 ಲಕ್ಷ ರೂಪಾಯಿ ಪ್ರೋತ್ಸಾಹ ಧನವನ್ನು ಯಡ್ಡಿ ಸರ್ಕಾರ ರೈತರಿಗೆ ನೀಡಬೇಕಿತ್ತು, ಈ ಮೊತ್ತ ತಿಂಗಳೊಂದಕ್ಕೆ 20 ಕೋಟಿ ರೂ. ಆಗುತ್ತಿದೆ. ಕಳೆದ 6 ತಿಂಗಳ ಬಾಕಿ ಮೊತ್ತವೇ 120 ಕೋಟಿ ರೂ. ಆಯಿತು. ಇಷ್ಟೊಂದು ಹಣ ರೈತರಿಗೆ ಕೊಡುವುದನ್ನೇ ಮರೆತೇಬಿಟ್ಟಿದ್ದ ಸರ್ಕಾರ ಪತ್ರಿಕಾ ಜಾಹೀರಾತುಗಳಲ್ಲಿ ಮಾತ್ರ ಹಾಲಿನ ಪ್ರೋತ್ಸಾಹ ಧನವನ್ನು ಪೂರ್ತಿ ಕೊಟ್ಟಿರುವುದಾಗಿ ಪ್ರಚಾರ ಮಾಡಿಕೊಂಡಿದೆ. ಜಾಹೀರಾತಿನ ಒಂದು ಕಡೆ ಯಡ್ಡಿ ಮತ್ತೊಂದೆಡೆ KMFನ ನಂದಿನಿ ಹಸು ಮಗದೊಂದು ಕಡೆ ಎಮ್ಮೆ ಕರದಂತಿರುವ ಸೋಮಶೇಖರ ರೆಡ್ಡಿಯ ಫೋಟೋ ಪ್ರಿಂಟಿಸಿ ಈ ಸುಳ್ಳು ಜಾಹೀರಾತು ನೀಡಲಾಗಿದೆ.

ಆದರೆ ವಾಸ್ತವ ಸಂಗತಿ ಏನೆಂದರೆ ರೈತರಿಗೆ ಇನ್ನೂ ನಾಲ್ಕು ತಿಂಗಳ ಪ್ರೋತ್ಸಾಹ ಧನ ನೀಡಿಯೇ ಇಲ್ಲ, ಈ ಮೊತ್ತವೇ ಅಂದಾಜು 80 ಕೋಟಿಯಷ್ಟಾಗುತ್ತಿದೆ. ಈ ಮಧ್ಯೆ ಬೆಂಗಳೂರು ನಗರಪಾಲಿಕೆ ಚುನಾವಣೆಯಲ್ಲಿ ಗೆದ್ದು ಆನಂತರ ಹಾಲಿಗೆ ಲೀಟರ್‌ಗೆ 3 ರೂ. ಬೆಲೆ ಏರಿಸಿ ನಗರವಾಸಿಗಳಿಗೆ ಬರೆ ಹಾಕಿರುವ ಯಡ್ಡಿ ಸರ್ಕಾರ ಈಗ ಅದೇ ಹಣವನ್ನು ರೈತರಿಗೆ ಕೊಡುವುದಾಗಿ ಹೇಳಿಕೊಂಡಿದೆ.



2009ರ ಅಕ್ಟೋಬರ್ ಹಣ ಈಗ ನೀಡಿರುವುದು

ಗ್ರಾಮ ಪಂಚಾಯತಿ ಎಲೆಕ್ಷನ್ ಬರುತ್ತಿದೆಯಲ್ಲ ಅದಕ್ಕೆ!

ಹೀಗೆ ಹೊಳೆ ದಾಟಿದ ಮೇಲೆ.... ಎಂಬ ಗಾದೆ ಮಾತಿನಂತೆ ಯಡ್ಡಿ ಸರ್ಕಾರದ ಕೆಲಸ ನಡೆಯುತ್ತಿದೆ.

ಬಿಜೆಪಿಗಳು ವಿಧಾನಸಭಾ ಚುನಾವಣೆ ವೇಳೆ ಹಾಲು ಉತ್ಪಾದಕರಿಗೆ 2 ರೂ. ಪ್ರೋತ್ಸಾಹಧನ ನೀಡುವ ಭರವಸೆ ಕೊಟ್ಟು ಈಗ ಬೇಕಾಬಿಟ್ಟಿಯಾಗಿ ವರ್ತಿಸುತ್ತಿರುವುದಕ್ಕೆ ಇಲ್ಲಿರುವ ದಾಖಲೆಯೇ ಸಾಕ್ಷಿ.

2009 ರ ಪ್ರೋತ್ಸಾಹಧನದ ಒಂದು ಭಾಗ ಮಾತ್ರ ಈಗ ರೈತರ ಕೈ ತಲುಪಿದೆ. ಆದರೆ ಇನ್ನುಳಿದ ನಾಲ್ಕು ತಿಂಗಳ ಬಾಕಿ 80 ಕೋಟಿ ರೂ. ಕೊಡುತ್ತಿಲ್ಲ ಯಾಕೆ? ಆದರೆ ಸರ್ಕಾರಿ ಖಜಾನೆ ಬರಿದಾಗಿದೆ ಎಂದು ಇದರರ್ಥವೇ? ●

ತರೀಕೆರೆ: ಅಂಚೆ ಸಿದ್ದರಾಮಪ್ಪನ ಅಧಿಕ ಪ್ರಸಂಗ!

ಯಾವುದೋ ವೈಯಕ್ತಿಕ ಜಗಳದ ಕಾರಣಕ್ಕಾಗಿ ತಮ್ಮ ವೃತ್ತಿಗೇ ದ್ರೋಹ ಬಗೆದು ತನ್ನ ಎದುರು ಪಾರ್ಟಿಯನ್ನು ಹಣಿಯುವುದು ಆತ್ಮವಂಚನೆಯಷ್ಟೇ ಅಲ್ಲ, ಅದು [illegible] ಕೂಡ. ಅದರಲ್ಲೂ ವೈದ್ಯರು, ಶಿಕ್ಷಕರು ಮತ್ತು ಅಂಚೆಯವರು ಇಂತಹ ದ್ರೋಹ ಎಸಗುವುದಂತೂ ಅಕ್ಷಮ್ಯ. ತರೀಕೆರೆಯ ಅಂಚೆಯಣ್ಣ ಸಿದ್ದರಾಮಪ್ಪ ಇಂತಹ ಅದ್ವಾನಿ ಕೆಲಸದಲ್ಲಿ ಮುಳುಗಿದ್ದಾನೆ. ಈತನಿಗೂ ರವಿ ಶಾನುಭೋಗನಹಳ್ಳಿಯವರಿಗೂ ಆಸ್ತಿ ವಿಚಾರದಲ್ಲಿ ಕೋರ್ಟಿನಲ್ಲಿ ವ್ಯಾಜ್ಯವಿದೆ. ಈ ಕಾರಣಕ್ಕಾಗಿ ರವಿಯವರಿಗೆ ಬರುವ ಪತ್ರ, ಪತ್ರಿಕೆಗಳು, ಫೋನ್‌ಬಿಲ್‌ಗಳು ಮತ್ತು ಸರ್ಕಾರಿ ಪತ್ರಗಳನ್ನು ಸಿದ್ದರಾಮಪ್ಪ 'ಎಗರಿಸಲು' ತೊಡಗಿದ್ದಾನೆ. ರವಿಯವರು ಚಂದಾದಾರರಾಗಿರುವ '[illegible]', 'ಕನ್ನಡ ನುಡಿ' ಮತ್ತು 'ಗೌರಿ ಲಂಕೇಶ್' ಪತ್ರಿಕೆಗಳೂ ಕೂಡಾ ಸಿದ್ದರಾಮಪ್ಪನ ವಶವಸ್ತುಗಳಾಗಿ ಬಿದ್ದಿರುವುದರಿಂದ, ರವಿಯವರಿಗೆ ಅವು ತಲುಪುತ್ತಲೇ ಇಲ್ಲ.

ಈ [illegible] ವೃತ್ತಿಯ ಸಾರ್ವಜನಿಕರಿಗಷ್ಟೇ ಅಲ್ಲ, ಇಲಾಖೆಯವರಿಗೂ [illegible] ತೋರಿಸುತ್ತಾನೆ. ಈ ಸಿದ್ದರಾಮಪ್ಪ, ಇಂತಹ ಸಿದ್ದರಾಮಪ್ಪನಿಗೆ ಅಜ್ಜಂಪುರ ಪೊಲೀಸ್ ಠಾಣೆಯ ಮಧುಸೂದನ, ರಾಮನಾಯ್ಕರೆಂಬ ಪೇದೆಗಳು ಬೆಂಬಲಿಸುತ್ತಿದ್ದಾರೆ. ಆಸ್ತಿ ವ್ಯಾಜ್ಯವೇ ಬೇರೆ, ವೃತ್ತಿಧರ್ಮವೇ ಬೇರೆ ಎಂಬುದನ್ನು ಸಿದ್ದರಾಮಪ್ಪ ಅರಿತುಕೊಳ್ಳಲಿ. ರವಿಯವರಿಗೆ ತಲುಪಿಸಬೇಕಾದ ಅಂಚೆಪತ್ರಗಳನ್ನು ತಲುಪಿಸುವ ಕೆಲಸ ಮಾಡಲಿ. ಇಲ್ಲದಿದ್ದರೆ ಇಲಾಖಾ ವಿಚಾರಣೆ ಎದುರಿಸಬೇಕಾದೀತೇನೋ! ●

ಲಲಿತಾನಾಯಕ್ ವಿರುದ್ಧ ಶಂಕರನಾಯ್ಕನ ಕಿತಾಪತಿ

ಸುಮ್ಮನೇ ಕೂಡಲಾಗದ ಮಾಜಿ ಸಚಿವ ಡಾ. ಶಂಕರನಾಯ್ಕನೀಗ ರಾಜ್ಯ ಬಂಜಾರ ಸಂಘವನ್ನು ಮತ್ತೊಮ್ಮೆ ಅಧ್ವಾನಗೊಳಿಸಲು ಪ್ರಯತ್ನಿಸುತ್ತಿದ್ದಾನೆ. ಬಂಜಾರ ಸಂಘದ ಭವನಕ್ಕೆಂದು ಬಿಡುಗಡೆಗೊಂಡ ಹಣದಲ್ಲಿ ಲಲಿತಾನಾಯಕ್ 40 ಲಕ್ಷ ರೂ. ಅವ್ಯವಹಾರ ಮಾಡಿದ್ದಾರೆಂದು ಆರೋಪ ಮಾಡಿರುವ ಡಾ. ಶಂಕರ ನಾಯ್ಕ ಬಂಜಾರ ಸಂಘದ ಸದಸ್ಯರಲ್ಲಿ ಗೊಂದಲ ಮೂಡಿಸಲು ಯತ್ನಿಸಿದ್ದಾನೆ.



ವಾಸ್ತವವಾಗಿ ಬಂಜಾರ ಸಂಘ ಭವನಕ್ಕೆಂದು ಒಂದೂವರೆ ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಆದರೆ ಆ ಹಣ ಬಂಜಾರ ಸಂಘದ ಸುಪರ್ದಿಗೆ ಬರುವುದಿಲ್ಲ, ಬದಲು 2009 ರಲ್ಲಿ ರಾಜ್ಯ ಸರ್ಕಾರ ರಚಿಸಿರುವ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ಮಂಜೂರಾಗಿದೆ. ಈ ನಿಗಮವೇ ವಸಂತನಗರದಲ್ಲಿ ಅಂಬೇಡ್ಕರ್ ಭವನದ ಹಿಂದಿರುವ ಬಂಜಾರ ಸಂಘದ ನಿವೇಶನದಲ್ಲಿ ಬಂಜಾರ ಭವನ ಕಟ್ಟಲಿದೆ.

ವಸ್ತುಸ್ಥಿತಿ ಹೀಗಿರುವಾಗ ಇಲ್ಲಿ ಲಲಿತಾನಾಯಕ್‌ರ ಹೆಸರನ್ನು ಶಂಕರನಾಯ್ಕ ಸುಮ್ಮನೇ ಎಳೆದುತಂದು ಡ್ಯಾಮೇಜ್ ಮಾಡಲು ನೋಡುತ್ತಿದ್ದಾನೆ. ಕಳೆದ ಮೂರು ವರ್ಷದಿಂದ ಬಂಜಾರ ಸಂಘದ ಅಧ್ಯಕ್ಷೆಯಾಗಿ ತಮ್ಮ ಇತಿಮಿತಿಯಲ್ಲಿ ಸಮುದಾಯದ ಏಳಿಗೆಗೆ ಒಂದಿಷ್ಟು ಕಾರ್ಯಕ್ರಮಗಳನ್ನು ರೂಪಿಸುತ್ತ ಬಂದಿರುವ ಲಲಿತಾನಾಯಕರು ಬಂಜಾರ ಸಮುದಾಯದ ಒಲವು ಗಳಿಸುತ್ತಿರುವುದನ್ನು ಶಂಕರನಾಯ್ಕಗೆ ಸಹಿಸಲಾಗುತ್ತಿಲ್ಲ, ಲಲಿತಾನಾಯಕ್‌ಗೂ ಮೊದಲು ಅಧ್ಯಕ್ಷನಾಗಿದ್ದ ಶಂಕರನಾಯ್ಕ ಸಂಘವನ್ನು ಸ್ವಂತ ಆಸ್ತಿಯಂತೆ ಬಳಸಿಕೊಂಡಿದ್ದ. ಸಂಘವನ್ನು ಟ್ರಸ್ಟ್ ಮಾಡಿ ತನ್ನ ಗ್ಯಾಂಗ್‌ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದಾಗ ಲಲಿತಾನಾಯಕ್ ಮತ್ತು ಅವರ ಬೆಂಬಲಿಗರು ಅದನ್ನು ವಿರೋಧಿಸಿದ್ದರು. ಸಂಘವು ಇಡೀ ಸಮುದಾಯದ ಸಂಘಟನೆಯಾಗಿದ್ದು ಯಾರೋ ಕೆಲವರು ಇದನ್ನು ಟ್ರಸ್ಟ್ ಮಾಡಿಕೊಳ್ಳುವುದು ತಪ್ಪು ಎಂದು ವಾದಿಸಿ ಶಂಕರನಾಯ್ಕಗೆ ಹಿನ್ನಡೆಯುಂಟು ಮಾಡಿದ್ದರು. ಈ ಶಂಕರನಾಯ್ಕ ಅಧ್ಯಕ್ಷ ಪದವಿ ತ್ಯಜಿಸುವಾಗ ಸಂಘದ ನಿವೇಶನದ 30 ವರ್ಷಗಳ ಲೀಸ್ ಮುಗಿದಿತ್ತು. ಆಗ ಸರ್ಕಾರಕ್ಕೆ ಕಟ್ಟಬೇಕಿದ್ದ 1 ಲಕ್ಷ 30 ಸಾವಿರ ರೂ.ಗಳನ್ನು ಸಹ ಶಂಕರನಾಯ್ಕ ಕಟ್ಟಿರಲಿಲ್ಲ, ಮುಂದೆ ಲಲಿತಾನಾಯಕ್ ಅಧ್ಯಕ್ಷರಾದ ಮೇಲೆ ಈ ಹಣ ಕಟ್ಟಿ ನಿವೇಶನ ಉಳಿಸಿಕೊಳ್ಳಲಾಯಿತು.

ಈ ಹಿಂದೆ ನೆಲಮಂಗಲದಿಂದ ಜನತಾದಳದಿಂದ ಗೆದ್ದಿದ್ದ ಶಂಕರನಾಯ್ಕ ದೇವೇಗೌಡರು, ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ವೈದ್ಯಕೀಯ ಶಿಕ್ಷಣ ಸಚಿವನಾಗಿ ಹೆಸರು ಕೆಡಿಸಿಕೊಂಡಿದ್ದಂತಹ ವ್ಯಕ್ತಿ. ಕಳೆದ ಸಲ ಬಿಜೆಪಿಗೆ ಜಿಗಿದಿದ್ದ ಈತ ಅಲ್ಲಿ ಟಿಕೆಟ್ ಸಿಗದಿದ್ದಾಗ ಕಾಂಗ್ರೆಸ್ಸಿಗೆ ಹಾರಿಬಂದ. ಈಗ ಮತ್ತೆ ಬಂಜಾರ ಸಂಘವನ್ನು ಅಧ್ವಾನಗೊಳಿಸಲು ಹಾತೊರೆಯುತ್ತಿದ್ದಾನೆ. ಸದ್ಯ ತನ್ನ ಮೇಲಿನ ಆರೋಪಗಳನ್ನು ಸಾಬೀತುಪಡಿಸದಿದ್ದರೆ ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಲಲಿತಾನಾಯಕ್ ಹೇಳಿದ ಮೇಲೆ ಡಾ. ಶಂಕರನಾಯ್ಕ ತಣ್ಣಗಾಗಿದ್ದಾನೆ.

ಬಂಜಾರ ಸಂಘದವರು ಇಂತಹ ಶಂಕರನಾಯ್ಕಗಳ ಬಗ್ಗೆ ಎಚ್ಚರದಿಂದಿರಲಿ. ●



ಸ್ಪಷ್ಟೀಕರಣ

ಶಿವಮೊಗ್ಗೆ ಕಂಡ ಯಶಸ್ವಿ ಉದ್ಯಮಿಗಳಲ್ಲಿ ವುಡ್‌ಲ್ಯಾಂಡ್ ಹೋಟೆಲ್‌ನ ಸ್ಥಾಪಕ ದಿವಂಗತ ಆರ್. ಕಣ್ಣನ್ ಕೂಡ ಒಬ್ಬರು. ಆದರೆ ನಮ್ಮ ಡಿಸೆಂಬರ್ 7, 2005 ರ ಸಂಚಿಕೆಯಲ್ಲಿ 'ಬೀದಿಗೆ ಬಿದ್ದ ಸಿರಿವಂತರು' ಎಂಬ ಲೇಖನದಲ್ಲಿ ಕಣ್ಣನ್ ಅವರ ಬಗ್ಗೆ ಹಲವು ಆಧಾರರಹಿತ ಆರೋಪಗಳನ್ನು ಮಾಡಲಾಗಿತ್ತು. ವಾಸ್ತವವಾಗಿ ಕಣ್ಣನ್‌ರವರು ಕಷ್ಟಪಟ್ಟು ಮುಂದೆ ಬಂದಿದ್ದರಲ್ಲದೆ, ತಮ್ಮ ಮಕ್ಕಳನ್ನು ಬೆಳೆಸಿ ತಮ್ಮ ಸಂಸಾರದ ಪ್ರೀತಿವಾತ್ಸಲ್ಯದ ನಡುವಿನಲ್ಲೇ ಕಣ್ಣುಮುಚ್ಚಿದ್ದರು.

ನಮ್ಮ ವರದಿಯಿಂದಾಗಿ ಕಣ್ಣನ್ ಅವರ ಬಂಧುಬಾಂಧವರಿಗೆ ನೋವುಂಟಾಗಿದ್ದರೆ ಈ ಮೂಲಕ ವಿಷಾದ ವ್ಯಕ್ತಪಡಿಸುತ್ತೇವೆ.

● ಸಂ



ತನ್ನ ಜೊತೆಗಾತಿಗಾಗಿ ಅಳುತ್ತಿರುವ ಗುಬ್ಬಿ

ಗಂಡು ಗುಬ್ಬಚ್ಚಿ ಮತ್ತು ಹೆಣ್ಣು ಗುಬ್ಬಚ್ಚಿಗಳಿಗೆ ಪರಸ್ಪರ ಒಪ್ಪಿಗೆ ಆಗುವ ವರವಧುಗಳನ್ನು ಯಾರೂ ಆರಿಸದಿದ್ದರೂ, ನಿಶ್ಚಿತಾರ್ಥ-ಮದುವೆ ಎಂಬುದೆಲ್ಲ ನಡೆಯದಿದ್ದರೂ ಸಂತಾನಾಭಿವೃದ್ಧಿಯ ಶಕ್ತಿ ಬಂದ ತಕ್ಷಣ ಜೊತೆಗೂಡುವ ಹೆಣ್ಣು ಮತ್ತು ಗಂಡು ಗುಬ್ಬಚ್ಚಿಗಳು ತಮ್ಮ ಜೀವನಪರ್ಯಂತ ಜೊತೆಯಾಗಿರುತ್ತವೆ ಎಂಬುದು ಅತ್ಯಂತ ಕುತೂಹಲದ ಸಂಗತಿ. ಹೆಂಚಿನ ಮನೆ, ಗೋಡೆಯಲ್ಲಿನ ಕಂದಕ, ಪಕಾಸಿನ ಸಂಧಿ- ಹೀಗೆ ತಮಗೆ ಸೂಕ್ತವೆನಿಸಿದ ಸ್ಥಳ ಸಿಕ್ಕನಂತರ ಸಮಾನ ಪರಿಶ್ರಮದಿಂದ ಎಲ್ಲೆಲ್ಲಿಂದಲೋ ಕಡ್ಡಿ, ಬೇರು, ಕೊಕ್ಕಿನಿಂದ ಬಗ್ಗಿಸಬಹುದಾದ ತೆಳುವಾದ ಹಂಚಿಕಡ್ಡಿಗಳನ್ನು ಕೊಕ್ಕಿನಲ್ಲಿ ಹೊತ್ತುತಂದು ಒಪ್ಪ ಓರಣವಾಗಿ ಯಾವುದೇ ಮಾನವ ಕುಶಲಕರ್ಮಿಗೆ ಕಡಿಮೆ ಇಲ್ಲದಂತೆ ಗೂಡು ನಿರ್ಮಿಸಿಕೊಳ್ಳುತ್ತವೆ.

• ನಾರಾಯಣ ಸುವರ್ಣ
ಚಿಕ್ಕಮಗಳೂರು

ಪ್ರಬಂಧ

ಗೌರಿ ಲಂಕೇಶರು ಏಪ್ರಿಲ್ 14ರ ಸಂಚಿಕೆಯ 'ಕಂಡ ಹಾಗೆ' ಅಂಕಣದಲ್ಲಿ ಗುಬ್ಬಚ್ಚಿಗಳ ಕುರಿತು ವ್ಯಕ್ತಪಡಿಸಿದ ಕಳಕಳಿ ಹಾಗೂ ಸೂಕ್ಷ್ಮ ಸಂವೇದನೆ ಮೆಚ್ಚುಗೆಯಾಯಿತು. ಅವರು ಬಳಸಿದ ಕೆಲವು ಶಬ್ದ ಮತ್ತು ವಾಕ್ಯಗಳು ನಾನು ಚಿಕ್ಕವನಿದ್ದಾಗಿನಿಂದ ಗುಬ್ಬಚ್ಚಿ ಸಮೂಹಗಳೊಂದಿಗಿನ ನನ್ನ ನಂಟು, ಅವುಗಳ ಬಗೆಗೆ ನನಗಿದ್ದ ಆಸ್ಥೆ ಪ್ರೀತಿ ಮತ್ತು ಅವುಗಳೊಂದಿಗೆ ಕ್ರಮೇಣ ಸೃಷ್ಟಿಯಾದ ಪರಸ್ಪರ ಮಮಕಾರಗಳನ್ನು ಮೆಲುಕು ಹಾಕುವಂತೆ ಮಾಡಿದವು.

ಆಧುನಿಕ ಬದುಕನ್ನು ರೂಢಿಸಿಕೊಂಡು ಮಹಾನಗರದ ಜೀವನಶೈಲಿಯ ಪ್ರವಾಹದಲ್ಲಿ ಈಜುತ್ತಿರುವ ನಿಮ್ಮಂತಹ ಪತ್ರಕರ್ತರೂ ಜನರ ನಡುವೆಯೇ ಬದುಕುವ ಗುಬ್ಬಚ್ಚಿಗಳು ಎಂಬ ಸುಂದರ ಪಕ್ಷಿಗಳ ಅಳಿವುಉಳಿವನ್ನು ಗಮನಿಸಿರುವುದು ಸಂತಸ ಮೂಡಿಸಿತು. ಹೀಗಾಗಿ ಗುಬ್ಬಚ್ಚಿಗಳ ಬಗ್ಗೆ ನಾನು ದೀರ್ಘಕಾಲದಿಂದ ಗಮನಿಸಿದ ಒಂದಷ್ಟು ಮಾಹಿತಿಗಳನ್ನು ಜನರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಪಟ್ಟಣ, ನಗರಗಳಲ್ಲಿ ಎಲ್ಲೆಂದರಲ್ಲಿ, ಹಾದಿಬೀದಿಗಳಲ್ಲಿ, ಮನೆಯ ಅಂಗಳದಲ್ಲಿ ಏನನ್ನೋ ಕುಕ್ಕುತ್ತಾ, ಆಹಾರ ಅರಸುತ್ತಾ, ಮನುಷ್ಯರ ಸುಳಿವಿಲ್ಲವೆಂದಾದರೆ ಮನೆಯೊಳಗೂ ನುಗ್ಗಿ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನೇ ಕುಕ್ಕುತ್ತಾ ಮಕ್ಕಳು ಸೇರಿದಂತೆ ಹಿರಿಯರ ಗಮನವನ್ನು ಸೆಳೆಯುತ್ತಿದ್ದ ಗುಬ್ಬಚ್ಚಿಗಳ ಸಂತತಿ, ನೀವು ಹೇಳಿದಂತೆ ಈಗ ವಿರಳ ಎನಿಸಿದ್ದರೂ ಹೆಂಚು ಹೊದಿಸಿದ ಮನೆಗಳ ಸುತ್ತ ಅವು ಇನ್ನೂ ಉಳಿದಿವೆ. ಹಾಗೆ ಸಣ್ಣಪುಟ್ಟ ಪಟ್ಟಣ, ನಗರಗಳಲ್ಲಿನ ಹೊರವಲಯದ ಬಡಾವಣೆಗಳಲ್ಲಿ ಹೆಂಚಿನಮನೆ, ಹುಲ್ಲಿನ ಗುಡಿಸಲು, ಬಣವೆಗಳಿರುವೆಡೆ ಗುಬ್ಬಚ್ಚಿಗಳಿಗೆ ಆಹಾರ ದೊರೆಯುವುದರಿಂದ ಅವುಗಳು ಹಲವು ಗುಂಪುಗಳಾಗಿ ಅಲ್ಲಲ್ಲ ಈಗಲೂ ನೆಲೆಸಿವೆ.

ಈಗ್ಗೆ ಸುಮಾರು ಎರಡು ದಶಕಗಳ ಹಿಂದೆ ಬೇಲೂರಿನಲ್ಲಿ ಹೆಂಚಿನ ಮನೆಯೊಂದರಲ್ಲಿ ಬಾಡಿಗೆಗಿದ್ದ ನನಗೆ 'ಗುಬ್ಬಚ್ಚಿ' ಎಂಬ ಪುಟಾಣಿ ಪಕ್ಷಿಗಳ ಬದುಕಿನ ಅದ್ಭುತಗಳ ದರ್ಶನವಾಗಿತ್ತಲ್ಲದೆ ಅವುಗಳ ಜೀವನಶೈಲಿಯನ್ನು ನಿತ್ಯ ಗಂಟೆಗಟ್ಟಲೆ ವೀಕ್ಷಿಸುತ್ತಿದ್ದೆ. ಆಗ ಆ ಪಕ್ಷಿಗಳ ಜಗತ್ತಿನಲ್ಲೂ ಕಟ್ಟುಪಾಡು, ಶಿಕ್ಷೆ, ಸಂಬಂಧಗಳು, ದುಃಖ, ಸಂತಸದ ಸಂವೇದನೆಗಳಿವೆ ಎಂಬುದನ್ನು ಗಮನಿಸಿದ್ದೆ.

ಆಗ ಟೆಲಿಫೋನ್ ಆಪರೇಟರ್ ಕೆಲಸ ನಿರ್ವಹಿಸುತ್ತಿದ್ದ ನಾನು ಬಾಡಿಗೆಗಿದ್ದ ಮನೆಯ ಎದುರಿನ ಅಂಗಳಕ್ಕೆ ಬರುತ್ತಿದ್ದ ಗುಬ್ಬಚ್ಚಿಗಳಿಗೆ ಏನಾದರೂ ಆಹಾರ ಹಾಕಬೇಕೆಂದೆನಿಸಿ ನಾನು ಊಟ ಮಾಡುತ್ತಿದ್ದ ಹೊಟೇಲ್‌ನವರನ್ನು ವಿಚಾರಿಸಿದಾಗ ಅಕ್ಕಿ, ನುಚ್ಚು ಅವುಗಳಿಗೆ ಪ್ರಿಯ ಎಂದು ಅವರು ಸಲಹೆ ನೀಡಿದ್ದರು. ಅದರಂತೆ ಅಕ್ಕಿ, ನುಚ್ಚು ಖರೀದಿಸಿ ತಂದು ಪ್ರತಿದಿನ ಮುಂಜಾನೆ ಅವುಗಳಿಗೆ ಹಾಕಲಾರಂಭಿಸಿದೆ. ನುಚ್ಚು ದೊರೆಯುತ್ತಿದ್ದರಿಂದ ಗುಬ್ಬಚ್ಚಿಗಳ ಸಂಖ್ಯೆ ದಿನೇದಿನೇ ಹೆಚ್ಚಾಗ ತೊಡಗಿ ಪ್ರತಿದಿನ ನನ್ನ ಮನೆಯ ಮುಂದೆ ಐವತ್ತರಿಂದ ಅರವತ್ತು ಹಕ್ಕಿಗಳು ದಿನನಿತ್ಯ ಹಾಜರಾಗತೊಡಗಿದವು.

ನುಚ್ಚು ಮುಗಿದನಂತರ ಕೆಲವು ಎತ್ತಲೋ ಹಾರಿಹೋದರೆ ಇನ್ನೂ ಕೆಲವು ಹಕ್ಕಿಗಳು ಅಲ್ಲೇ ಗಿರಕಿ ಹೊಡೆಯುತ್ತ ಉಳಿದುಬಿಡುತ್ತಿದ್ದವು. ಈ ಪುಟ್ಟ ಹಕ್ಕಿಗಳಲ್ಲಿ ಕುತ್ತಿಗೆ ಬಳಿ ಕಪ್ಪು ಬಣ್ಣದ ಮಚ್ಚೆಯಂತಹ ಗುರುತಿದ್ದು ರೆಕ್ಕೆ ಕಂದುಬಣ್ಣದ ಲೇಪನ ಹೊಂದಿದ್ದರೆ ಅದು ಗಂಡು, ಉಳಿದಂತೆ ಬೂದುಬಣ್ಣದ್ದು ಹಕ್ಕಿ ಹೆಣ್ಣು. ಗಂಡಿನ ಮುಖ ಸ್ವಲ್ಪ ಒರಟನಂತೆ ಕಂಡುಬಂದರೆ ಹೆಣ್ಣು ಗಂಡಿಗಿಂತ ಹೆಚ್ಚು ಮುದ್ದಾಗಿರುತ್ತವೆ. ಅವುಗಳು ಚಿಕ್‌ಚಿಕ್ ಚೀಂವ್ ಎಂದು ಗುನುಗುತ್ತ ಅಂಗಳದಲ್ಲಿ ಹರಡಿದಂತಿದ್ದ ಗರಿಕೆ ಹುಲ್ಲಿನ ಚಿಗುರು, ಅಳಿದುಳಿದ ಅಕ್ಕಿ ನುಚ್ಚುಗಳನ್ನು ಕುಕ್ಕಿ ತಿನ್ನುತ್ತಾ ಅತ್ತಿತ್ತ ಪುರ್ರನೆ ಹಾರಾಟ ನಡೆಸುವುದನ್ನೇ ನಾನು ಗಂಟೆಗಟ್ಟಲೆ ಆಸ್ವಾದಿಸುತ್ತಿದ್ದೆ. ಹೊತ್ತು ಮೇಲೇರಿ ಬಿಸಿಲು ಹೆಚ್ಚಾದಾಗ ಅವು ಮನೆಯ ಮಾಡಿನ ನೆರಳಿಗೋ ಮತ್ತೆಲ್ಲಿಗೋ ಹೋಗಿಬಿಡುತ್ತಿದ್ದವು.

ಈ ಪರಿಪಾಠ ಮುಂದುವರೆದಂತೆ ಗುಬ್ಬಚ್ಚಿ ಲೋಕದ ಅನೇಕ ಸಂಪ್ರದಾಯ, ಕಟ್ಟುಪಾಡು, ಗಂಡು- ಹೆಣ್ಣಿನ ನಡುವಿನ ಆಜೀವ ಸಂಬಂಧದಂತಹ ಅನೇಕ ವಿಸ್ಮಯಗಳು ನನ್ನ ಮುಂದೆ ಬಿಚ್ಚಿಕೊಳ್ಳತೊಡಗಿದವು. ಮರಿಗಳು ತಂದೆ ತಾಯಿಯಿಂದ ಗುಕ್ಕು ಪಡೆದು ಬೆಳೆದು ತಾವೇ ಆಹಾರ ಅರಸಿಕೊಳ್ಳುವಂತಾದ ನಂತರ ತಮ್ಮ ತವರಿನ ಸಂಬಂಧ ಕಡಿದು ಪ್ರತ್ಯೇಕ ಜೀವನ ಆರಂಭಿಸುತ್ತವೆ. ಹೀಗೆ ಬೆಳೆಯುವ ಗಂಡು ಗುಬ್ಬಚ್ಚಿ ಮತ್ತು ಹೆಣ್ಣು ಗುಬ್ಬಚ್ಚಿಗಳಿಗೆ ಪರಸ್ಪರ ಒಪ್ಪಿಗೆ ಆಗುವ ವರವಧುಗಳನ್ನು ಯಾರೂ ಆರಿಸದಿದ್ದರೂ, ನಿಶ್ಚಿತಾರ್ಥ-ಮದುವೆ ಎಂಬುದೆಲ್ಲ ನಡೆಯದಿದ್ದರೂ ಸಂತಾನಾಭಿವೃದ್ಧಿಯ ಶಕ್ತಿಬಂದ ತಕ್ಷಣ ಜೊತೆಗೂಡುವ ಹೆಣ್ಣು ಮತ್ತು ಗಂಡು ಗುಬ್ಬಚ್ಚಿಗಳು ತಮ್ಮ ಜೀವನಪರ್ಯಂತ ಜೊತೆಯಾಗಿರುತ್ತವೆ ಎಂಬುದು ಅತ್ಯಂತ ಕುತೂಹಲದ ಸಂಗತಿ.

ಹೀಗೆ ಒಮ್ಮೆ ಜೊತೆಗೂಡಿದ ಗಂಡು ಮತ್ತು ಹೆಣ್ಣು ದಾಂಪತ್ಯಕ್ಕೆ ಪ್ರವೇಶಿಸುವುದಕ್ಕೆ ಮುನ್ನ ತಮ್ಮ ಮಕ್ಕಳಿಗಾಗಿ ಸೂರು ನಿರ್ಮಿಸಲು ಸೂಕ್ತ ಸ್ಥಳದ ಹುಡುಕಾಟ ನಡೆಸುತ್ತವೆ. ಇದರಲ್ಲಿ ಗಂಡು ಮತ್ತು ಹೆಣ್ಣು ಸಮಾನ ಹೊಣೆಗಾರಿಕೆ ತೋರುತ್ತವೆ. ಒಂದೇ ಸ್ಥಳವನ್ನು ಅವು ಪರಸ್ಪರ ಎರಡೆರಡು ಬಾರಿ ಪರಿಶೀಲಿಸುತ್ತವೆ. ಬೇಡವೆಂದಾಗ ಬೇರೊಂದು ಜಾಗವನ್ನು ಹುಡುಕುತ್ತವೆ. ಈ ಸ್ಥಳ ಪರಿಶೀಲನೆ ವೇಳೆ ಇತರೆ ಪ್ರಾಣಿಗಳಿಂದ ರಕ್ಷಣೆ ಇದೆಯೇ ಎಂಬುದನ್ನು ಅವು ಗಮನಿಸುತ್ತವೆ. ಬೆಕ್ಕು, ನಾಯಿ, ಕಾಗೆಗಳು ಸುಲಭವಾಗಿ ಗೂಡಿನಿಂದ ಮೊಟ್ಟೆ ಅಥವಾ ಮರಿಯನ್ನು ಹೊತ್ತೊಯ್ಯಲು ಸಾಧ್ಯವಿಲ್ಲದ ಕಡೆ ಮಾತ್ರ ಅವುಗಳು ತಮ್ಮ ಗೂಡನ್ನು ನಿರ್ಮಿಸುವುದು ಇದಕ್ಕೆ ಸಾಕ್ಷಿಯಾಗಿದೆ.

ಈ ಸಂದರ್ಭದಲ್ಲಿ ಅವುಗಳು ವಿನಿಮಯ ಮಾಡಿಕೊಳ್ಳುವ ಶಬ್ದಗಳು ಕೂಡ 'ಆಗಬಹುದೇ-ಬೇಡವೇ' ಎನ್ನುವ ಮನುಷ್ಯನ ಮಾತಿನಂತಿರುತ್ತದೆ. ಹೆಂಚಿನ ಮನೆ, ಗೋಡೆಯಲ್ಲಿನ ಕಂದಕ, ಪಕಾಸಿನ ಸಂದಿ ಹೀಗೆ ತಮಗೆ ಸೂಕ್ತವೆನಿಸಿದ ಸ್ಥಳ ಸಿಕ್ಕನಂತರ ಸಮಾನ ಪರಿಶ್ರಮದಿಂದ ಎಲ್ಲೆಲ್ಲಿಂದಲೋ ಕಡ್ಡಿ, ಬೇರು, ಕೊಕ್ಕಿನಿಂದ ಬಗ್ಗಿಸಬಹುದಾದ ತೆಳುವಾದ ಹಂಚಿಕಡ್ಡಿಗಳನ್ನು ಕೊಕ್ಕಿನಲ್ಲಿ ಹೊತ್ತುತಂದು ಒಪ್ಪ ಓರಣವಾಗಿ ಯಾವುದೇ ಮಾನವ ಕುಶಲಕರ್ಮಿಗೆ ಕಡಿಮೆ ಇಲ್ಲದಂತೆ ಗೂಡು ನಿರ್ಮಿಸಿಕೊಳ್ಳುತ್ತವೆ.

ಒಮ್ಮೆ ಗೂಡು ನಿರ್ಮಾಣವಾದ ನಂತರ ಹೆಣ್ಣು ಮೊಟ್ಟೆ ಇರಿಸುತ್ತದೆ. ಹೀಗೆ ಗೂಡಿನಲ್ಲಿ ಇರಿಸಿದ ಮೊಟ್ಟೆಯ ಜೊತೆ ಹೆಣ್ಣು ಕುಳಿತರೆ ಗೂಡಿನ ಹೊರಭಾಗದಲ್ಲಿ ಪಹರೆಗಾರನಂತೆ ಗಂಡು ಕುಳಿತು ರಾತ್ರಿ ಕಳೆಯುತ್ತದೆ. ಹಗಲಿನ ವೇಳೆ ಜೊತೆಜೊತೆಯಲ್ಲೇ ಆಹಾರ ಅರಸುವ ಗುಬ್ಬಚ್ಚಿ ಗುಂಪುಗಳ ನಡುವೆ ಒಮ್ಮೊಮ್ಮೆ ಜಗಳ ಆರಂಭಗೊಳ್ಳುತ್ತದೆ. ಈ ಜಗಳದಲ್ಲಿ ಅವುಗಳಿಗೆ ಸಿಟ್ಟು ಹೆಚ್ಚಾದಾಗ ಅತ್ಯಂತ ಚುರುಕಾಗಿ ತಲೆಯನ್ನು ಒಮ್ಮೆ ಆಕಾಶದತ್ತ ಮತ್ತೊಮ್ಮೆ ನೆಲಕ್ಕೆ ಕುಕ್ಕುವಂತೆ ಅಲ್ಲಾಡಿಸುತ್ತವೆ. ವಿಚಿತ್ರ ಶಬ್ದದಲ್ಲಿ ಕೂಗಾಡುತ್ತಿರುತ್ತವೆ. ಬಹುಶಃ ಅವು ಮನುಷ್ಯರಂತೆ ಬೈಗುಳವನ್ನು ವಿನಿಮಯ ಮಾಡಿಕೊಳ್ಳುತ್ತಿರಬಹುದು ಎಂದೆನಿಸುತ್ತದೆ.

ಈ ಜಗಳ ತಾರಕಕ್ಕೇರಿದರೆ ಗಂಡು ಗುಬ್ಬಚ್ಚಿ ಮತ್ತೊಂದು ಗಂಡು ಗುಬ್ಬಚ್ಚಿಯೊಂದಿಗೆ ಏರಿಹೋಗಿ ಪರಸ್ಪರ ಕುಕ್ಕುತ್ತಾ ಹೊಡೆದಾಟಕ್ಕಿಳಿಯುತ್ತವೆ. ಆದರೆ ಹೆಣ್ಣುಗಳು ತಮ್ಮ ಜೊತೆಗಾರನಲ್ಲದ ಗಂಡು ಗುಬ್ಬಚ್ಚಿಯೊಡನಾಗಲಿ, ಗಂಡು ಗುಬ್ಬಚ್ಚಿ ತನ್ನ ಜೊತೆಗಾತಿಯಲ್ಲದ ಹೆಣ್ಣು ಗುಬ್ಬಚ್ಚಿಯೊಡನಾಗಲಿ ಇಂತಹ ಕುಕ್ಕುವ ಹೊಡೆದಾಟಕ್ಕೆ ಹೋಗುವುದಿಲ್ಲ, ಹೆಣ್ಣಿನೊಂದಿಗೆ ಹೆಣ್ಣು, ಗಂಡಿನೊಂದಿಗೆ ಗಂಡು ಪ್ರತ್ಯೇಕ ಗುಂಪುಗಳಾಗಿ ಹೊಡೆದಾಟ ನಡೆಸುತ್ತವೆ. ಗುಬ್ಬಚ್ಚಿಗಳ ಈ ವರ್ತನೆ 'ಪ್ರಾಣಿಗಳಂತೆ ವರ್ತಿಸುತ್ತಾರೆ' ಎಂಬ ಉದಾಹರಣೆ ಪಾತ್ರರಾಗುವ ಮನುಷ್ಯರಿಗೆ ಪಾಠವಾಗಬೇಕಾಗಿದೆ.

ಈ ಜಗಳ ಮತ್ತು ಹೊಡೆದಾಟದಲ್ಲಿ ಕೆಲವೊಮ್ಮೆ ಗಾಯಗಳೂ ಆಗುತ್ತವೆ. ಜಗಳ ಅಂತ್ಯಕಂಡ ನಂತರ ಗಾಯಾಳು ಜೊತೆಗಾತಿ ಅಥವಾ ಜೊತೆಗಾರನನ್ನು ಅವು ಸಂತೈಸುತ್ತ ಹೊರಡಿಸುವ ಪರಸ್ಪರ ಶಬ್ದಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕಠಿಣ ಮನುಷ್ಯನ ಮನಸ್ಸಿನಲ್ಲೂ ಅನುಕಂಪ ಸೃಷ್ಟಿಸುವ ಶಕ್ತಿ ಅವುಗಳ ಸ್ವರಕ್ಕಿದೆ ಎಂದೆನಿಸುತ್ತದೆ.

ಗೂಡುಕಟ್ಟಿ ಮೊಟ್ಟೆ ಇರಿಸಿದ ತಾಯಿ ರಾತ್ರಿಯ ಜೊತೆಗೆ ಹಗಲಿನಲ್ಲೂ ಹಸಿವಾದಾಗ ಒಂದಿಷ್ಟು ಹೊತ್ತು ಹೊರಬಂದು ಆಹಾರ ಅರಸಿ ಮತ್ತೆ ಗೂಡು ಸೇರಿ ಮೊಟ್ಟೆಗೆ ಕಾವು ನೀಡುತ್ತದೆ. ಕಾವು ಪಡೆದು ಪದರ ಹರಿದು ಮರಿಗಳು ಹೊರಬಂದೊಡನೆ, ಅಪ್ಪ-ಅಮ್ಮ ಗುಬ್ಬಚ್ಚಿಗಳು ತಮ್ಮ ಗೂಡಿನ ಸುತ್ತ ಗಿರಕಿ ಹೊಡೆಯುತ್ತಾ ಹಾರಾಡುತ್ತಾ ತೋರುವ ಸಂಭ್ರಮವನ್ನು ನೋಡಿದಾಗಲೆಲ್ಲಾ ನನ್ನ ಬಾಲ್ಯದ ದಿನಗಳು ನೆನಪಾಗುತ್ತಿದ್ದವು; ಅಪ್ಪ ಅಮ್ಮನ ಪ್ರೀತಿ ವಾತ್ಸಲ್ಯದ ಕ್ಷಣಗಳು ಬಿಚ್ಚಿಕೊಳ್ಳತೊಡಗುತ್ತಿದ್ದವು.

ಗುಬ್ಬಚ್ಚಿ ಮರಿಗಳು ಕೀಂ, ಕೀಂ ಶಬ್ದ ಹೊರಡಿಸಿದಾಗ ಅಪ್ಪ ಅಮ್ಮ ಗುಬ್ಬಚ್ಚಿಗಳು ಪರಸ್ಪರ ಪೈಪೋಟಿಗಿಳಿದು ಮರಿಗಳಿಗೆ ಆಹಾರ ಹೊತ್ತು ತಂದು ಉಣಬಡಿಸುತ್ತವೆ. ದಿನ ಕಳೆದಂತೆ ಮರಿಗಳು ನಿಲ್ಲುವ ಶಕ್ತಿಪಡೆದು ನೆಲಕ್ಕಿಳಿದು ಬಂದಾಗಲೂ ಅವುಗಳಿಗೆ ಆಹಾರ ತಿನ್ನಿಸುವ ಹೊಣೆಗಾರಿಕೆಯನ್ನು ತಂದೆತಾಯಿಗಳು ತೋರುತ್ತವೆ. ಆದರೆ ಕಾಲಕ್ರಮೇಣ ಮರಿಗಳ ರೆಕ್ಕೆ ಗಟ್ಟಿಗೊಂಡು ಅವು ಹಾರುತ್ತಾ ತಮಗೆ ತಾವೇ ಆಹಾರ ದಕ್ಕಿಸಿಕೊಳ್ಳುವ ಶಕ್ತಿ ಬಂದಿದೆ ಎಂಬುದು ಖಚಿತವಾದೊಡನೆ ಅವು ತವರು ತೊರೆದು ಸ್ವತಂತ್ರಗೊಳ್ಳುತ್ತವೆ.

ಈ ಪ್ರಕ್ರಿಯೆ ಪೂರ್ಣಗೊಂಡ ನಂತರವೂ ಜೊತೆಗಾರ ಗುಬ್ಬಚ್ಚಿಗಳು ಬೇರ್ಪಡದೆ ತಮ್ಮ ಸಂಸಾರವನ್ನು ಮುಂದುವರೆಸುತ್ತವೆ. ಗಂಡು ಬೇರೊಂದು ಹೆಣ್ಣಿನೊಂದಿಗೆ ಅಥವಾ ಹೆಣ್ಣು ಬೇರೊಂದು ಗಂಡು ಗುಬ್ಬಚ್ಚಿಯ ಜೊತೆ ಹೋಗದೇ ಒಟ್ಟಾಗಿಯೇ ಉಳಿದು ಇಂದಿನ ಆಧುನಿಕ ನಾಗರಿಕತೆಯ ಮನುಷ್ಯ ಸಮಾಜಕ್ಕೆ ಸವಾಲೊಡ್ಡುತ್ತವೆ.

ಗುಬ್ಬಚ್ಚಿಗಳ ಜೀವನಶೈಲಿ ತಿಳಿಯಲು ಬಹಳಷ್ಟು ದಿನಗಳ ಕಾಲ ಅವುಗಳೊಂದಿಗೆ ಕಳೆದ ನನಗೆ ಜೋಡಿ ಗುಬ್ಬಚ್ಚಿಗಳಲ್ಲಿ ಗಂಡು ಅಥವಾ ಹೆಣ್ಣು ಆಕಸ್ಮಿಕ ಸಾವು ಕಂಡರೆ ಉಳಿದ ಗುಬ್ಬಚ್ಚಿ ತನ್ನ ಜೊತೆಗಾರ ಅಥವಾ ಜೊತೆಗಾತಿ ಸಾವನ್ನಪ್ಪಿದ ಸ್ಥಳದಲ್ಲೇ ತನ್ನ ಜೀವಮಾನದವರೆಗೆ ಪ್ರತಿದಿನ ಗಂಟೆಗಟ್ಟಲೆ ರೋದಿಸುತ್ತ ಕುಳಿತಿರುತ್ತದೆ ಎಂಬ ವಿಸ್ಮಯ ತಿಳಿದು ಪಕ್ಷಿಲೋಕದ ಸಂಬಂಧಗಳ ಬಗ್ಗೆ ಅಪಾರ ಗೌರವ ಮೂಡಿತು.

ಮಕ್ಕಳ ಕಲ್ಲಿನೇಟಿಗೆ, ಮನೆ ನಿರ್ಮಾಣದ ಕೆಲಸಗಾರನ ಪೆಟ್ಟಿಗೆ, ಮನೆಯೊಳಗೆ ಬಂದು ಬೆಕ್ಕಿಗೆ ಆಹಾರವಾಗುವುದೂ ಸೇರಿದಂತೆ ಇನ್ಯಾವುದೋ ಕಾರಣಕ್ಕೆ, ಜೋಡಿ ಗುಬ್ಬಿಯಲ್ಲಿ ಒಂದು ಸಾವನ್ನಪ್ಪಿದರೆ ಉಳಿದೊಂದು ಹಕ್ಕಿ ಪ್ರತಿದಿನ ಅದೇ ಪ್ರದೇಶದಲ್ಲಿ ಒಂದೆಡೆ ಕುಳಿತು ತನ್ನ ರೆಕ್ಕೆಯನ್ನು ಸ್ವಲ್ಪ ತೆರೆದಂತಾಗಿಸಿ ಕುಗ್ಗಿದ, ನಿಸ್ತೇಜ ಸ್ವರದಲ್ಲಿ ಕೂಗುತ್ತಾ ಗಂಟೆಗಟ್ಟಲೆ ಸಮಯ ಕಳೆಯುವುದನ್ನು ಕಂಡಿದ್ದೇನೆ. ಬಹುಶಃ ತನ್ನ ಜೀವಿತಾವಧಿ ವರೆಗೆ ಅದು ಹೀಗೆ ದುಃಖ ತೋರ್ಪಡಿಸು ತ್ತದೆ ಎಂದೆನ್ನಿಸುತ್ತದೆ.

ಚಿಕ್ಕಮಗಳೂರಿನಲ್ಲಿ ಈ ಹಿಂದೆ ನಾನಿದ್ದ ಬಾಡಿಗೆ ಮನೆಯಲ್ಲಿ ನಿತ್ಯ ಅಕ್ಕಿ, ನುಚ್ಚು ಹಾಕುತ್ತಿದ್ದುದರಿಂದ ನಾನು ಹೊರ ಬಂದ ತಕ್ಷಣ ಅಪಾರ ಸಂಖ್ಯೆಯ ಗುಬ್ಬಚ್ಚಿಗಳು ಮನೆ ಅಂಗಳಕ್ಕೆ ಬರಲಾರಂಭಿಸಿದ್ದವು. ಇದು ಅಕ್ಕಪಕ್ಕದ ಮನೆಯವರೆಗೆ ತಮಾಷೆಯ ವಿಷಯವಾಗಿತ್ತು. ಗುಬ್ಬಚ್ಚಿಗಳ ಹಿಂಡು ಹೆಚ್ಚಾಗುತ್ತಿದ್ದಂತೆ ನನ್ನ ಈರ್ವರು ಮಕ್ಕಳಿಗೂ ಗುಬ್ಬಚ್ಚಿಗಳು ಪ್ರಿಯವಾಗತೊಡಗಿ ಅಕ್ಕಿ ಹಾಕಿ ಗುಬ್ಬಿಗಳನ್ನು ಅವರೂ ಒಲಿಸಿಕೊಂಡಿದ್ದರು. ನಾನು ನನ್ನ ಮಕ್ಕಳು ಗುಬ್ಬಚ್ಚಿ ಪ್ರಿಯರಾದಂತೆ ನನ್ನ ಪತ್ನಿಯೂ ಅಕ್ಕಿ ಹಾಕುತ್ತಾ ಅವುಗಳೊಂದಿಗೆ ಪ್ರೀತಿ ಬೆಳೆಸಿಕೊಂಡಿದ್ದಳು.

ಆದರೆ ನಾಲ್ಕು ತಿಂಗಳ ಹಿಂದೆ ಬೇರೆ ಬಡಾವಣೆಯಲ್ಲಿ ಹೊಸ ಮನೆಯನ್ನು ಬಾಡಿಗೆ ಹಿಡಿದು ನಾವಿದ್ದ ಮನೆಯನ್ನು ಅನಿವಾರ್ಯವಾಗಿ ಬದಲಿಸಬೇಕಾಯಿತು. ಹೀಗಾಗಿ ಹಿಂದಿನ ಗುಬ್ಬಚ್ಚಿಗಳ ಹಿಂಡು ಮತ್ತು ನಮ್ಮ ಕುಟುಂಬ ಬೇರ್ಪಟ್ಟಿತು. ಆದರೆ ಹೊಸ ಮನೆಯ ಬಳಿಯೂ ಗುಬ್ಬಚ್ಚಿಗಳ ಅಸ್ತಿತ್ವ ಕಂಡು ನನ್ನ ಕುಟುಂಬ ಸಂತಸಗೊಂಡಿದೆ. ಮೊದಲ ದಿನದಿಂದಲೇ ಅವುಗಳ ಗಮನವನ್ನು ನಮ್ಮತ್ತ ಸೆಳೆಯಲು ಅಕ್ಕಿ, ನುಚ್ಚು ಹಾಕುತ್ತಾ ಅದನ್ನು ತಿನ್ನಲು ಗುಬ್ಬಿ ಬರುತ್ತವೆಯೇ ಎಂದು ಕಾಯುವಂತಾಗಿದೆ.

ಈ ನಡುವೆ ಒಂದು ದಿನ, ಪಕ್ಕದ ಮನೆಯ ಸೂರಿನಮೇಲೆ ಕುಳಿತ ಗಂಡು ಗುಬ್ಬಚ್ಚಿಯ ಕೂಗು ನನ್ನ ಗಮನ ಸೆಳೆಯಿತು. ಆ ಕೂಗಿನ ಧ್ವನಿಯಲ್ಲಿ ನೋವು ಇರುವುದು ಮನದಟ್ಟಾದ ಮೇಲೆ ಅದನ್ನು ನಿತ್ಯ ಗಮನಿಸಲಾರಂಭಿಸಿದೆ. ಕಳೆದ ನಾಲ್ಕು ತಿಂಗಳಿನಿಂದಲೂ ಪಕ್ಕದ ಮನೆಯ ಸೂರಿನ ಬೇರೆ ಬೇರೆ ಸ್ಥಳದಲ್ಲಿ ಕುಳಿತು ಬೆಳಗ್ಗೆ ಅಳರಾರಂಭಿಸುವ ಈ ಗಂಡು ಗುಬ್ಬಿ ಕೆಲಹೊತ್ತು ಎತ್ತಲೋ ಹಾರಿಹೋಗುತ್ತಿದೆ. ಬಹುತೇಕ ಆಹಾರ ಅರಸಲು ಇರಬಹುದು. ಆದರೆ ಕೆಲ ಸಮಯದ ನಂತರ ಹಿಂದಿರುಗುವ ಆ ಗುಬ್ಬಿ ಮತ್ತೆ ಹಿಂದಿನಂತೆ ನೋವಿನ ಸ್ವರದ ಅಳುವನ್ನು ಮುಂದುವರೆಸುತ್ತದೆ.

ಜೊತೆಗಾತಿಯನ್ನು ಕಳೆದುಕೊಂಡು ಈ ಗಂಡು ಗುಬ್ಬಚ್ಚಿ ಅಳುತ್ತಿದೆ ಎಂಬುದು ನನಗೆ ಮನದಟ್ಟಾಗಿದ್ದರೂ ಖಚಿತಪಡಿಸಿಕೊಳ್ಳಲು ಪಕ್ಕದ ಮನೆಯವರನ್ನು ವಿಚಾರಿಸಿದೆ. ನಾನು ಹೇಳಿದ್ದನ್ನು ಕೇಳಿ ಅವರಿಗೂ ಆಶ್ಚರ್ಯವಾಯಿತು.

"ಈ ಹಕ್ಕಿ ಮನೆಯ ಸೂರಿನ ಮೇಲೆ ನಿತ್ಯ ಕೂಗುತ್ತಿರುತ್ತದೆ. ಕೆಲವೊಮ್ಮೆ ಮನೆಯ ಒಳಗೂ ಬರುತ್ತದೆ. ಸುಮಾರು ಒಂದೂವರೆ ವರ್ಷದ ಹಿಂದೆ ಮನೆಯೊಳಗೆ ಬಂದ ಗುಬ್ಬಿಯೊಂದು ಹೊರಹೋಗುವ ಭರದಲ್ಲಿ ಕಿಟಕಿ ಗಾಜಿಗೆ ಬಡಿದು ಸತ್ತುಹೋಗಿತ್ತು. ಆದರೆ ಅದಕ್ಕಾಗಿ ಈ ಗುಬ್ಬಿ ಅಳುತ್ತಿದೆ ಎಂಬುದು ನಮಗೆ ಗೊತ್ತಾಗಲಿಲ್ಲ" ಎಂದು ತಿಳಿಸಿದ ಪಕ್ಕದ ಮನೆಯ ದಂಪತಿಗಳು ತಮ್ಮ ಮನೆ ಮೇಲೆ ಕುಳಿತು ಅಳುವ ಗುಬ್ಬಿಯತ್ತ ಒಮ್ಮೆ ದೃಷ್ಟಿಸಿ ಮೌನ ವಹಿಸಿದರು.

ಈ ಗಂಡು ಗುಬ್ಬಿ ತನ್ನ ಜೊತೆಗಾತಿಗಾಗಿ ಇಂದೂ ಅಳುತ್ತಿದೆ. ಬೆಳಗ್ಗೆಯಿಂದಲೇ ಆರಂಭವಾಗುವ ಅಳುವಿನ ಸ್ವರದ ಅದರ ಕೂಗು ಗಂಡು-ಹೆಣ್ಣಿನ ಸಂಬಂಧ ಕುರಿತು ಎರಡೂವರೆ ದಶಕಗಳ ಹಿಂದೆ ನಾನು ಬರೆದ ಕವನದಲ್ಲಿನ "ಗರ್ಭ ಭೇದಿಸಿದ ಶಿಶುವಿನ ನಾಬಿಯಾಗಬೇಕು" ಎಂಬ ಸಾಲನ್ನು ನೆನಪಿಸುತ್ತದೆ.


ಒಂದು ಮೌಲ್ಯಯುತ ಅಪರೂಪದ ಅಧ್ಯಯನ

ಡಾ. ರಂಗನಾಥ ಕಂಟನಕುಂಟೆಯವರ 'ಜನ ಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ' ಎಂಬ ಪಿಹೆಚ್.ಡಿ ಪ್ರಬಂಧವನ್ನು ಪುಸ್ತಕ ರೂಪದಲ್ಲಿ ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಇವರು ಹೊರತಂದಿದ್ದಾರೆ.

ಕನ್ನಡದಲ್ಲಿ ನಡೆದಿರುವ ಅಪರೂಪದ ಅಧ್ಯಯನವೆಂದೇ ಇದನ್ನು ಪರಿಗಣಿಸಬೇಕು. ಭಾಷಾ ಬೆಳವಣಿಗೆ, ಭಾಷಾ ಮೇಲಾಧಿಪತ್ಯ, ಭಾಷಾ ಹೇರಿಕೆ, ಭಾಷಾ ಸಂಘರ್ಷ, ಭಾಷಾ ಧುರಭಿಮಾನಗಳ ಹಿನ್ನೆಲೆಗಳನ್ನು ಸಮಾಜೋ ಆರ್ಥಿಕ ಹಾಗೂ ರಾಜಕೀಯಗಳ ಬೆಳವಣಿಗೆಗಳ ದೃಷ್ಟಿಕೋನದಲ್ಲಿ ನೋಡಿ ವಿಶ್ಲೇಷಣೆ ಮಾಡಲಾಗಿದೆ. ಇದು ಸರಿಯಾದ ವೈಜ್ಞಾನಿಕ ವಿಧಾನ. ಕನ್ನಡದಲ್ಲಿ ಈ ವಿಧಾನ ಅಳವಡಿಸಿ ನಡೆಸಿದ ಅದ್ಯಯನಗಳು ಬಹಳ ಅಪರೂಪವೆನ್ನಬಹುದು.

ಪ್ರಸ್ತಾವನೆಯಲ್ಲಿ ಹೇಳಿಕೊಂಡಿರುವಂತೆ ಈ ಅದ್ಯಯನ ಭಾಷೆಯನ್ನು ಸಮಾಜ, ಪ್ರಭುತ್ವ, ಮಾರುಕಟ್ಟೆ, ಹಣಕಾಸು ವ್ಯವಹಾರ, ರಾಜಕೀಯಗಳ ನೆಲೆಗಟ್ಟುಗಳಲ್ಲಿ ವಿಶ್ಲೇಷಿಸಲಾಗಿದೆ. ಸಮಾಜದ ಅಂದರೆ ಜನಸಾಮಾನ್ಯರ ಬದುಕಿನೊಂದಿಗೆ ಅನುಸಂಧಾನ ಮಾಡಲಾಗಿದೆ. ಅಂದರೆ ಭಾಷೆ ಸಮಾಜದಲ್ಲಿನ ಎಲ್ಲಾ ಆಗುಹೋಗುಗಳಿಂದ ಪ್ರತ್ಯೇಕವಾಗಿ ಇರುವುದಿಲ್ಲ, ಅದು ಅವೆಲ್ಲದರೊಂದಿಗೆ ನೇರ ಸಂಬಂಧ ಹೊಂದಿದೆ. ಸಮಾಜದ ಸಂಪತ್ತಿನ ಮೇಲೆ ಹಿಡಿತ ಸಾಧಿಸಿರುವವರು ಭಾಷೆಯನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಸಮಾಜವನ್ನು ಇಲ್ಲವೇ ಒಂದು ಸಮುದಾಯವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಭಾಷೆಯನ್ನು ಬಳಸಲಾಗುತ್ತದೆ. ಖಾಸಗಿ ಆಸ್ತಿ ಪ್ರಭುತ್ವಗಳ ಉಗಮವಾದ ಕಾಲಘಟ್ಟದಿಂದಲೂ ಆರಂಭವಾಗಿ ರಾಜಪ್ರಭುತ್ವಗಳಿಂದ ಹಿಡಿದು ವಸಾಹತು ಮತ್ತು ವಸಾಹತೋತ್ತರ ವ್ಯವಸ್ಥೆಗಳಲ್ಲೂ ನಾವಿದನ್ನು ಕಾಣಬಹುದಾಗಿದೆ. ಇಂದು ಸಾಮ್ರಾಜ್ಯಶಾಹಿ ಯುಗದಲ್ಲಿ ಜಾಗತೀಕರಣದ ಮಾರುಕಟ್ಟೆಯ ಹಿತಾಸಕ್ತಿಗಳಲ್ಲಿ ಭಾಷಾ ರಾಜಕಾರಣ ಮುನ್ನಡೆದಿದೆ. ಸಾಮ್ರಾಜ್ಯಶಾಹಿ ಶಕ್ತಿಗಳ ಹಾಗೂ ದೇಶದ ಆಳುವ ವರ್ಗಗಳ ಆರ್ಥಿಕ ಹಾಗೂ ರಾಜಕೀಯ ಹಿತಾಸಕ್ತಿಗಳಿಗೆ ಆಗತ್ಯವಾಗಿರುವುದರಿಂದ ಹೇರಿಕೆ ಮಾಡಲಾಗುತ್ತದೆ. ಬದಲಿಗೆ ಅದು ಸಹಜವಾದುದೂ ಅಲ್ಲ, ಬಹುಸಂಖ್ಯಾತರಿಗೆ ಅದು ನಿಜವಾದ ಅನಿವಾರ್ಯತೆಯೂ ಅಲ್ಲ, ಭ್ರಮಾತ್ಮಕವಾದ, ಕೃತಕವಾದ ಅದು ಪರಿಸ್ಥಿತಿಯ ನಿರ್ಮಾಣ. ಅಂದರೆ ಅಂತಹದು ಪರಿಸ್ಥಿತಿಯ ಬಲಾತ್ಕಾರದ ಹೇರಿಕೆ. ಅಭಿವೃದ್ಧಿ ಎಂದರೆ ಅದು ಒಂದು ದೇಶದ ಬಹುಸಂಖ್ಯಾತ ಜನರ ಬದುಕು, ಆರ್ಥಿಕತೆ, ಭಾಷೆ, ಶಿಕ್ಷಣ, ಸಂಸ್ಕೃತಿ ಹೀಗೆ ಒಟ್ಟು ಮೊತ್ತದಲ್ಲಿನ ಅಭಿವೃದ್ಧಿಯಾಗಬೇಕು. ಆ ದಿಕ್ಕಿನಲ್ಲಿ ಅದು ಮುನ್ನಡೆಯುವಂತಿರಬೇಕು. ಆಗ ಮಾತ್ರ ಅಭಿವೃದ್ಧಿ ಎಂಬುದು ಸಾಧ್ಯ.

ಇಂಗ್ಲಿಷ್‌ಅನ್ನು ಪ್ರಧಾನವಾಗಿ ಬಳಸದ, ತಮ್ಮದೇ ಭಾಷೆಗಳನ್ನು ಪ್ರಧಾನವಾಗಿ ಬಳಸಿಕೊಂಡ ಜಪಾನು, ಜರ್ಮನಿ, ಫ್ರಾನ್ಸ್... ಮೊದಲಾದ ದೇಶಗಳು ಬಂಡವಾಳಶಾಹಿ ದೇಶಗಳಾಗಿ ಅಭಿವೃದ್ಧಿಯಾದ ಉದಾಹರಣೆಗಳೂ ಇಂದು ಕುಸಿತಕ್ಕೊಳಗಾಗಿರುವ ಉದಾಹರಣೆಗಳೂ ನಮ್ಮ ಮುಂದಿವೆ. ರಷ್ಯ, ಚೀನ ದೇಶಗಳು ಇಂಗ್ಲಿಷ್‌ಅನ್ನು ಬಳಸದೇ ಬಾಹ್ಯ ಬೆಂಬಲವೂ ಇಲ್ಲದೇ ದೇಶೀಯ ಭಾಷೆಗಳ ಅಭಿವೃದ್ಧಿ ಸೇರಿದಂತೆ ಸರ್ವತೋಮುಖ ಎನ್ನಬಹುದಾದ ಸಮಾಜವಾದಿ ಅಭಿವೃದ್ಧಿಯಲ್ಲಿ ಸಾಗಿತ್ತು. ಆ ಸಮಾಜದ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲು ಎನ್ನಬಹುದಾದ ಸಾಧನೆ ಮಾಡಿ ನಂತರ ಬಂಡವಾಳಶಾಹಿ ದೇಶಗಳಿಗೆ ತಲೆಗುಪ್ಪುವಲ್ಲಿ ವಿಫಲವಾಗಿ ಈಗ ಕುಸಿತ ಕಂಡಿರುವುದನ್ನೂ, ನಾವು ನೋಡಬಹುದಾಗಿದೆ.



ಜನ ಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ
(ಪಿಎಚ್‌ಡಿ ಪ್ರಬಂಧ)
ಪುಟ: 367, ಬೆಲೆ : ರೂ. 150/-
ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕಪ್ಪಾಪುರದೊಡ್ಡಿ

ಈಗ ಈ ಎಲ್ಲಾ ದೇಶಗಳಲ್ಲಿ ಜಾಗತಿಕ ಮಾರುಕಟ್ಟೆಯ (ಮುಖ್ಯವಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ) ಪಾಲುದಾರಿಕೆ ಇಲ್ಲವೆ ಏಕಸ್ವಾಮ್ಯಕ್ಕಾಗಿ ಇಂಗ್ಲಿಷ್ ಭಾಷೆಯ ಕಲಿಕೆ ಹಾಗೂ ಬಳಕೆ ಹೆಚ್ಚಾಗುತ್ತಿರುವುದನ್ನು ಗಮನಿಸಬೇಕು. ಇದರಲ್ಲಿ ಹೇರಿಕೆ ಕೂಡ ಇದೆ. ಇದು ವಿಶ್ವ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟಿನ ಭಾಗ ಮತ್ತು ಪರಿಣಾಮ ಕೂಡ ಹೌದು.

ಈ ನಿಟ್ಟಿನಲ್ಲಿ ನೋಡಿದಾಗ ರಂಗನಾಥ ಕಂಟನಕುಂಟೆ ಕನ್ನಡದ ಸಂದರ್ಭದಲ್ಲಿ ಸಾಕಷ್ಟು ಆಳವಾಗಿ ಹಾಗೂ ವಿಸ್ತಾರವಾಗಿ ಭಾಷಾ ರಾಜಕಾರಣ, ಕಲಿಕೆಯಲ್ಲಿನ ಗಂಭೀರ ತೊಡಕುಗಳು, ಪ್ರಭುತ್ವ ಭಾಷೆಗಳೊಂದಿಗಿನ ಸಂಘರ್ಷವನ್ನು, ಭಾಷಾ ಹೇರಿಕೆ ಇಲ್ಲವೇ ದಮನಕ್ಕೂ ಮಾರುಕಟ್ಟೆ ಹಿತಾಸಕ್ತಿಗಳಿಗೂ ಇರುವ ಸಂಬಂಧವನ್ನು ವಿಶ್ಲೇಷಿಸಿದ್ದಾರೆ. ಸಾಮಾಜಿಕ ಅಸ್ಮಿತೆ, ಸಾಮಾಜಿಕ ಅಸಮಾನತೆ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಗಡಿ ಸಮಸ್ಯೆ, ಸ್ವಾಭಿಮಾನ, ದುರಭಿಮಾನ, ಕೋಮುವಾದ, ಸಂಸ್ಕೃತಿ, ಆಧಿಪತ್ಯ, ಜನಸಮುದಾಯದ ಮಾನಸಿಕ ನಿಯಂತ್ರಣ, ಮೇಲಾಳ್ವಿಕೆಗಳನ್ನು ಭಾಷಾ ಸಂಬಂಧದೊಂದಿಗೆ ಗಂಭೀರವಾಗಿ ನೋಡಿದ್ದಾರೆ. ಅವರು ಅಧ್ಯಯನವನ್ನು ಆವಾಹಿಸಿಕೊಂಡಂತೆ ಕೆಲಸ ಮಾಡಿದ್ದಾರೆ ಎನಿಸುತ್ತದೆ. ಸಮಸ್ಯೆಯ ಗುರುತು ಮಾಡುವಿಕೆ ಮತ್ತು ಕಾರಣಗಳ ವಿಶ್ಲೇಷಣೆಯ ವಿಚಾರದಲ್ಲಿ ಒಂದು ಉತ್ತಮವಾದ ವಸ್ತುನಿಷ್ಠ ಅಧ್ಯಯನ ಇದಾಗಿದೆ. ಸಾಕಷ್ಟು ಸರಳವಾಗಿ, ಶಿಸ್ತುಬದ್ಧವಾಗಿ ಇಂತಹ ಸಂಕೀರ್ಣ ಹಾಗೂ ಗಂಭೀರವಾದ ವಿಚಾರವನ್ನು ಓದಿಸಿಕೊಂಡು ಹೋಗುವಂತೆ ಮಂಡಿಸಿದ್ದಾರೆ. ಸಾಮೂಹಿಕ ಗ್ರಹಿಕೆ ಹಾಗೂ ಸಾಮಾಜಿಕ ಚಳವಳಿಯ ಹಿನ್ನೆಲೆ ಇಲ್ಲದವರಿಗೆ ಈ ಮಟ್ಟದ ಗಂಭೀರತೆ ಹಾಗೂ ಸ್ಪಷ್ಟತೆಯಿಂದ ಮಂಡಿಸಲು ಸಾಮಾನ್ಯವಾಗಿ ಸಾಧ್ಯವಾಗುವುದಿಲ್ಲ. ಭಾಷಾರಾಜಕಾರಣ, ಸಂಘರ್ಷಗಳ ಸಮಸ್ಯೆ ಹಾಗೂ ಕಾರಣಗಳನ್ನು ಬಹಳ ಚೆನ್ನಾಗೇ ವಿಶ್ಲೇಷಣೆ ಮಾಡುವ ಕಂಟನ್‌ಕುಂಟೆ ಅವರು ಪರಿಹಾರದ ಬಗ್ಗೆ ಆ ಗಂಭೀರತೆ ತೋರುವುದಿಲ್ಲ, ಅವರ ಅಧ್ಯಯನ ಆ ಬಗ್ಗೆ ತಲೆ ಕೆಡಿಸಿಕೊಂಡಂತೆ ಕಾಣುವುದಿಲ್ಲ, ಅದು ಕೇವಲ ಅಮೂರ್ತ ಆಶಯಗಳ ಮಟ್ಟದಲ್ಲಿ ಅಲ್ಲಲ್ಲಿ ಕಾಣುತ್ತದೆ. ಕೊನೆಯಲ್ಲಿ ಆಳುವ ವರ್ಗಗಳ ಮತ್ತು ಪ್ರಭುತ್ವದಲ್ಲಿನ ಸಮಸ್ಯೆಗಳನ್ನು ಮೊದಲು ಪರಿಹರಿಸ ಬೇಕೆನ್ನಿಸುತ್ತದೆ ಎಂದು ಒಂದು ವಾಕ್ಯದ ಅನಿಸಿಕೆಯ ಮಟ್ಟಕ್ಕೆ ಪರಿಹಾರವನ್ನು ಇಳಿಸಿಬಿಟ್ಟು ಕೊನೆಗೊಳಿಸುತ್ತಾರೆ.

ಪುಸ್ತಕ ವಿಮರ್ಶೆ

ಗತಿತರ್ಕ ಎಂಬ ಪದವನ್ನು ಅನಗತ್ಯವಾಗಿ ಹಲವಾರು ಕಡೆ ಬಳಸಿದ್ದಾರೆ. ಅದು ಆ ಸಂದರ್ಭಕ್ಕೆ ತಕ್ಕಂತೆ ಎಲ್ಲಾ ಓದುಗರಿಗೂ ಅರ್ಥವಾಗುವುದಿಲ್ಲ, ಅದರ ವಿವರಣೆ ಕೂಡ ಕಾಣುವುದಿಲ್ಲ, ಅದೇ ವೇಳೆಯಲ್ಲಿ ಪರಿಹಾರಗಳ ವಿಚಾರದಲ್ಲಿ ಅವರೇ ಗತಿತಾರ್ಕಿಕವಾಗಿ ಅಧ್ಯಯನ ಮಾಡಿ ಮಂಡಿಸುವ ಗೋಜಿಗೆ ಹೋಗಿಲ್ಲ ಯಾಕೆ ಎಂಬ ಪ್ರಶ್ನೆ ಈ ಗ್ರಂಥ ಓದಿದಾಗ ಬರುತ್ತದೆ. ವಿಶ್ವದಲ್ಲಿ ಇಂತಹ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯೋಗಗಳು, ಪ್ರಯತ್ನಗಳು ನಡೆದಿವೆ. ಅವರು ಅಧ್ಯಯನಕ್ಕೆ ಮಾರ್ಕ್ಸ್‌ವಾದಿ ದೃಷ್ಟಿಕೋನ ಅಳವಡಿಸಿಕೊಂಡಿದ್ದರೂ ಮಾರ್ಕ್ಸ್‌ವಾದಿ ಗ್ರಹಿಕೆಯ ಬಲು ಮುಖ್ಯ ವಿಚಾರವಾಗಿರುವ ಪರಿಹಾರದ ಭಾಗವಾಗುವ ದಿಕ್ಕು ಕಾಣುವುದಿಲ್ಲ, ಅವರು ಕೊನೆಯಲ್ಲಿ ಪೂರಕವಾಗಿರುವ ಹಲವು ಅಧ್ಯಯನಗಳ ಅಗತ್ಯದ ಬಗ್ಗೆ ಪ್ರಸ್ತಾಪಿಸುತ್ತಾರೆ. ಆದರೆ ಅಲ್ಲಿಯೂ ಕೂಡ ಪರಿಹಾರದ ಬಗೆಗಿನ ಅಧ್ಯಯನ ಪ್ರಸ್ತಾಪ ಮಾಡುವುದಿಲ್ಲ, ಒಟ್ಟಿನಲ್ಲಿ ರಂಗನಾಥ್ ಕಂಟನಕುಂಟೆಯವರು ಬಹಳ ಶ್ರಮ ಹಾಕಿ ಕಾಳಜಿ ಹಾಗೂ ಶ್ರದ್ಧೆಗಳಿಂದ ಈ ಅಧ್ಯಯನವನ್ನು ಮಾಡಿ ಜನರ ಮುಂದೆ ಇಟ್ಟಿದ್ದಾರೆ.

● ಭರತ್ ರಾಜ್

▶▶ 2 ಜನಗಣತಿಯೋ...

ಇರಿಸಲಲ್ಲ, ಆದರೆ NPR ಗಾಗಿ ಸಂಗ್ರಹಿಸುತ್ತಿರುವ ಮಾಹಿತಿಯನ್ನು 1955ರ ಭಾರತೀಯ ನಾಗರಿಕ ಕಾಯಿದೆ ನಾಗರಿಕ ನೋಂದಣಿ ಮತ್ತು ಗುರುತು ಪತ್ರ ಕಾನೂನು-2003ರ ಅನ್ವಯ ಸಂಗ್ರಹಿಸಲಾಗುತ್ತಿದೆ. ಈ NPR ಎಂಬ ಪರಿಕಲ್ಪನೆ ಬಂದದ್ದು ಕಾರ್ಗಿಲ್ ಯುದ್ಧದ ನಂತರದಲ್ಲಿ ವಾಜಪೇಯಿ ಸರ್ಕಾರದಲ್ಲಿ ಬೇಹುಗಾರಿಕಾ ಮುಖ್ಯಸ್ಥನಾಗಿದ್ದ ಕೆ. ಸುಬ್ರಹ್ಮಣಿಯಮ್‌ರವರಿಂದ. ನಂತರ 2003ರಲ್ಲಿ ಅದ್ವಾನಿ ನೇತೃತ್ವದ ಗೃಹ ಇಲಾಖೆ ವಿಶೇಷವಾಗಿ ಕರಾವಳಿಯಲ್ಲಿ ಬೇಹುಗಾರಿಕೆಯನ್ನು ಗಟ್ಟಿಪಡಿಸಲು ನಿರ್ದಿಷ್ಟ ನಿಯಮಾವಳಿಯನ್ನು ರೂಪಿಸಿತ್ತು. 2006ರಲ್ಲಿ ಯುಪಿಎ ಸರ್ಕಾರ ಇದೇ ಹಿನ್ನೆಲೆಯಲ್ಲಿ ನಾಗರಿಕರಿಗೆ ಕಡ್ಡಾಯವಾಗಿ ಗುರುತುಪತ್ರ ನೀಡುವ ಪ್ರಕ್ರಿಯೆಯನ್ನು ನಿಧಾನವಾಗಿ ಪ್ರಾರಂಭಿಸಿತು. ಆದರೆ 26/11ರ ದಾಳಿಯ ನಂತರ ತ್ವರಿತವಾಗಿ ಯುನೀಕ್ ಕಾರ್ಡು ಮತ್ತು NPR ಯೋಜನೆಗಳು ಜಾರಿಯಾಗಲು ಪ್ರಾರಂಭಿಸಿದವು.

ಹೀಗೆ ಒಂದು ಭಯೋತ್ಪಾದನಾ ದಾಳಿಯ ಹಿನ್ನೆಲೆಯಲ್ಲಿ ಭಯೋತ್ಪಾದಕರನ್ನು ತಡೆಗಟ್ಟುವ ಉದ್ದೇಶಕ್ಕೆಂದು ರಚಿತವಾಗಬೇಕಾದ ಕ್ರಮಗಳ ಭಾಗವಾಗಿ ರೂಪುಗೊಂಡ ಈ ಐಡೆಂಟಿಟಿ ಕಾರ್ಡು ಮತ್ತು ಪಾಪ್ಯುಲೇಷನ್ ರಿಜಿಸ್ಟರ್ ಹಾಗೂ ಇಂಟೆಲಿಜೆನ್ಸ್ ಗ್ರಿಡ್‌ಗಳು ದೇಶದ ಎಲ್ಲಾ ಜನರನ್ನು ಸಂಭವನೀಯ ಭಯೋತ್ಪಾದಕರೆಂದೇ ಪರಿಗಣಿಸಿ ದೇಶದ ಇಡೀ ಜನತೆಯ ಮೇಲೂ ಬೇಹುಗಾರಿಕೆ ಮಾಡಲು ಹೊರಟಿದೆ.

ಆದರೆ ಇದರಿಂದ ಭಯೋತ್ಪಾದನೆಯನ್ನು, ಭಯೋತ್ಪಾದಕರನ್ನು ತಡೆಗಟ್ಟಲು ಸಾಧ್ಯವೇ?

ಕೆಲವು ಅಂತರರಾಷ್ಟ್ರೀಯ ಉದಾಹರಣೆಗಳನ್ನು ನೋಡಿದರೆ ಈ ಇಡೀ ಯೋಜನೆ ಎಷ್ಟು ಹಾಸ್ಯಾಸ್ಪದ ಮತ್ತು ಭಯಂಕರವಾಗಿದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಈ ಬಗೆಯ ಬಯೋಮೆಟ್ರಿಕ್ ಗುರುತಿನ ಚೀಟಿ ಈಗಾಗಲೇ ಯುರೋಪಿನ ಕೆಲವು ದೇಶಗಳಲ್ಲಿ ಚಾಲ್ತಿಯಲ್ಲಿದೆ. ಇಷ್ಟಾದರೂ ಓಕ್ಲಹಾಮಾದಲ್ಲಿ ಭಯೋತ್ಪಾದನಾ ದಾಳಿಯನ್ನು ತಡೆಯಲಾಗಲಿಲ್ಲ, ಅದನ್ನು ಮಾಡಿದ ಭಯೋತ್ಪಾದಕ ತಿಮೋತಿಯ ಬಳಿ ಈ ಬಗೆಯ ಹಲವು ಬಯೋಮೆಟ್ರಿಕ್ ಕಾರ್ಡುಗಳು ಇದ್ದವಂತೆ. ಈ ಬಗೆಯ ನಕಲಿ ಬಯೋಮೆಟ್ರಿಕ್ ಕಾರ್ಡು ತಯಾರಿಸುವ ದಂಧೆಯಲ್ಲಿ ತೊಡಗಿದ್ದ ಒಂದು ದೊಡ್ಡ ರಾಕೆಟ್ಟನ್ನು ಥೈಲಾಂಡಿನಲ್ಲಿ 2006ರಲ್ಲಿ ಸರ್ಕಾರ ಬಯಲುಗೊಳಿಸಿತ್ತು. ಅಮೆರಿಕದಲ್ಲಿ 2001 ಸೆಪ್ಟೆಂಬರ್ 11 ರ ದಾಳಿ ಮಾಡಿದವರು ಎಲ್ಲಾ ಗುರುತು ಪತ್ರಗಳನ್ನು ಆರಾಮಾಗಿ ನಿಭಾಯಿಸಿ ವಿಮಾನಗಳನ್ನೇ ಅಪಹರಿಸಿ WTC ಯನ್ನು ಉರುಳಿಸಿದರು! ಹೀಗಾಗಿಯೇ ಯುರೋಪಿನ ಬಹುಪಾಲು ದೇಶಗಳು ಈ ಗುರುತು ಕಾರ್ಡು ಯೋಜನೆಯನ್ನೇ ಕೈಬಿಟ್ಟಿವೆ. ಇಂಥಾ ಕಾರ್ಡ್ ಪದ್ಧತಿ ಮತ್ತು ಅದನ್ನು ಆಧರಿಸಿ ಜನರ ಖಾಸಗಿ ಬದುಕಿನ ಎಲ್ಲಾ ಮಾಹಿತಿಯನ್ನು ಒಂದು ನ್ಯಾಷನಲ್ ರಿಜಿಸ್ಟ್ರಿಯಲ್ಲಿ ದಾಖಲಿಸುವ ಇಂಗ್ಲೆಂಡ್ ಸರ್ಕಾರದ ಯೋಜನೆಯ ವಿರುದ್ಧ ಇಂಗ್ಲೆಂಡಿನ ಜನತೆ ಬೃಹತ್ ಹೋರಾಟವನ್ನು ನಡೆಸುತ್ತಿದ್ದಾರೆ.

ಅಲ್ಲದೆ ಈ ಯೋಜನೆ ಹೇಗೆ ನಿರಪರಾಧಿಗಳಿಗೂ ವಿನಾಕಾರಣ ಶಿಕ್ಷೆ ವಿಧಿಸಿದೆ ಎಂಬುದಕ್ಕೂ ಸಾವಿರಾರು ಉದಾಹರಣೆಗಳಿವೆ. ಸ್ಪೇನ್ ದೇಶದ ಮ್ಯಾಡ್ರಿಡ್‌ನಲ್ಲಿ 2004ರಲ್ಲಿ ಒಂದು ಬೃಹತ್ ಬಾಂಬ್ ದಾಳಿ ನಡೆಯಿತು. ಅಲ್ಲಿ ಸಿಕ್ಕ ಬಯೋಮೆಟ್ರಿಕ್ ಕಾರ್ಡಿನ ಮಾಹಿತಿಗಳನ್ನು ಆಧರಿಸಿ ಸ್ಪೇನ್ ದೇಶದ ಪೊಲೀಸರು ಒಬ್ಬ ವ್ಯಕ್ತಿಯನ್ನು ತಲಾಶ್ ಮಾಡಲು ಪ್ರಾರಂಭಿಸಿದರು. ಆದರೆ ಆ ವ್ಯಕ್ತಿ ಮತ್ತ್ಯಾವುದೋ ಕೇಸಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ಅಮೆರಿಕನ್ ಜೈಲಿನಲ್ಲಿದ್ದ. ಇದು ಬಯೋಮೆಟ್ರಿಕ್ ಮಾಹಿತಿಗಳ ವಿಶ್ವಾಸಾರ್ಹತೆ. ಅದೇರೀತಿ ಅಮೆರಿಕದಲ್ಲಿ ಕೇವಲ ಬೆರಳಚ್ಚು ಗುರುತನ್ನು ಆಧರಿಸಿ ಭಯೋತ್ಪಾದಕನೆಂದು ಬಂಧಿಸಿದ ನೂರಾರು ಜನರು ಅಮಾಯಕರೆಂದು ಅಮೆರಿಕದ ಕೋರ್ಟುಗಳೆ ಬಿಡುಗಡೆ ಮಾಡಿವೆ. ಹೀಗಾಗಿ ಅಮೆರಿಕ, ಬ್ರಿಟನ್ ಹಾಗೂ ಬಹುಪಾಲು ಐರೋಪ್ಯ ಒಕ್ಕೂಟದ ದೇಶಗಳು ಮತ್ತು ಆಸ್ಟ್ರೇಲಿಯಾಗಳಲ್ಲಿ ಈ ಬಗೆಯ ಬಯೋಮೆಟ್ರಿಕ್ ಮಾಹಿತಿಗಳೂ ತಾಂತ್ರಿಕವಾಗಿ ವಿಶ್ವಾಸಾರ್ಹವಾದುದಲ್ಲ ಮತ್ತು ಅದರ ಬಗ್ಗೆ ಜನರಲ್ಲಿಯೂ ಸಕಾರಣವಾದ ಸಂದೇಹಗಳಿವೆ ಎಂಬ ಕಾರಣಗಳಿಂದಾಗಿ ಬಯೋಮೆಟ್ರಿಕ್ ಐಡೆಂಟಿಟಿ ಕಾರ್ಡ್ ಪದ್ಧತಿಯನ್ನೇ ಕೈಬಿಡಲಾಗಿದೆ.

ಆದರೂ ಭಾರತದಲ್ಲಿ ಹಠ ಹಿಡಿದು ಈ ಯೋಜನೆ ಜಾರಿಗೆ ತರುತ್ತಿರುವುದರಲ್ಲಿ ಇನ್ನೂ ಒಂದು ಹುನ್ನಾರವಿದೆ. ಈಗಾಗಲೇ ನೋಡಿದಂತೆ ಈ NPR ಮತ್ತು NATGRID ಗಳಲ್ಲಿ ಈ ದೇಶದ ನಾಗರಿಕರ ನಿತ್ಯಜೀವನದ ಎಲ್ಲಾ ವಿವರಗಳಿರುತ್ತವೆ. ಎಲ್ಲಾ ಬ್ಯಾಂಕು, ವಿಮೆ, ಟೆಲಿಕಾಂ, ವಾಹನ ಮಾರಾಟ, ಪ್ರವಾಸಗಳ ವಿವರವೂ ಅದರಲ್ಲಿ ದಾಖಲಾಗಿರುತ್ತದೆ. ಇದು ಈ ದೇಶದ ಜನರ ಗ್ರಾಹಕ ಪ್ರವೃತ್ತಿಯ ಬಗೆಗೆ ಉದ್ಯಮಿಗಳಿಗೆ ಬೇಕಾದ ಅಪೂರ್ವ ಮಾಹಿತಿಗಳನ್ನು ಒದಗಿಸುತ್ತದೆ. ಅದಕ್ಕಾಗಿಯೇ ಭಾರತ ಸರ್ಕಾರ 2005ರಲ್ಲಿ Credit Information Companies (Regulation) Act 2005 ಕಾಯಿದೆಯನ್ನು ಜಾರಿಗೆ ತಂದಿದೆ. ಇಂಥಾ ಸಾಲ ಮಾಹಿತಿ ಕಂಪನಿಗಳು ಸಾಲಗಾರರ ಬಗ್ಗೆ ಮತ್ತು ಸಾಲಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಈ ಸಾಲ ನೀಡುವ ದಂಧೆಯಲ್ಲಿ ತೊಡಗಿರುವವರಿಗೆ ಕೊಡುತ್ತವೆ. ಅಂಥಾ ಮಾಹಿತಿಗಳನ್ನು ಸಂಗ್ರಹಿಸಲು ಅವರು ಯುನಿಕ್ ಐಡೆಂಟಿಟಿ ಕಾರ್ಡಿನಲ್ಲಿ ಒದಗಿಸಿರುವ ಸಂಖ್ಯೆಯನ್ನು ಬಳಸಿಕೊಳ್ಳುತ್ತವೆ. ಒಂದು ಕ್ಲಿಕ್ ಮಾಡಿದರೆ ಸಾಕು, ಈ ಸಂಖ್ಯಾದಾರನಾದ ನಾಗರಿಕನ ಖರೀದಿ ಸಾಮರ್ಥ್ಯ, ಬ್ಯಾಂಕ್ ವಹಿವಾಟು, ವಿಮೆ ವಿವರ ಬಳಸುವ ಕಾರು ಇತ್ಯಾದಿಗಳೆಲ್ಲಾ ಹೊರಬೀಳುತ್ತದೆ. ಇದನ್ನೇ ಮಾರುಕಟ್ಟೆ ಭಾಷೆಯಲ್ಲಿ "ಮಾರುಕಟ್ಟೆ ಇಂಟೆಲಿಜೆನ್ಸ್" ಎಂದು ಕರೆಯುತ್ತಾರೆ. ಪ್ರತಿಯೊಂದು ಉದ್ಯಮವೂ ತನ್ನ ಗ್ರಾಹಕರ ಆಗತ್ಯಗಳೇನು ಎಂದು ಅರಿತುಕೊಳ್ಳುವುದೇ "ಮಾರುಕಟ್ಟೆ ಇಂಟೆಲಿಜೆನ್ಸ್". ಇದು ವಿವಿಧ ಬಗೆಯ ಸೇವೆ ಮತ್ತು ಸರಕುಗಳನ್ನು ಪೂರೈಸುವ ಉದ್ಯಮಗಳಿಗೆ ತನ್ನ ಗ್ರಾಹಕರ ಬದಲಾಗುತ್ತಿರುವ ಅಗತ್ಯಗಳ ಬಗ್ಗೆ ಮಾಹಿತಿ ಒದಗಿಸಿ ಇದಕ್ಕಾಗಿ ಅವು ವೆಚ್ಚ ಮಾಡಬೇಕಾದ ಹಣವನ್ನು ಉಳಿತಾಯ ಮಾಡುತ್ತದೆ. 11 ನೇ ಪಂಚವಾರ್ಷಿಕ ಯೋಜನೆಯ ವರದಿಯಲ್ಲಿ ಈ ಯೂನಿಕ್ ಕಾರ್ಡನ್ನು ಈ ರೀತಿಯಲ್ಲಿ ವಾಣಿಜ್ಯ ಬಳಕೆಗೆ ಉಪಯೋಗಿಸುವುದರ ಬಗ್ಗೆ ಕೂಲಂಕಶವಾಗಿ ಚರ್ಚಿಸಲಾಗಿದೆ. ಹಾಗೂ ಅಂಥಾ ಸೇವೆಯನ್ನು ಕೊಡುವುದರ ಮೂಲಕ ಈ ಯುನೀಕ್ ಕಾರ್ಡ್ ಪ್ರಾಧಿಕಾರಕ್ಕೆ ವರ್ಷಕ್ಕೆ ಏನಿಲ್ಲವೆಂದರೂ 250-300 ಕೋಟಿ ಲಾಭ ಬರುತ್ತದೆಂದೂ ಅಂದಾಜು ಮಾಡಲಾಗಿದೆ!!



ಸಾರಾಂಶದಲ್ಲಿ ಇದು 2010ರ ಸೆನ್ಸಸ್ ಪ್ರಕ್ರಿಯೆಯ ಹಿಂದಿನ ಉದ್ದೇಶ. ಇದು ಭಾರತದ ನಾಗರಿಕ ಹಾಗೂ ಪ್ರಭುತ್ವಗಳ ನಡುವಿನ ಸಂಬಂಧವನ್ನೇ ಶಾಶ್ವತವಾಗಿ ಬದಲಾಯಿಸುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಪ್ರಭುತ್ವಗಳೆ ನಮ್ಮ ಪ್ರತಿನಿಧಿ ಮತ್ತು ಅದಕ್ಕೇ ಪರಮಾಧಿಕಾರ. ಆದರೆ ದೇಶದ ಒಳಗೆ ಪರಮಾಧಿಕಾರ ಇರಬೇಕಾದದ್ದು ಜನರಿಗೆ. ಇಲ್ಲಿ ಪ್ರಭುತ್ವ ಜನರ ಸೇವಕ. ಆದರೆ ಭಾರತ ಪ್ರಭುತ್ವ ಈ ಸೆನ್ಸಸ್ 2010ಅನ್ನು ಬಳಸಿಕೊಂಡು ಜಾರಿಗೆ ತರುತ್ತಿರುವ ಯೂನಿಕ್ ಐಡೆಂಟಿಟಿ ಕಾರ್ಡು, NPR ಮತ್ತು NATGRID ಗಳು ಭಾರತದ ಪ್ರಭುತ್ವಕ್ಕೆ ನಾಗರಿಕರ ಮೇಲೆ ಪರಮಾಧಿಕಾರವನ್ನು ಕೊಡುತ್ತದೆ. ಇದು ಕ್ರಮೇಣ ಸರ್ವಾಧಿಕಾರಕ್ಕೂ ದಾರಿ ಮಾಡಿಕೊಡುತ್ತದೆ. ಇದು ನಾಗರಿಕರನ್ನು ಒಂದೋ ಸಂಭವನೀಯ ಭಯೋತ್ಪಾದಕನ್ನಾಗಿ ಅಥವಾ ಗ್ರಾಹಕನನ್ನಾಗಿ ಮಾತ್ರ ಕಾಣುತ್ತದೆ. ಒಬ್ಬ ಹಕ್ಕುಳ್ಳ, ಪರಮಾಧಿಕಾರ ಉಳ್ಳ ನಾಗರಿಕನನ್ನಾಗಿಯಲ್ಲ. ಇದು ಈ ದೇಶದ ಬಲಹೀನ, ಶೋಷಿತ, ದಮನಿತ ಸಮುದಾಯಗಳ ಬದುಕನ್ನು ಇನ್ನಷ್ಟು ದುರ್ಭರಗೊಳಿಸುತ್ತದೆ. ಬಲಿಪಶುಗಳನ್ನಾಗಿಸುತ್ತದೆ.

ಆದರೆ ಈ ಅಪಾಯಗಳ ಬಗ್ಗೆ ಜನರಿಗೆ ಮಾಹಿತಿಯೇ ಇಲ್ಲ. ಈಗ ನಡೆಯುತ್ತಿರುವುದು ಕೇವಲ ಮನೆಗಳ ಗಣತಿ. ಅಸಲಿ ವಿವರಗಳನ್ನು 2011ರ ಫೆಬ್ರವರಿಯಲ್ಲಿ ಕಲೆಹಾಕಲಾಗುತ್ತದೆ. ಈ ಅವಧಿಯೊಳಗೆ ಜನರು ಎಚ್ಚೆತ್ತುಕೊಂಡು ಜನಗಣತಿಯನ್ನು ಜನರ ಮೇಲೆ ಬೇಹುಗಾರಿಕೆ ಮಾಡಲು ಯೋಜಿಸಿರುವ ಈ NPR ಮತ್ತು NATGRID ಗಳನ್ನು ಕೈಬಿಡಲು ಚಳವಳಿ ರೂಪಿಸಬೇಕಿದೆ. ●



ಬೆಳಕು ಸಂಪೂರ್ಣವಾಗಿ ಹರಿದಾಗ ಮೊದಲ ಬಾರಿಗೆ ನಾನು ಆತನನ್ನು ಸ್ಪಷ್ಟವಾಗಿ ನೋಡಿದೆ. ತೆಳುಕಂದು ಮೈಬಣ್ಣ, ವಿಶಾಲ ಹಣೆ, ಬೆಳಗಿನಜಾವದಷ್ಟೇ ಶುಭ್ರವಾದ ಮುಗುಳ್ನಗೆ, ಕೆನ್ನೆಯ ಮೇಲೆ ನಸುಗೆಂಪು ಕಾಂತಿ ಹಾಗೂ ಸ್ನೇಹ-ಗಂಭೀರತೆಗಳೆರಡನ್ನೂ ಪ್ರತಿಫಲಿಸುವ ಕಣ್ಣುಗಳು; ಸುಮಾರು ಇಪ್ಪತ್ತೆರಡು - ಇಪ್ಪತ್ತಮೂರು ವರ್ಷ ವಯಸ್ಸಿನ ಯುವಕ.

ಕಾಡಿನಲ್ಲಿ ಮೊದಲ ರಾತ್ರಿ



ಜಂಗಲ್‌ನಾಮ 2

ಮಾವೋವಾದಿ ಗೆರಿಲ್ಲಾ ವಲಯದೊಳಗೆ...

ಮೂಲ: ಸತ್ನಾಮ್

ಕನ್ನಡಕ್ಕೆ: ಕುಮಾರ್ ಬುರಡಿಕಟ್ಟಿ

ಮೋಟಾರ್‌ಸೈಕಲ್‌ನ ಪ್ರಖರ ಬೆಳಕಿನ ಕಿರಣಗಳು ನಮ್ಮ ತಲೆಯ ಮೇಲೆ ಹಾದುಹೋದವು. ಕೆಲವೇ ಕ್ಷಣಗಳಲ್ಲಿ ಅದು ಕತ್ತಲಲ್ಲಿ ಕರಗಿಹೋಯಿತು. ನನಗೆ ಆಶ್ಚರ್ಯ! ಅಂಕುಡೊಂಕಾದ, ಕಲ್ಲುಬಂಡೆಗಳಿಂದ ಕೂಡಿದ ಇಂಥ ದುರ್ಗಮ ಕಾಡುದಾರಿಯಲ್ಲಿ ಮೋಟಾರ್‌ಸೈಕಲ್ ಓಡಿಸುವುದು ಹೇಗೆ ಸಾಧ್ಯ? ನಾವೀಗ ಒಂದು ಸಣ್ಣ ತೊರೆಯಗುಂಟಾ ಹಾಸಿಕೊಂಡಿದ್ದ ಕಾಡುದಾರಿಯಲ್ಲಿ ಇದ್ದೇವೆಂದು ನಮ್ಮ ಮಾರ್ಗದರ್ಶಿ ಹೇಳಿದ. ನಾವು ಹಾದುಬಂದಿದ್ದ ಚಿಕ್ಕದಾದ ಸೇತುವೆಯೊಂದರ ಮೇಲೆ ಆ ಮೋಟಾರ್‌ಸೈಕಲ್ ಹೋಗಿತ್ತು. ನಾವು ಚಲಿಸುತ್ತಿದ್ದ ಕಾಡುದಾರಿ ಮೋಟಾರ್‌ಸೈಕಲ್ ಹೋದ ದಾರಿಯನ್ನು ದಾಟಿ ಬಂದಿತ್ತು. ಕತ್ತಲು ಕವಿದಿದ್ದರಿಂದ ಅದು ನಮಗೆ ಗೊತ್ತೇ ಆಗಲಿಲ್ಲ. ನಮ್ಮ ಮಾರ್ಗದರ್ಶಿಯ ಪ್ರಕಾರ ನಾಲ್ಕುಗಾಲಿಗಳ ವಾಹನವನ್ನು ಆ ಸೇತುವೆಯ ಮೇಲೆ ಓಡಿಸುವುದಕ್ಕೆ ಸಾಧ್ಯವೇ ಇಲ್ಲವಾದ್ದರಿಂದ ವ್ಯಾನಿಗೆ ಭಯಪಡುವ ಅವಶ್ಯಕತೆಯೇ ಇರಲಿಲ್ಲ. ಮೋಟಾರ್‌ಸೈಕಲ್‌ಗಳು ಓಡಾಡುವುದೂ ತೀರಾ ವಿರಳ. ಆದರೂ ಮತ್ತೊಂದು ದ್ವಿಚಕ್ರ ವಾಹನವೇನಾದರೂ ಬರುತ್ತಿದೆಯೇ ಎಂಬುದನ್ನು ಚೆಕ್ ಮಾಡುವುದಕ್ಕಾಗಿ ನಾವಿನ್ನೂ ಅವಿತುಕೊಂಡೇ ಇದ್ದೆವು. ಆಗ ಸಮಯ ಬೆಳಗ್ಗೆ ಮೂರು ಅಥವಾ ನಾಲ್ಕು ಗಂಟೆಯಿರಬೇಕು. ಅಂಥ ಹೊತ್ತಲ್ಲದ ಹೊತ್ತಿನಲ್ಲಿ ನಗರದಿಂದ ಮೋಟಾರ್‌ಸೈಕಲ್ ಬಂದಿದ್ದು ನಮ್ಮ ಅನುಮಾನಕ್ಕೆ ಎಡೆಮಾಡಿಕೊಟ್ಟಿತ್ತು. ನಮ್ಮ ಮಾರ್ಗದರ್ಶಿಯಂತೂ ಬಹಳ ಜಾಗೃತನಾಗಿ ದೂರದ ಶಬ್ದಗಳನ್ನು ಆಲಿಸುವುದಕ್ಕೆ ತನ್ನ ಕಿವಿಗಳನ್ನು ತೆರೆದುಕುಳಿತಿದ್ದ. ಅಂಥ ಯಾವುದೇ ಅಪಾಯ ಇಲ್ಲ ಎಂಬುದನ್ನು ಆತ ಕೆಲವೇ ಕ್ಷಣಗಳಲ್ಲಿ ಖಾತ್ರಿಮಾಡಿಕೊಂಡ.

ಇಡೀ ಪ್ರಯಾಣವನ್ನು ಬಹಳ ನಿಶ್ಶಬ್ದವಾಗಿ ಏಕೆ ಮಾಡುತ್ತಿದ್ದೇವೆಂಬುದು ನನಗೀಗ ಅರ್ಥವಾಗಿತ್ತು. ವಾಹನವೊಂದರ ಬೆಳಕು ಬಹುದೂರ ಪಸರಿಸುವುದಕ್ಕೆ ಕಾಡಿನಲ್ಲಿನ ದಟ್ಟ ಪೊದೆಗಳು ಒಂದಿಷ್ಟು ಅಡೆತಡೆಯೊಡ್ಡಬಹುದು, ಆದರೆ ಅದರ ಎಂಜಿನ್‌ನ ಪ್ರತಿಧ್ವನಿ ಬಹಳ ದೂರದಿಂದಲೇ ಕೇಳುತ್ತದೆ. ಮೋಟಾರ್‌ಸೈಕಲ್‌ನ ಶಬ್ದವನ್ನು ಮೊದಲೇ ಗುರುತಿಸದಿದ್ದುದಕ್ಕೆ ನಮ್ಮ ಗೈಡ್ ವಿಷಾದಪಡುತ್ತಿದ್ದ. ಬಹುಶಃ ಕಾಡಿಗೆ ಹೊಸಬನಾದ ನನ್ನನ್ನು ಕಠಿಣ ಕಾಡುದಾರಿಯಲ್ಲಿ ಮುನ್ನಡೆಸುವ ಬಗ್ಗೆ ಆತ ಹೆಚ್ಚು ಲಕ್ಷ್ಯವಹಿಸಿದ್ದರಿಂದ ಮೋಟಾರ್‌ಸೈಕಲ್‌ನ ಶಬ್ದದ ಕಡೆ ಗಮನಕೊಟ್ಟು ಮುಂಚಿತವಾಗಿಯೇ ಗುರುತಿಸಲಾಗಲಿಲ್ಲ ಅನ್ನಿಸುತ್ತದೆ. ಒಂದು ಕಡೆಯಿಂದ ಬೆಳಕು ಹರಿದುಬರುತ್ತಿದ್ದುದನ್ನು ಮೂರನೇ ಸಂಗಾತಿ ಗುರುತಿಸಿ ನಮ್ಮನ್ನೆಲ್ಲಾ ಎಚ್ಚರಿಸಿದ್ದ.

ನಮ್ಮ ಮಾರ್ಗದರ್ಶಿ ರಾತ್ರಿಯಿಡೀ ಕಾಡುದಾರಿಯಲ್ಲಿ ನಮ್ಮನ್ನು ಮುನ್ನಡೆಸುತ್ತಾ ಬೆಳಕು ಹರಿಯುವುದರೊಳಗಾಗಿ ದಟ್ಟ ಗಿಡಮರಗಳಿಂದ, ಪೊದೆಗಳಿಂದ ಆವೃತವಾಗಿದ್ದ ಜಾಗವೊಂದಕ್ಕೆ ಕೊಂಡೊಯ್ದು ಒಂದು ಬೃಹದಾಕಾರದ ಮರದ ಕೆಳಗೆ ತನ್ನ ಕಿಟ್‌ಬ್ಯಾಗ್ ಇಟ್ಟು ಹೇಳಿದ: "ನಾವು ಒಂದು ತಾಸು ನಿದ್ದೆ ಮಾಡಿ ನಂತರ ಸೂರ್ಯ ಹುಟ್ಟುವುದರೊಳಗಾಗಿ ಎದ್ದು ಬೇರೆ ಕಡೆ ಹೊರಡಬೇಕು."

ನೆಲವನ್ನು ಒಂದಿಷ್ಟು ಸ್ವಚ್ಛಗೊಳಿಸಿದ ಆತ ತನ್ನ ಕಿಟ್‌ಬ್ಯಾಗ್‌ನಿಂದ ಒಂದು ಪ್ಲಾಸ್ಟಿಕ್ ಶೀಟ್ ತೆಗೆದು ನೆಲದ ಮೇಲೆ ಹರಡಿದ. ನಮಗೆ ಅದರ ಮೇಲೆ ಮಲಗುವಂತೆ ಸೂಚಿಸಿ ನಾವು ಮಲಗಿರುವಾಗ ತಾನು ಎಚ್ಚರದಿಂದಿದ್ದು ಪಹರೆ ಕಾಯುವುದಾಗಿ ಹೇಳಿದ. ಆದರೆ ಆತನಿಗೂ ವಿಶ್ರಾಂತಿಯ ಅವಶ್ಯಕತೆಯಿತ್ತು; ಆತ ಕತ್ತಲ ಕಾಡುದಾರಿಯಲ್ಲಿ ನಮ್ಮನ್ನು ಮುನ್ನಡೆಸಿದ್ದರಿಂದ, ಅದೇ ವೇಳೆಯಲ್ಲಿ ಬೇರೆಯವರ ಕಣ್ಣಿಗೆ ಬೀಳದಂತೆ ಗೌಪ್ಯತೆಯ ಎಚ್ಚರಿಕೆ ವಹಿಸಿಕೊಳ್ಳುವ ಜವಾಬ್ದಾರಿಯನ್ನೂ ಹೊತ್ತಿದ್ದರಿಂದ ಹಾಗೂ ಇದನ್ನೆಲ್ಲಾ ಮಾಡುವುದಕ್ಕೆ ಹೆಚ್ಚಿನ ಶಕ್ತಿ ಬೇಕಾಗುತ್ತಾದ್ದರಿಂದ ವಾಸ್ತವದಲ್ಲಿ ನಮಗಿಂತಲೂ ಹೆಚ್ಚಿನ ವಿಶ್ರಾಂತಿಯ ಅವಶ್ಯಕತೆ ಆತನಿಗಿತ್ತು, ನಮಗೆ ಹೆಚ್ಚೂಕಡಿಮೆ ಈ ಯಾವ ಜವಾಬ್ದಾರಿಯೂ ಇರಲಿಲ್ಲ, ಹಾಗಾಗಿ ಎಚ್ಚರವಿದ್ದು ಕಾವಲು ಕಾಯುವ ಕೆಲಸವನ್ನು ನಾವು ಮೂವರೂ ಹಂಚಿಕೊಳ್ಳುವ ಅವಶ್ಯಕತೆಯಿತ್ತು, ಆದರೆ ಒಂದು ತಾಸಿನ ಆ ನಿದ್ದೆಯ ಸಮಯದಲ್ಲಿ ಕಾವಲು ಕಾಯುವುದಕ್ಕಾಗಿ ಒಬ್ಬೊಬ್ಬರಿಗೆ ತಲಾ ಇಪ್ಪತ್ತು ನಿಮಿಷಗಳಂತೆ ವಿಭಾಗಿಸುವ ಬದಲು ಒಬ್ಬೊಬ್ಬರಿಗೆ ತಲಾ ಮೂವತ್ತು ನಿಮಿಷಗಳಂತೆ ಅವರಿಬ್ಬರೇ ತಮ್ಮ ನಡುವೆ ವಿಭಾಗಿಸಿಕೊಂಡು ನನ್ನನ್ನು ಆ ಜವಾಬ್ದಾರಿಯಿಂದ ಮುಕ್ತಗೊಳಿಸಿದರು.

ಅದು ಕಾಡಿನಲ್ಲಿ ನನ್ನ ಮೊದಲ ರಾತ್ರಿ! ನಾಲ್ಕು ಅಡಿ ಅಗಲದ "ಬಂಡೆ ಹಾಸಿಗೆ", ಕೆಳಗೆ ತಣ್ಣನೆಯ ಬಂಡೆ, ಮೇಲಿಂದ ಮಂಜು ಹನಿಗಳ ತೊಟ್ಟಿಕ್ಕುವಿಕೆ. ಯಾರಿಗೆ ತಾನೆ ಆ ನಾಲ್ಕು ಅಡಿ ಅಗಲದ ಬಂಡೆಯ 'ಹಾಸಿಗೆ'



ಮೇಲೆ ನಿದ್ರೆ ಬರುತ್ತೆ? ಅವರಿಬ್ಬರೂ ಯಾವಾಗ ಸರದಿ ಪ್ರಕಾರ ತಮ್ಮ ಕಾವಲು ಕೆಲಸವನ್ನು ಬದಲಿಸಿಕೊಂಡರೋ ನನಗೆ ಗೊತ್ತಾಗಲಿಲ್ಲ, ನಾನು ಎಚ್ಚರಗೊಳ್ಳುವ ಹೊತ್ತಿಗೆ ನನ್ನ ಮಾರ್ಗದರ್ಶಿ ಆಗಲೇ ಎದ್ದಿದ್ದ. ಇನ್ನೊಬ್ಬ ಸಂಗಾತಿ ಅನತಿ ದೂರದಲ್ಲಿ ಇನ್ನೂ ಪಹರೆ ಕಾಯುತ್ತಿದ್ದ. ಬೆಳಗು ನಿಧಾನವಾಗಿ ಹರಿಯುತ್ತಿತ್ತು. ಹಕ್ಕಿಗಳು ಇಂಪಾದ ಸಂಗೀತ ಕಲರವ ಮಾಡುತ್ತಾ ಪರಸ್ಪರ ನಿದ್ದೆಯಿಂದೆಬ್ಬಿಸುವ ಕೆಲಸ ಮಾಡುತ್ತಿದ್ದವು. ಬೆಳಕು ಸಂಪೂರ್ಣವಾಗಿ ಹರಿದಾಗ ಮೊದಲ ಬಾರಿಗೆ ನಾನು ಆತನನ್ನು ಸ್ಪಷ್ಟವಾಗಿ ನೋಡಿದೆ. ತೆಳುಕಂದು ಮೈಬಣ್ಣ, ವಿಶಾಲ ಹಣೆ, ಬೆಳಗಿನಜಾವದಷ್ಟೇ ಶುಭ್ರವಾದ ಮುಗುಳ್ನಗೆ, ಕೆನ್ನೆಯ ಮೇಲೆ ನಸುಗೆಂಪು ಕಾಂತಿ ಹಾಗೂ ಸ್ನೇಹ-ಗಂಭೀರತೆ ಗಳೆರಡನ್ನೂ ಪ್ರತಿಫಲಿಸುವ ಕಣ್ಣುಗಳು; ಸುಮಾರು ಇಪ್ಪತ್ತೆರಡು - ಇಪ್ಪತ್ತಮೂರು ವರ್ಷ ವಯಸ್ಸಿನ ಯುವಕ. ಕಳೆದ ರಾತ್ರಿ ನಗರದ ಎಡಭಾಗದಲ್ಲಿರುವ ರಸ್ತೆಯಿಂದ ಇಪ್ಪತ್ತು ಹೆಜ್ಜೆ ದೂರದಲ್ಲಿ ನನ್ನ ಭೇಟಿ ಮಾಡಿದ್ದು ಇದೇ ಯುವಕ. ಪರಸ್ಪರ ನಾವಿಬ್ಬರೂ ಭೇಟಿಯಾಗದೇ ಕತ್ತಲಲ್ಲಿ ಇನ್ಯಾರನ್ನೋ ಭೇಟಿ ಮಾಡಿದ್ದರೆ ಏನಾಗುತ್ತಿತ್ತು? ಅದಕ್ಕೆ ಛಾನ್ಸೇ ಇರಲಿಲ್ಲ, ಹೌದು ಅಂತಹದ್ದಕ್ಕೆಲ್ಲಾ ಇಲ್ಲಿ ಅವಕಾಶವೇ ಇರುವುದಿಲ್ಲವಷ್ಟೆ.

"ನೀವು..."

"ಬಸು."

"ಆದರೆ ನೀವು ಬಂಗಾಳಿಯವರ ತರ ಕಾಣೋದಿಲ್ಲ?

"ಹೌದು, ನಾನು ಬಂಗಾಳಿಯಲ್ಲ, ಆದರೆ ಬಂಗಾಳಿ ಮಾತಾಡ್ತೇನೆ." ನನ್ನ ಮಾರ್ಗದರ್ಶಿ ಕರ್ತವ್ಯಕ್ಕೆ ವಾಪಾಸ್ಸಾಗುತ್ತಾ "ಎಲ್ಲರೂ ರೆಡಿಯಾಗಿ, ಇನ್ನೈದು ನಿಮಿಷಗಳಲ್ಲಿ ನಾವಿಲ್ಲಿಂದ ಹೊರಡಬೇಕು" ಎಂಬ ಸೂಚನೆ ಕೊಟ್ಟ.

ಮೂರನೇ ಸಂಗಾತಿಯನ್ನು ಆತ ಕೂಗಿಕರೆದ. ನಮ್ಮಿಬ್ಬರ ಕಣ್ಣುಗಳು ಮೊದಲ ಬಾರಿಗೆ ಪರಸ್ಪರ ನೇರವಾಗಿ ಸಂಪರ್ಕಿಸಿದೆವು. ಇಬ್ಬರೂ ಮುಗುಳ್ನಗುತ್ತಾ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡೆವು. ನಾನು ಮೇಲೆದ್ದುನಿಂತುಕೊಂಡು ಪರಸ್ಪರ ಕೈ ಕುಲುಕುವುದಕ್ಕೆ ಪ್ರಯತ್ನಿಸಿದೆ. ಆದರೆ, ನನ್ನ ಕಾಲುಗಳು ಅದಕ್ಕೆ ಬೆಂಬಲಿಸಲಿಲ್ಲ, ತೀಕ್ಷ್ಣವಾದ ನೋವು ಅದಕ್ಕೆ ಅವಕಾಶ ಕೊಡಲಿಲ್ಲ.

"ಏನಾಯಿತು"

"ನನ್ನ ಪಾದ ಉಳುಕಿದೆ. ತೊಂದರೆಗೆ ಸಿಕ್ಕಿಕೊಂಡೆವು!" ಎಂದೆ.

"ಥಂಡಿ ವಾತಾವರಣದಿಂದ ನೋವು ಹೆಚ್ಚಾಗಿದೆ" ಬಸು ಹೇಳಿದ.

ಆತ ನನಗೊಂದು ಮುಲಾಮನ್ನು ಕೊಟ್ಟು ಕೆಲವು ಒಣಗಿದ ಎಲೆ, ಕಡ್ಡಿಗಳನ್ನು ಸಂಗ್ರಹಿಸಲಾರಂಭಿಸಿದ.

ಪಾದವನ್ನು ಚೆನ್ನಾಗಿ ತಿಕ್ಕಿ ಮಸಾಜ್ ಮಾಡಿ, ಕಾವುಕೊಟ್ಟು ಬಹಳ ಕಷ್ಟಪಟ್ಟು ಪಾದವನ್ನು ಬೂಟಿನೊಳಗೆ ತುರುಕಿದೆ. ಆದರೆ ಎದ್ದುನಿಲ್ಲಲಾಗಲಿಲ್ಲ, ಕೊನೆಗೆ ಮೂರನೇ ಸಂಗಾತಿಯ ಸಹಾಯದಿಂದ ಎದ್ದು, ಆತನನ್ನೇ ಹಿಡಿದುಕೊಂಡು ನಡೆಯಲು ಪ್ರಯತ್ನಿಸಿದೆ.

"ಈ ಪಾದ ನಾವಿಬ್ಬರೂ ಪರಸ್ಪರ ಕೈಕುಲುಕದಂತೆ ತಡೆದಿತ್ತು" ಎಂದೆ. ಆತ ಮುಗುಳ್ನಗುತ್ತಾ ನನ್ನ ಭುಜತಟ್ಟಿದ. ನಾನು ಮತ್ತೊಂದಿಷ್ಟು ವಾಕ್ಯಗಳನ್ನು ಮಾತನಾಡಿ ಆತನ ಪ್ರತಿಕ್ರಿಯೆಗಾಗಿ ಕಾದೆ. ಆದರೆ ಆತ ಮತ್ತೆ ಮುಗುಳ್ನಕ್ಕ ಅಷ್ಟೆ.

ವಾಸ್ತವ ಏನೆಂದರೆ ನಾವೆಲ್ಲರೂ ಅಪರಿಚಿತರಾಗಿದ್ದೆವು; ಒಬ್ಬರು ಮತ್ತೊಬ್ಬರಿಗೆ ಅರ್ಥವಾಗದ ಭಾಷೆ ಮಾತನಾಡುವವರಾಗಿದ್ದೆವು. ಮುಗುಳ್ನಗೆಯ ಮೂಲಕ ಮತ್ತು ಕಣ್ಣು ಸನ್ನೆಗಳ ಮೂಲಕ ಮಾತ್ರವೆ ಪರಸ್ಪರ ಸಂವಹನ ಸಾಧ್ಯವಿತ್ತು, ನಾನೀಗ ಆತನನ್ನು ಕೈಬಿಟ್ಟು ಸ್ವತಂತ್ರವಾಗಿ ಒಂದಿಷ್ಟು ಹೆಜ್ಜೆಗಳನ್ನಿಟ್ಟೆ. ನಂತರ ನಿಧಾನವಾಗಿ ನಡೆಯುವುದಕ್ಕೆ ಸಮರ್ಥನಾದೆ. ಆದರೆ ಅಷ್ಟು ನಿಧಾನವಾಗಿ ನಡೆದರೆ ನಮ್ಮ ಪ್ರಯಾಣ ಪೂರ್ಣವಾಗುತ್ತಿರಲಿಲ್ಲ. ಬಸು ಒಂದು ಬಿದಿರಿನ ಟೊಂಗೆ ಮುರಿದು ಊರುಕೋಲು ಮಾಡಿ ನನಗೆ ಕೊಟ್ಟ. ಈಗ ನಡೆಯುವುದು ನಿಧಾನವಾಯಿತಾದರೂ ಸ್ವಲ್ಪ ಹಗುರವಾಯಿತು. ಅವರು ನನ್ನ ಕಿಟ್‌ಬ್ಯಾಗ್ ಹೊತ್ತುಕೊಳ್ಳುವುದಾಗಿ ಹೇಳಿದರು. ಆದರೆ ಆಗಲೇ ನಾನದನ್ನು ನನ್ನ ಭುಜಗಳಿಗೇರಿಸಿಕೊಂಡಿದ್ದೆ. ಮ... ಅದನ್ನು ತೆಗೆಯುವುದಕ್ಕೆ ಇಷ್ಟವಿರಲಿಲ್ಲ. ನನ್ನ ಪಾದಗಳು ನಿಧಾನವಾಗಿ ಬೆಚ್ಚಗಾದವು, ನಡಿಗೆಯ ಗತಿ ಸ್ವಲ್ಪ ಸುಧಾರಿಸಿತು. ಆದರೂ ಅವಶ್ಯವಿದ್ದಷ್ಟು ವೇಗವಾಗಿ ನಡೆಯುವುದು ಇನ್ನೂ ಆಗುತ್ತಿರಲಿಲ್ಲ.

"ನಿಮ್ಮನ್ನು ಮರಳಿ ನಗರಕ್ಕೆ ಕರೆದುಕೊಂಡು ಹೋಗಿ ಕೆಲವು ದಿನ ಅಲ್ಲೇ ಇಡಬೇಕಾಗುತ್ತದೆ" ಬಸು ಹೇಳಿದ.

"ನಾನಿಲ್ಲಿಗೆ ಬಂದಿರುವುದು ವಾಪಸ್ಸು ಹೋಗುವುದಕ್ಕಲ್ಲ, ಸ್ವಲ್ಪ ಸಮಯದಲ್ಲಿ ಎಲ್ಲಾ ಸರಿಹೋಗುತ್ತೆ" ಅಂದೆ.

(ಮುಂದುವರೆಯುವುದು)

ಪಿಸುಮಾತಿನ ಚಿತ್ರಗಳು



ಹರಿದ ಸೀರೆಯೊಳು
ಮುಚ್ಚಿಟ್ಟ ಸುಕ್ಕು
ಬಚ್ಚಿಟ್ಟ ಬಿಕ್ಕುಗಳೊಂದಿಗೆ
ಬೆಳ್ಳಿ ಕೂದಲು ಮರೆಯಾಗಿಸಿ
ಕಪ್ಪು ಬಜಾರಿನೊಳು
ಬದುಕು ಹರಾಜಿಗಿಟ್ಟು
ಕೈ ಸನ್ನೆ ಮಾಡಿ ಕರೆವ
ಅವ್ವಂದಿರಲ್ಲ.....

ರೂಪ ಪಡೆಯದ
ಮನಸು ನೋಡದ
ಅವ್ವನೆಂಬ ಕನ್ಯೆಯ
ಉದರದೊಳು ದ್ರವರೂಪಿ
ಲ್ಯಾಬಿನ ಟ್ಯೂಬಿನಲಿ
ಕನಸುಗಳಿಗೆ ಗರಿ ಬಂದು
ರೆಕ್ಕೆ ತೆರೆದು ಹಾರುವ
ಕಣ್ಣುಗಳಲಿ
ಅವ್ವನೆಂಬ ಕನ್ಯೆಯರು
ಮರೆಯಾದ ಚಿತ್ರಗಳಿವೆ.

ಅಂಡಾಣುಗಳೆದೆಯಲಿ
ಹುಟ್ಟದರೆಕ್ಷಣವೇ
ನಡೆದು ಹೋದ ವ್ಯಾಸನ
ಚಿತ್ರವಿದೆ.....

ಹೆಜ್ಜೆ ಮೂಡಿದ ಹಾದಿಯ
ತುಂಬಾ
ಸೌಗಂಧಿನಿಯ ಮೌನ
ರೋದನವಿದೆ

ಹಾಲ್ಬಟ್ಟಿಯ ನಗು
ಎದೆಗೊದೆವ ಮೃದುಪಾದ
ನಿದ್ದೆಯ ಮಂಪರಿನ ನಗುವಿನ
ಕನಸುಗಳಿಲ್ಲ

ಹಾಲೊಸರುವ ಎದೆಗೆ
ರಕುತ ಒಸರುವ ಹಾಗೆ
ಒದೆವ
ಪೊಟ್ಟ ಸಮಾಜದ

ಬೂಟುಗಾಲಿನ ಗುರುತುಗಳೇ
ಎದೆಯ ತುಂಬಾ....

ಗಿಡ-ಗಂಟಿಗಳ
ಮೊಲೆ
ಚಿಗುರುವ ಹೊತ್ತು
ಹೇಳಿಬಿಡಲಿ
ಲಾಭವೊಂದೇ ಮುಖ್ಯವೆಂದು.....?

ಸ್ನಾನ ಗೃಹದಲ್ಲಿ
ಶಯನ ಗೃಹದೊಳು....
ಬಟ್ಟೆ ಬದಲಿಸುವ ರೂಮಿನೊಳು
ಕುಣಿವಾಗ-ನಡೆವಾಗ
ಮೈಮೇಲೆ ಹರಿದಾಡುವ ಕಣ್ಣು-
ಕೆಮರಾ ಕಣ್ಣುಗಳಿಗೆ
ಲಾಭದ ಆಸೆಯೊಂದೇ
ಮುಖ್ಯವೆಂದು
....

ಹೇಳಿಬಿಡಲೆ.....?
ಸೌಗಂಧಿನಿಯ ಸುಗಂಧವ
ಹಿಂದೆ
ದೂರ್ವಾಸನ ಲಾಭದ ದುರ್ಗಂಧದ
ವಾಸನೆಯಿತ್ತೆಂದು
ಹೇಳಿಬಿಡಲೆ.....?

ಗೌತಮನ ಕೋಪದಲ್ಲಿ
ವಿಶ್ವಾಮಿತ್ರನ ಶಾಪದಲ್ಲಿ
ಇಂದ್ರನ ಸಂಚಿನಲ್ಲಿ
ರಾಮನ ಬೆಂಕಿಯಲ್ಲಿ
ರಾವಣನ ಭಕ್ತಿಯಲ್ಲಿ
ಲಾಭವೊಂದೇ ಮುಖ್ಯವಾಗಿತ್ತೆಂದು
ಹೇಳಿಬಿಡಲೆ.....!

ಪಿಸುಮಾತಿನ ಅಂಡಾಣುಗಳ
ತಾಯೆಂಬ ಕನ್ಯೆಯರಿಗೆ
ಕಿವಿಮಾತು ಹೇಳಿಬಿಡಲೇ.....?

• ಬಿ. ಶ್ರೀನಿವಾಸ

ಬಿಜೆಪಿ ಒಳಗಡೆ ಒಳ್ಳೆ ಜನ ಇದ್ದರೆ ತೋರ್ಸು ಉಗುರಿ

ಹಸಿರು ಬಣ್ಣದ ಎಕ್ಸೆಲ್ ಸೂಪರ್ ಗಾಡಿಯಲ್ಲಿ ...ದ ಲತೀಫಾ ಗಾಡಿಯನ್ನು ನಿಲ್ಲಿಸಿ ಹೋಟೆಲಿನೊಳಕ್ಕೆ ...ದು ಜುಮ್ಮಿಯನ್ನು ನೋಡುತ್ತಾ

"ಯಂಗೆ ನಡದದೆ ಜುಮ್ಮಕ್ಕ ನಿಂದು ಯಲಕ್ಸನ್?" ...ದ.

"ಸುಮಾರಾಗಿ ನಡೆದದೆ ಕಣೋ ಲತೀಫಾ."

...ಬ ಯ ಲು ಸೀ ಮೆ ಕಟ್ಟೆಪುರಾಣ

▶ ಬಿ. ಚಂದ್ರೇಗೌಡ

"ನೀನು ಗೆಲ್ತಿ ಬುಡು ಜುಮ್ಮಕ್ಕ. ಯಾರ್ಗೆ ಕೆಟ್ಟದ್ದು ...ಡಿಲ್ಲ ನೀನು. ಅದಕ್ಕೆ ಗೆಲ್ತಿ. ನಿಂದು ಎದುರ್‍ಗೆ ಯಾರು?"

"ಆ ಕ್ಯಂಗನೆದ್ದಿ ನಿಲ್ಲಿಸ್ಯವುದೆ."

"ಓ, ಅದು ಸೀರೆ ಶಗ್ತಿ ಲೀಡ್ರು."

"ಅದೇನ್ಲ ಸೀರೆಸಗತಿ ಅಂತಿಯಲ್ಲ ಲತೀಫ?" ಎಂದ ...

"ಓ ಸೀರಪ್ಪ ನಿನಗೆ ಗೊತ್ತಿಲ್ಲ. ಸೀರೆ ಶಕ್ತಿಯಿಂದ ಈ ... ನಾನು ಹುಣಸೆ ಮರ ಎಲ್ಲಿ ಬಡಿದೆ. ಜನ ಹಾಳಾಗಿ ...ದ್ರು ಬುಡಿ."

"ನಿನ್ನ ಮಾತೆ ಒಂದೂ ಅರ್ಥಾಯ್ತಾಯಿಲ್ಲ ಹೋಗ್ಲ."

"ನೋಡು ಸೀರಪ್ಪ, ಹುಣಸೆಮರದಲ್ಲಿ ಹುಣಸೆಹಣ್ಣು ...ಯಕ್ಕೆ ಒಂದು ದಿನಕೆ ಮುನ್ನೂರು ರೂಪಾಯಿ ಕೇಳ್ತರೆ. ... ಹುಣಸೆಹಣ್ಣ ಚಚ್ಚಿ ಉಂಡೆ ಮಾಡೋ ಹೆಂಗಸೂರು ... ಶಗ್ತಿ ಅನ್ನಕಂಡಿ ಯಲ್ಲಾರು ಬ್ಯಾಂಕ್ ಹತ್ತರ ಹೋಗಿ ...ತಿರತರೆ. ಅವುರ್‍ಗೆ ಮಾತಾಡ್ಸಿದ್ರೆ ಜಾರೇರೇ ಅಂತರೆ. ಈ ... ಶಗ್ತಿಯಿಂದ ಹುಣಸೆಹಣ್ಣು, ಹೊಂಗೆಬೀಜ, ಬೇವಿನ ...ದ್ದು ಯಾಪಾರ ಲುಕ್ಸಾನಾಯ್ತು ಸೀರಪ್ಪ."

"ಅಂಗರೆ ಸ್ತೀಸಗತಿ ವಳ್ಳೆದಲವೇನೊ ಲತೀಫ?" ...ವಳು ಜುಮ್ಮಿ.

"ವಳ್ಳೆದು ಕೆಟ್ಟದ್ದು ನನ್ಗೆ ಏನುಗೊತ್ತು ಜುಮ್ಮಕ್ಕ. ...ತೂ ನಂದು ಯಾಪಾರ ಹಳ್ಳಹಿಡಿತು. ಸರಕಾರ ಸೀರೆ ... ಮಾಡಿ ಎಲ್ಲಾ ಹೆಂಗಸರಿಗೆ ಹಾಳು ಮಾಡ್ತು, ...ರ್‍ಗೆ ಮಾತಾಡಸದು ಕಷ್ಟ ಆಗಿದೆ."

"ನಿಮ್ಮ ಮನೆ ಹೆಂಗಸರ ಕೈಲಿ ಹುಣಸೆ ಹಣ್ಣು ...ಸಕ್ಕಾಗದಿಲವೆ?"

"ಎಷ್ಟು ಅಂತ ಬಡಿತರೆ ಜುಮ್ಮಕ್ಕ?"

"ಅವ್ರುರೆಂಗಸುರು ನಿನ್ನಂಗೆ ಕೂಲಿ ಮಾಡ್ತರೇನೆ. ಯಂಥಾ ಸಾಬೀನೂ ಅವುರೆಂಡ್ತಿಯ ಸುಖವಾಗೇ ಮಡಿಗ್ಯವುನೆ. ಹೆಡತಿರ ಸಾಕಕ್ಕೆ ಏನು ಮಾಡಕ್ಕೂ ತಯಾರು ಅವುರು" ಎಂದ ಸೀರ.

"ನಿಜ ಕಣೊ ಸೀರ ಮಾವ. ಆ ಜುಬೇರ ಸಾಬಿ ದ್ಯಸಿಂದ ಈ ಪ್ರಾಂತ್ಯದ ಗಂಧದ ಮರ ಒಂದೂ ಉಳಿಲಿಲ್ಲ, ಇನ್ನ ಅವುನ ಮಕ್ಕಳು ನಿಲ್ಸಿದ ಬೈಕ ಮಂಗಮಾಯ ಮಾಡಿಬುಡ್ತವೆ. ಕಳ್ಳತನ ಅನ್ನದು ಅವುರಿಗೊಂದು ಸಾಹಸದ ಕ್ಯಲಸಾಗ್ಯದೆ" ಎಂದ ಉಗ್ರಿ.

"ಲೇ ಉಗುರಿ, ನೀನು ಬಿಜೆಪಿಗಳ ಟೈಪ್ ಮಾತಾಡಬೇಡ. ಈಗ ಮರ ಕಡಿಯದು ಬರೀ ಸಾಬರದು ಕೆಲಸ ಅಲ್ಲ. ಎಲ್ಲಾರು ಕಡಿತಾವುರೆ. ಬೈಕು ಕದಿಯದು ಸಾಬರುದು ಟೆಂಡರ್ ಅಲ್ಲ ಗೊತ್ತಾ?"

"ಆದ್ರೆ ಹೆಚ್ಚಿನ ಭಾಗ ಅವುರೆ ಅನ್ನದ ಒಪ್ಪಿಗತ್ತಿಯಾ?"

"ಇರಬವುದು. ಆದ್ರೆ ಕೆಟ್ಟು ಕೆಲ್ಸಗೆಲ್ಲಾ ಸಾಬುರು ಕಂಟ್ರಾಕ್ಟ್ ಹಿಡಿದಿಬಿಟ್ಟವುರೆ ಅನ್ನಂಗೆ ಹೇಳಬಾರ್ದು."

"ಬೆಂಗಳೂರಲ್ಲಿ ಬಾಂಬಾಕಿದರಲ್ಲ ಅದಕೇನೇಳ್ತಿ?"

"ಅದು ಬಾಂಬಲ್ಲ ಉಗುರಿ, ಪಟಾಕಿ ವಡದಿದಾರೆ. ಬಾಂಬಾಗಿದ್ರೆ ಮನುಸುರು ಸಾಯ್ತಿರಲಿಲ್ಲಾ? ಯಾರೊ ಸುವ್ವರ್‌ಗಳು ಗಡಾಭೋಜು ವಡದಿದಾರೆ ಅಷ್ಟೆ."

"ಸಾಬಿ ಏನೇ ಆದ್ರು ಸಾಬಿನೆ ಕಣೊ. ಅಲ್ಲಾ ಬಾಂಬಾಕಿರದ ಒಪ್ಪಿಗಳದೆ ಪಟಾಕಿ ಅಂತಿಯಲ್ಲಾ ಒಂದು ವೇಳೆ ಬಾಂಬು ಅಂತ ಸಾಬೀತಾಯ್ತು ಅನ್ನು, ಆಗೇನು ಮಾಡ್ತಿ?"

"ಬಾಂಬು ಅಂದ್ರೆ ಸಾಬ್ರು ಅನ್ನದು ಬೇಡ. ಭಜರಂಗಿದೋರೂ ಬಾಂಬು ಮಡುಗ್ತರೆ ಉಗುರಿ. ಆ ಮುತಿಲ್ಕೆ ನೋಡು ಎಂಗೆ ಕಾಣ್ತನೆ ಚಿನಾಲಿ. ಸಾಬರ್‍ಗೆ ಬೈತಾನಲ್ಲ ಇವುರ್‍ದ್ದು ವಳ್ಗಿ ಒಳ್ಳೆ ಜನಾ ಇದಾರ?"

"ವಳ್ಳೆ ಮಾತೇಳಿದೆ ಕಣೊ ಲತೀಫ" ಎಂದುಕೊಂಡು ವಾಟಿಸ್ಸೆ ಬಂದ.

"ವಳ್ಳೆ ಮಾತು ಅಂತ ಅಲ್ಲಾ ವಾಟಿಸ್ಸೆ, ಕೆಟ್ಟು ಜನ ವಳ್ಳೆ ಜನ ಅಂತ ಚರ್ಚೆ ನಡೆದದೆ. ಆಯ್ತು ಸಾಬರು ಕೆಟ್ಟ ಜನ, ಬಿಜೆಪಿಲಿ ವಳ್ಳೆ ಜನ ಐತೆ? ಒಂದೇ ಒಂದು ತೋರುಸು ಉಗುರಿ."

"ಅಲ್ಲೂ ಬೇಕಾದೋಟು ಜನವುರೆ ಕಣೊ."

"ಅದೆ ನಾನು ಹೇಳಿದ್ದು. ಒಂದು ಉದಾರಣೆ ಯಸಿ ಉಗುರಿ."

"ರೇಣಕಾಚಾರಿ, ಸಂಪಂಗಿ, ರೆಡ್ಡಿಗಳು, ಶೆಟ್ಟಿಗಳು" ಎಂದು ಉಗ್ರಿ ನಗತೊಡಗಿದ. ಲತೀಫನೂ ನಗುತ್ತಾ


"ಆಹಾ ಏನು ಜನ ಉಗುರಿ? ಇವುರು ಸೈತಾನ್ ಹೆಸರೇಳಿದಂಗೆ ಹೇಳ್ತಿಯಲ್ಲಾ. ಒಂದೇ ಒಂದು ಒಳ್ಳೆ ಹೆಸರು ಸಿಗಲಿಲ್ಲಾ ನಿನಗೆ."

"ಯಂಗೆ ಸಿಗತವ್ರೊ ಲತೀಫ. ಒಳ್ಳೆತನ ಹುಟ್ಟಾಣಕೆಯಿಂದ್ಲೂ ಬತ್ತದಾ? ಪರಿಸರದಿಂದ್ಲೂ ಬತ್ತದೆ, ಓದಿನಿಂದ್ಲೂ ಬತ್ತದೆ. ಆದ್ರೆ ಬಿಜೆಪಿಗಳಿಗೆ ಅದ್ಯಾವುದೂ ಸಿಕ್ಕಿಲ್ಲ. ಆದ್ಕೆ ಯಾರು ನೋಡು ಕಾಂಪ್ಲಿಕೇಶನ್ ಪರಸನ್ನಗಳೇ ಅಲ್ಲಿರದು" ಎಂದ ವಾಟಿಸ್ಸೆ.

"ಆದ್ರೆ ಇದ್ದಿದ್ರಲ್ಲಿ ಸುರೇಶ್‌ಕುಮಾರ ಪರವಾಗಿಲ್ಲ ಅಲವೇನೊ?" ಎಂದ ಉಗ್ರಿ.

"ಸುರೇಶ್‌ಕುಮಾರ ವೈಯಕ್ತಿಕವಾಗಿ ಪರವಾಗಿಲ್ಲ ಅನ್ನದಾದ್ರು ಬಿಜೆಪಿ ಅಜೆಂಡಾ ವಿಷಯದಲ್ಲಿ ಅವುನೂ ಉಳದೋರಂಗೆ ಅಲವೇನೊ? ಈ ಲತೀಫ ಒಳ್ಳೆ ಮನ್ಸ, ಆದ್ರೆ ಸಾಬರ ಜ್ವತೆ ಇದ್ದಾಗ ಇವುನು ಅಲ್ಲಾವ್ರೊ ಅಕ್ಬರ್ ಅಂತನಪ್ಪ. ಅಂಗೆ ವ್ಯಕ್ತಿಗಳು ಸರಿಯಿದ್ರೂ ಸಿದ್ದಾಂತ ಸರಿ ಇಲ್ದಾಗ ನಾವು ಏನ್ನೂ ಮಾಡಕ್ಯಾಗದಿಲ್ಲ."

"ಅದೇನರ್ಥವಿಲ್ಲದ ಮಾತಾಡ್ತಿ, ಯಲಕ್ಸನ್ನಿಗೆ ಏನು ಮಾಡಬೇಕು ಹೇಳ್ರ" ಎಂದಳು ಜುಮ್ಮಿ. ಆಗ ಲತೀಫ ಏನೋ ನೆನೆಸಿಕೊಂಡಂತೆ,



"ಜುಮ್ಮಕ್ಕ ನೀನು ಒಂದು ಐಡಿಯಾ ಮಾಡ್ತಿಯಾ?"

"ಅದೇನೇಳೊ?"

"ನಮ್ದು ಅಯೂಬ್ ಒಳ್ಳೆ ಬರಿಯಾನಿ ಮಾಡ್ತನೆ. ಕರಿಸಿ ಮಾಡಿಬಿಟ್ಟು ಊರಿಗೆ ಎಲ್ಲಾ ಕೊಟ್ಟುಬಿಡು. ಓಟು ಮಾಡುವಾಗ್ಲು ಅದರದ್ದು ಕೈ ವಾಸನೆ ಇರತದೆ."

"ಊರಿಗ್ಯಲ್ಲ ಮಾಡಕ್ಕೆ ಒಸಿಯಾದತೇನೊ?"

"ಐವತ್ತು ಕೆಜಿ ಮಾಂಸ ಆದ್ರೆ ಸಾಕು ಜುಮ್ಮಕ್ಕ ಬರಿಯಾನಿ ತಿಂದ ಜನ ಮೋಸ ಮಾಡಲ್ಲಾ."

"ಐವತ್ತು ಕೆಜಿ ಬಾಡಿಗೆ ವಸಿದುಡ್ಡಾದತೇನೊ?"

"ಏನು, ಜುಜುಬಿ ಹತ್ತು ಸವುರ ಆಗ್ತದೆ. ಯಲ್ಲಾ ಟೊಟ್ಟು ಮಾಡಿದ್ರೆ ಹದನೈದು ಸವುರ ಆಗಬವುದು ಕಣಕ್ಕ, ಯೋಚನೆ ಮಾಡಬೇಡ. ಮುಂದೆ ಪಂಚಾತಿಗೆ ವಳ್ಳೆ ದುಡ್ಡು ಕೊಡ್ತರಂತೆ" ಎಂದು ಲತೀಫ ಹೇಳುವಾಗ ಸಿಟ್ಟಾದ ಕಾಳಮಾವ ಕೊಸರಿದಂತೆ ಕೂರುತ್ತಾ,

"ಯಂತ ಮನಿಯಾಳ ಬುದ್ದಿ ಹೇಳಿಕೊಡ್ತನೆ ನೋಡು. ಬರಿಯಾನಿ ತಿನ್ನಿಸಿ ಓಟು ಕೇಳಿದ್ರೆ ಮರಿಯಾದಿ ಬಂದತ್ಲ?" ಎಂದ.

"ಕಾಳೇಗೌಡ್ರೆ, ಇದು ನಿಮ್ದು ಕಾಲ ಅಲ್ಲ. ಓಟ್ ಖರೀದಿ ಮಾಡೊ. ಕಾಲ ಇದು. ಜುಮ್ಮಕ್ಕ ಸುಮ್ಮನೆ ಇದ್ರೆ ಸೀರೆ ಸಗ್ತಿ ಸುಕನಾತಿ ಗೆದ್ದ ಪಂಚಾತಿ ವಳಗೆ ಹೋಗ್ತಳೆ ಆಗ" ಎಂದ ಲತೀಫ.

"ಡೆಮಾಕ್ರಸಿಲಿ ಜುಮ್ಮಕ್ಕನೇ ಗೆಲ್ಲಬೇಕು ಅನ್ನದೇನೊ ಲತೀಫ. ಯಾರಾದ್ರು ಗೆಲ್ಲಬವುದು. ನಮ್ಮ ಕರ್ತವ್ಯ ಏನುಪ್ಪ ಅಂದ್ರೆ ಓಟು ಕೇಳದು" ಎಂದ ವಾಟಿಸ್ಸೆ.

"ಹಳ್ಳಿಕಡೆಗೆ ಬಿಜೆಪಿಗಳು ಬಂದ್ರೆ ಭಾಳ ಕಷ್ಟ ವಾಟಿಸ್ಸೆ. ಅವುರು ಈಗ ಸಿಟಿ ವಳಗಡೆ ಜಾಮಾಗಿದಾರೆ. ಇನ್ನ ಪಂಚಾತಿ ಚುನಾವಣೆಯಿಂದ ಹಳ್ಳಿ ಕಡೆ ಬಂದ್ರೆ ಸಾಬರಗೆ ಬಾಳ ತೊಂದರೆ."

"ಬಿಜೆಪಿಗಳು ಅಂದ್ರೆ ಅವುರೇನು ದೇಸಾನು ದೇಸದಿಂದ ಬಂದರೆ, ಇಲ್ಲೆ ನಮ್ಮ ನಿಮ್ಮೊರೆ ಅಪ್ಪ, ಆ ಭೈರ, ಚೆಡ್ಡಿ ಮಂಜ, ಅಸೋಕ, ಅನಂದ ಇವುರ್‍ಯಲ್ಲ ತರಡಿಲ್ಲದ ನರಿಗಳಿದ್ದಂಗಿದ್ರು. ಯಾವತ್ತು ಬಿಜೆಪಿ ಅಧಿಕಾರಕ್ಕೆ ಬಂತೋ ಅವತ್ತಿಂದ ಹಾರಾಡ್ತ ಅವುರೆ. ಅವುರದೂ ಒಂದು ಕಾಲ ಮುಗಿಲಿ ಬುಡು."

"ಬಿಜೆಪಿಗಳು ಅಧಿಕಾರಕ್ಕೆ ಬರಲಿಲ್ಲ ಕಣೊ ಉಗ್ರಿ. ಈ ಅಪ್ಪ ಮಕ್ಕಳು ತಂದು ಮಡಗಿದ್ರು ಅನ್ನು. ಇವರು ತಂದು ಮಡಗದೆ ಇದ್ರೆ ಅವುರೆಲ್ಲಿ ಬರ್ತಿದ್ರು. ಅಂತೂ ಅಪ್ಪ ಮಕ್ಕಳು ಕರ್ನಾಟಕಕ್ಕೆ ನರಕ ತಂದು ಮಡಗಿದ್ರು" ಎಂದ ವಾಟಿಸ್ಸೆ.

"ಅವುರಿಗೆ ಬಿಬಿಎಂಪಿ ಚುನಾವಣೆ ಸರಿಯಾದ ಉತ್ತರ ಕೊಡ್ತು ಕಣೊ ವಾಟಿಸ್ಸೆ. ನಾನು ಏನಿಲ್ಲಾ ಅಂದ್ರು ಇಪ್ಪತ್ತೈದು ಸೀಟು ಬತ್ತದೆ ಅನ್ಕ ಕಂಡಿದ್ದೆ ಕಣೊ. ಆದ್ರೆ ಹದಿನೈದು ಸೀಟು ಬರದೆ?"

"ಅವತ್ತಿಂದ ಅವುರ ಉಸಿರಿಲ್ಲ ನೋಡು. ದ್ಯಾವೇಗೌಡ ತಾನು ಕೆಡದೂ ಅಲ್ದೆ ಕಾಂಗ್ರೆಸ್‌ನೂ ಕೆಡಿಸಿ ಮಡಗಿದ ಅತ್ತಗೆ."


"ಆ ಕಾಂಗ್ರೆಸ್ ಕತಿಯೇನೊ ಅಂತ" ಎಂದ ಸೀರ.

"ಕಾಂಗ್ರೆಸ್ಸು ಸದ್ದಿಕೆ ನಿಮ್ಮ ಶ್ರೀಕಂಠಯ್ಯನಂಗದೆ ಚಿಗಪ್ಪ. ಆ ಶ್ರೀಕಂಠಯ್ಯ ಏನು ಮನೆಲವುನೊ, ಆಸುಪತ್ರೆಲವುನೊ ಗೊತ್ತಾಯ್ತಾಯಿಲ್ಲ!"

"!?" ●

ಪ್ರಿಯವಾದ ಕೆಲಸ

ಅಮೆರಿಕನ್ನರು ಸುಮ್ಮನೆ ಇರುವುದಿಲ್ಲ. ವಿಜ್ಞಾನಕ್ಕೇ ಅಂಟಿಕೊಂಡು ವಿಜ್ಞಾನದ ಬಗ್ಗೆ ಎಲ್ಲರಿಗೂ ಅಸಹ್ಯವಾಗುವಂತೆ ಮಾಡುತ್ತಾರೆ. ಟೆಸ್ಟ್ ಟ್ಯೂಬ್ ಬೇಬಿ ತಯಾರಿಸಿ ಆ ಬೇಬಿಗೆ ತಂದೆತಾಯಿ ತಯಾರಿಸುವಲ್ಲಿ ಸೋತು 'ಗೋಳೋ' ಎಂದು ಅಳುತ್ತಾರೆ. ತಿಂಗಳಿಗೆ ಎರಡಾದರೂ 'ಸರ್ವೆ'ಗಳಿರುತ್ತವೆ. ಜನರ ತಲೆ ತಿಂದು ಅವರಿಂದ ತಮ್ಮ ಬಾಲಿಶ ಪ್ರಶ್ನೆಗಳಿಗೆ




ಉತ್ತರ ಪಡೆದು ಹಿಗ್ಗುತ್ತಾರೆ. ಒಂದು ಸರ್ವೆ ಜನರು ಈಚೆಗೆ ಯಾವ ಯಾವ ರೀತಿಯಲ್ಲಿ ಪ್ರೇಮಿಸುತ್ತಾರೆ ಎಂದು ಇಳುತ್ತದೆ; ಹೆಂಗಸರು ಹೇಗೆ ಪ್ರೇಮಿಸುತ್ತಾರೆ, ಗಂಡಸರು ಹೇಗೆ ಪ್ರೇಮಿಸುತ್ತಾರೆ. ಅದೆಲ್ಲ ಇಲ್ಲಿ ಬೇಡ. ಜನ ಇಂಜಿನಿಯರಿಂಗ್ ...ಲಸ ತಮಗೆ ಇಷ್ಟ, ಕೃಷಿ ಇಷ್ಟ, ಪುಸ್ತಕ ಇಷ್ಟ, ಚಿತ್ರ ಇಷ್ಟ, ...ಮ್ಮ ದೇಶ ಇಷ್ಟ-ಎಂದು ಏನಾದರೂ ಹೇಳಬಹುದೆಂದು ...ರೀಕ್ಷಿಸಿ 'ನಿಮಗೆ ಯಾವ ಕೆಲಸ ಇಷ್ಟ?' ಎಂದು ಕೇಳಿದರು. ...ದಕ್ಕೆ ಶೇ. ತೊಂಭತ್ತರಷ್ಟು ಜನ ಉತ್ತರಿಸಿದ್ದು, "ಪ್ರೇಮಿಸು...ವುದು- love-making" ಎಂದು. ಜನ ತುಂಗಾಮಿಯಾಗಿ ...ಮುಂಬರಾಗಬಹುದು, ದೇಶವನ್ನು ಪ್ರೇಮಿಸುವುದು ಕೆಲಸ ...ಂದು ಆತ್ಮವಂಚನೆ ಮಾಡಿಕೊಳ್ಳಬಹುದು. ಎಲ್ಲ ಕೆಲಸಗಳೂ ...ಂದು ಗುರಿಗೆ ಮಾತ್ರ ಸಾಧನಗಳಿರಬೇಕು. ಪ್ರೇಮಕ್ಕೆ ...ಎಲ್ಲವೂ ತಯಾರಿ ಅಥವಾ ಸಿದ್ಧತೆ!

ವಯಸ್ಸು ಮತ್ತು ಗಣ್ಯತೆ

ಭಾರತಕ್ಕೆ ಅಂಟಿದ ರೋಗವೋ ಬೇರೆ ಕಡೆಗೂ ಈ ರೋಗ ಇದೆಯೋ ಗೊತ್ತಿಲ್ಲ, ಸ್ವಲ್ಪ ಖ್ಯಾತಿ ಬರುವ ಹೊತ್ತಿಗೆ ವ್ಯಕ್ತಿಗೆ ವಯಸ್ಸೂ ಸೇರಿರುತ್ತದೆ; ಇಲ್ಲಿ ಬುದ್ಧಿ, ಸಾಧನೆಗಿಂತ ವಯಸ್ಸು, ಖ್ಯಾತಿಗೆ ಹೆಚ್ಚು ಗೌರವ. ಅರವತ್ತು ತುಂಬಿದ ವ್ಯಕ್ತಿ ಬೇಕೆಂತಲೇ ದೌರ್ಬಲ್ಯ ತೋರುವುದು, ಗೊತ್ತಿಲ್ಲದ್ದರ ಬಗ್ಗೆ ಎಲ್ಲರಿಗೂ ಕೊರೆಯುವುದು, ತಾನು ಹೇಳಿದ್ದರಲ್ಲಿ ಸತ್ಯ ತುಂಬಿದೆ ಎಂದು ಭ್ರಮಿಸುವುದು ಸಾಮಾನ್ಯ. ಸಾಹಿತಿಗಳಲ್ಲಂತೂ ಈ ಪಿಡುಗು ಹೆಚ್ಚು. ಚಿಕ್ಕವನಾಗಿದ್ದಾಗ ಸರಳವಾಗಿ, ಸ್ಪಷ್ಟವಾಗಿ ಬರೆಯುತ್ತಿದ್ದವನು ಎಪ್ಪತ್ತು ತುಂಬುವಷ್ಟರಲ್ಲಿ ಯಾರಿಗೂ ಅರ್ಥವಾಗದ ಮಾತು, ವಾಕ್ಯ ಬಳಸುವುದು, ಅದನ್ನು ಪಾಂಡಿತ್ಯ ಎಂದು ಎಲ್ಲರೂ ಮೆಚ್ಚಬೇಕೆಂದು ನಿರೀಕ್ಷಿಸುವುದು ವಿಚಿತ್ರವೆನ್ನಿಸುತ್ತದೆ. ರವೀಂದ್ರನಾಥ ಠಾಕೂರ್ ತಮ್ಮ ಮುಪ್ಪಿನಲ್ಲಿ ಎಲ್ಲರಂತೆ ಬರೆಯುತ್ತಲೇ ಇರಲಿಲ್ಲ; ಅವರನ್ನು ಭಾಷಾಂತರಿಸುವ ಜನರಂತೂ ಅವರು ಬರೆದದ್ದನ್ನೂ ಇನ್ನೂ ಹಾಳು ಮಾಡಿ ಅವರನ್ನು ಇನ್ನಷ್ಟು "ಎತ್ತರಕ್ಕೆ" ತಳ್ಳಿರುತ್ತಾರೆ. ಠಾಕೂರ್ ಕಲೆಯ ಬಗ್ಗೆ ಬರೆದ ಪುಸ್ತಕದಲ್ಲಿ ಈ ವಾಕ್ಯ ಇದೆ: "ತನ್ನ ನಿರಪೇಕ್ಷ ಅವಶ್ಯಕತೆಗಳನ್ನು ಬಹುತೇಕ ಮರೆಯಿಸುವ ಒಂದು ಅತೀತ ಸಮೃದ್ಧಿಯ ಮೂಲಕವೇ ತನ್ನನ್ನು ತಾನು ಮಾನವನು ಅಭಿವ್ಯಕ್ತಿಸಿಕೊಳ್ಳುತ್ತಾನೆ."


ಡಾ. ಎಂ. ಗೋಪಾಲಕೃಷ್ಣರಾವ್ ಎಂಬ ಆಯುರ್ವೇದದ ವೈದ್ಯರು ಚಿಕ್ಕವರಾಗಿದ್ದಾಗ ಚೆನ್ನಾಗಿ ಬರೆಯುತ್ತಿದ್ದರು. ಅವರ 'ಪ್ರೇಮ ಕಲೆ' ತರಹದ ಪುಸ್ತಕಗಳನ್ನು ನಾವು ಹೈಸ್ಕೂಲಿನಲ್ಲಿದ್ದಾಗಲೇ ಓದಿದ್ದೆವು. "ಸ್ವಸ್ಥ ಜೀವನ" ಎಂಬ ಅವರ "ಪರಿಪಕ್ವ" ವಯಸ್ಸಿನ ಪುಸ್ತಕವೊಂದು ಮೊನ್ನೆ ಸಿಕ್ಕಿತು. ಅದನ್ನು ಓದಿ ನಗು ತಡೆಯಲಾಗಲಿಲ್ಲ. ಈ ಅಧ್ಯಾಯದಲ್ಲಿ ಅವರು ಬರೆದಿರುವುದು ಮೈಥುನದ ಬಗ್ಗೆ; ಅಂದರೆ ಪ್ರೇಮ, ಸಂಭೋಗ ಇತ್ಯಾದಿಯ ಬಗ್ಗೆ. ಇದು ನಿಮಗೆ ತಕ್ಷಣ ಅರ್ಥವಾಗುತ್ತದೋ ನೋಡಿ:



ವ್ಯಾಯಾಮಾರ್ಹ ವಯಸ್ಸು


"ವ್ಯಾಯವೆಂದರೆ ಸ್ತ್ರೀ-ಪುರುಷರ ಕಾಮಸಂಯೋಗ. ಆದ್ದರಿಂದ ವ್ಯಾಯಾಮಾರ್ಹ ವಯಸ್ಸೆಂದರೆ ಸಂಭೋಗಕ್ಕೆ ಯೋಗ್ಯವಾದ ವಯಸ್ಸು ಎಂದರ್ಥವಾಗುವುದು. ಆದರೆ ರೂಢಿಯಲ್ಲಿ ಅದಕ್ಕೆ ವಿವಾಹಾರ್ಹ ವಯಸ್ಸು ಎಂದರ್ಥ ಮಾಡುವುದುಂಟು. ಏಕೆಂದರೆ ಪುರಾತನ ಕಾಲದಲ್ಲಿ ವಿವಾಹವೂ ವ್ಯಾಯವೂ ಒಂದೇ ಕಾಲಕ್ಕೆ ನಡೆಯುವ ಪಾಡಿಕೆಯಿತ್ತು. ಆದರೆ ಕೆಲವು ಐತಿಹಾಸಿಕ ಕಾರಣಗಳಿಂದ ಅಲ್ಪ ವಯಸ್ಸಿನಲ್ಲಿಯೇ ಮದುವೆ ಮಾಡುವ ರೂಢಿಯು ಪ್ರಾರಂಭವಾಯಿತು. ಆ ರೂಢಿಯು ಇನ್ನೂ ಪೂರ್ಣಲುಪ್ತವಾಗಿಲ್ಲ. ಆದ್ದರಿಂದ ಈಗ ವ್ಯಾಯಾಮಾರ್ಹ ವಯಸ್ಸೆಂದರೆ ಸಂಭೋಗದ ವಯಸ್ಸೆಂದು ಸ್ಪಷ್ಟೀಕರಿಸುವ ಪ್ರಸಂಗ ಬಂದಿದೆ. ಆದರೆ ಅವಿವಾಹಿತ ಸ್ತ್ರೀ ಪುರುಷರ ವ್ಯಾಯವನ್ನು ನೀತಿಶಾಸ್ತ್ರವಾಗಲಿ ಆಯುರ್ವೇದಶಾಸ್ತ್ರವಾಗಲಿ ಒಪ್ಪಲಾರದು. ಆದ್ದರಿಂದ 'ವ್ಯಾಯಾಮಾರ್ಹವಯ' ಎಂದಾಗ ವಿವಾಹಿತವಾದ ಗಂಡಹೆಂಡಿರ ಸಂಯೋಗದ ವಯಸ್ಸು ಎಂದು ಅರ್ಥವಾಗುವುದು ಒಳಿತು."

-ಸೆಪ್ಟೆಂಬರ್ 8, 1993



ಮೊಬೈಲ್ ಶ್ರೀಮಂತ ಟಾಯ್ಲೆಟ್ ದರಿದ್ರ

ಅಂಕ



ಎಚ್.ಎಲ್. ಕೇಶವಮೂರ್ತಿ

ಸುಮ್ಮನೆ ಸುಳ್ಳು ಅಂದಾಗ ಮೊಬೈಲ್ ನೆನಪಾಗುತ್ತೆ. ಲ್ಯಾಂಡ್ ಲೈನ್ ಇದೆಯಲ್ಲ ಅದ ಬಿಸಾಕಿ ಇದರ ಮುಂದೆ... ಅದ್ರಲ್ಲಿ ಸರಿಯಾಗಿ ಒಂದು ಸುಳ್ಳು ಹೇಳಕ್ಕೂ ಆಗೋಲ್ಲ, ಮನೇಲಿದ್ರೂ ಇಲ್ಲ ಅನ್ನಿಸಿಕೊಳ್ಳೋಕೆ ಎಷ್ಟು ತಾಪತ್ರಯ ಆಗುತ್ತೆ ನೋಡಿ. ಬೇರೆಯವರ ಮೊರೆ ಹೋಗಬೇಕು. ಅವರು ಸರಿಯಾಗಿ ಹೇಳಿದ್ರೆ ಸರಿ. 'ಇಲ್ಲ ಅಂತ ಹೇಳಿದ್ರು' ಅಂತೇನಾದ್ರೂ ಅಂದು ಅಧ್ವಾನ ಮಾಡಿದ್ರೆ ಇಲ್ಲದ ಮುಜುಗರ ಅನುಭವಿಸಬೇಕು. ಇಲ್ಲ ನಾವೇ ಮಿಮಿಕ್ರಿ ಕಲ್ತು ಬೇರೆಯವರ ಧ್ವನೀಲಿ ಮಾತಾಡೋದ ಅಭ್ಯಾಸ ಮಾಡಿರ ಬೇಕು. ಮೊಬೈಲಿನಲ್ಲಿ ಈ ಸಂಕಷ್ಟಗಳೇ ಇರಲ್ಲ, ಮನೇಲಿದ್ರೂ 'ನಾನಿನ್ನೆಲ್ಲೋ ಇದೀನಿ' ಅನ್ನಬಹುದು. 'ಊರಿನಲ್ಲಿದ್ದೀರಾ' ಅಂದ್ರೆ ಇಲ್ಲ ಬೆಂಗಳೂರಲ್ಲೋ ಇನ್ನೆಲ್ಲೋ ಸುಡುಗಾಡಲ್ಲೋ ಇದೀನಿ ಅನ್ನಬಹುದು. ಬಸ್ಸಿನಲ್ಲಿ ಬೆಂಗಳೂರಿಗೆ ಹೋಗ್ತಾ ಇದ್ರೂ 'ಮೈಸೂರಿಗೋಗ್ತಿದೀನಿ' ಅನ್ನಬಹುದು. ಸುಳ್ಳು ಹೇಳುವುದಕ್ಕೆ ಹೇಳಿಮಾಡಿಸಿದ ಸಾಧನೆ ಅಂದರೆ ಮೊಬೈಲು. ಇದನ್ನು 'ಸುಳ್ಳೈಲು' ಅನ್ನಬಹುದೇನೊ! ಮೊಬೈಲಿದ್ದೂ ಸುಳ್ಳು ಹೇಳದ ವ್ಯಕ್ತಿ ಸಿಗಲಾರರು. ಮೊಬೈಲಿದ್ದೂ ಸುಳ್ಳು ಹೇಳದವರ ಕಂಡಿರಾ, ನೀವು ಕಂಡಿರಾ.... ಅದಕ್ಕೇ ಏನೋ ಭಾರತೀಯರಿಗೆ ಅದು ಬಹಳ ಪ್ರಿಯವಾದ ಸಾಧನ ಅಂತೆ!

ಇನ್ನು ಶೌಚಾಲಯಕ್ಕೆ ಬರೋಣ. ಅದಕ್ಕೂ ಇದಕ್ಕೂ ಎತ್ತಣಿಂದೆತ್ತಣ ಸಂಬಂಧವಯ್ಯಾ ಅಂತ ಆತುರಪಡಬೇಡಿ. ಇದೆ. ಮುಂದೆ ಕಾಣಿಸಲಾಗುತ್ತದೆ.

ಹಿಂದೆ ನಮ್ಮ ಪೂರ್ವಿಕರಿಗೆ ಬಯಲೇ ಶೌಚಾಲಯ ಆಗಿತ್ತು, ನಂತರ 'ಆಫೀಸರು' ಹುಟ್ಟಿಕೊಂಡ್ರು. ಬಯಲಿಗೆ ಹೋಗುವುದು ಅವಮಾನ ಅನ್ನಿಸಿತು. ಕಕ್ಕಸು ಮನೆ ಕಟ್ಟಿಸಿದ್ರು. ಅದು ಎಲ್ಲಿತ್ತು ಅಂದರೆ ವಾಸದಮನೆಯ ಅನತಿ ದೂರದಲ್ಲಿ ಕಾಂಪೌಂಡಿನ ಗೋಡೆಗೆ ತಾಗಿದಂತೆ ಇರುತ್ತಿತ್ತು. ಮನೆಯ ಒಳಕ್ಕೆ ಅದರ ಪ್ರವೇಶ ಬಹಳ ದಿವಸಗಳ ನಂತರ ಆಯಿತು. ಆಗಲೂ ಇದು 'ಅನಿವಾರ್ಯ ಅನಿಷ್ಟ'ವೆಂದೇ ಪರಿಗಣಿತವಾಗಿತ್ತು. 3x3 ಅಷ್ಟು ಸ್ಥಳದಲ್ಲಿ ಅದನ್ನು ಕಟ್ಟಲಾಗುತ್ತಿತ್ತು. ಈಗಲೂ ಆದಿರುವ ಬಹಳ ಮನೆಗಳಲ್ಲಿ ಇದಕ್ಕಿಂತಲೂ ಹೆಚ್ಚು ಜಾಗ ಆಕ್ರಮಿಸಲು ಅವಕಾಶ ನೀಡಿಲ್ಲ!

ಇದು ಎಲ್ಲರಿಗೂ ತಿಳಿದಿರುವ ವಿಷಯ. ಇದನ್ನೇ ತಾನೇನೋ ಕಂಡು ಹಿಡಿಯಬಾರದ್ದನ್ನು ಕಂಡಿದ್ದೀನಿ ಅಂತ ವಿಶ್ವಸಂಸ್ಥೆ ಕುಣಿದಾಡ್ತಿದೆ. ಒಂದು ವರದೀನೂ ಪ್ರಕಟಿಸಿದೆ. ಭಾರತದಲ್ಲಿ 366 ದಶಲಕ್ಷ ಶೌಚಾಲಯಗಳಿದ್ದರೂ 544 ದಶಲಕ್ಷ ಸೆಲ್ ಫೋನುಗಳಿವೆ. ಅರ್ಧದಷ್ಟು ಜನ ದೂರವಾಣಿಗಳನ್ನು ಹೊಂದುವಷ್ಟು ಶ್ರೀಮಂತರಾಗಿದ್ದಾರೆ. ಆದರೆ ಅದಕ್ಕೂ ಹೆಚ್ಚುಮಂದಿ ಮೂಲಭೂತ ಅವಶ್ಯಕವಾದ ಶೌಚಾಲಯ ಹೊಂದಿಲ್ಲದಿರುವುದು ದುರಂತ ಎನ್ನುತ್ತದೆ ವರದಿ.

ಅಲ್ರೀ ಇಲ್ಲಿ ದುರಂತ ಏನು ಬಂತು ಅಂತೀನಿ. ಶೌಚಾಲಯ ಇಲ್ದಿದ್ರೆ ಬಯಲಿದೆ. ಮೊಬೈಲೇ ಇಲ್ಲದಿದ್ರೆ ಸಲೀಸಾಗಿ ಸುಳ್ಳನ್ನ ಹೆಂಗ್ರಿ ಹೇಳೋದು...

ಮೋಹಿನಿ ಕಾಟ!

ಅನುಭವಿಸಿದವರಿಗೇ ಗೊತ್ತು ಆ ಕಷ್ಟ ಏನೂಂತ. ಆ ಹಾಳಾದ ಮೋಹಿನಿ ಅಂಬೋಳು ಯಾವ ಯಾವ ರೂಪದಲ್ಲಿ ಬಂದು ಕಾಟ ಕೊಡ್ತಾಳೋ ತಿಳೀದು. ಬಟಾ ಬಯಲಿನಲ್ಲಿ ಅವಳ ಕಾಟ ಇರ್ತದೆ ಅನ್ಕಂಡಿದ್ದೆ. ಬಿಳಿಸೀರೆ ಉಟ್ಕೊಂಡು, ಕೂದಲು ಇಳಿಬಿಟ್ಟು 'ಇನಿಯಾ ಇನಿಯಾ' ಅಂತಾನೋ ಯಾವ್ದೋ ಒಂದು ಹಾಡು ಹೇಳ್ತಾ ಗಂಡಸರನ್ನ ಬಲೆಗೆ ಹಾಕ್ಕೊತಾಳೆ ಅನ್ನೋದ ಸಿನಿಮಾದಲ್ಲಿ ನೋಡಿದ್ದೆ. ಈಗ ನೋಡಿದ್ರೆ ಕಾಡಿನಲ್ಲಿರಬೇಕಾದ ಪ್ರಾಣಿಗಳೆಲ್ಲ ಊರಿಗೆ



ಬಂದು ಪ್ರಾಣ ಹಿಂಡ್ತಾವಲ್ಲ ಹಂಗೆ ಇವಳೂ ಜನನಿಬಿಡ ಪ್ರದೇಶಕ್ಕೆ ಬಂದವ್ಳೆ! ಅದೂ ಮೈಸೂರಿನಲ್ಲಿರುವ ಕಾಲೇಜುಗಳ ಜಂಟಿ ನಿರ್ದೇಶಕರ ಹೊಸ ಕಚೇರಿಗೇ ನುಗ್ಗವ್ಳೆ! ಆಹಾ ಈ ಮೋಹಿನಿ ಕಾಟದಿಂದ ಹೆಂಗೆ ಪಾರಾಗೋದು ಅಂತ ಬಲೇ ತಲೆಕೆಡಿಸಿಕೊಂಡರಂತೆ. ಯಾರು... ಜಂಟಿ ನಿರ್ದೇಶಕರು. ಇದಕ್ಕೆಲ್ಲ ಮದ್ದು ಇರೋದು ಪುರೋಹಿತರ ಹತ್ತಿರ ತಾನೆ. ಅವರತ್ರ ಪರಿಹಾರ ಕೇಳಿದ್ರಂತೆ.

ಪುರೋಹಿತರನ್ನೇ ಯಾಕೆ ಕೇಳಿದ್ರು ಅಂದ್ರೆ..... ಈಗ ಭಾರತಾದ್ಯಂತ ಮಾವೋವಾದಿಗಳ, ಭಯೋತ್ಪಾದಕರ ಉಪಟಳ ಯದ್ವಾಬಿದ್ರಿ ಜಾಸ್ತಿ ಆಗಿದೆ ಅಂತ ಪೇಪರ್ನೋರು ಬರೀತಾ ಕುಂತವ್ರಲ್ಲ, ಅದಿಲ್ಲದಂಗೆ ಮಾಡೋದು ಹೆಂಗೆ ಅಂತ ಗೋವಾದ ಮುಖ್ಯಮಂತ್ರಿ ಅವರು ಶ್ರೀ ರವಿಶಂಕರ್ ಗುರೂಜಿ ಗುರೂಜಿ ಅವರನ್ನ ಕೇಳಿದ್ರಂತೆ. ತಕ್ಷಣವೇ ಗುರೂಜಿ ಒಂದು ಹೋಮ ಮಾಡಿದರೆ ಇವರೆಲ್ಲ ನಾಶ ಆಗ್ತಾರೆ ಅನ್ನೋದನ್ನ ಸೂಚಿಸಿದರಂತೆ. ಸರಿ ವಿನಾಶಕ್ಕೆ ಮದ್ದು ಸಿಗ್ತಲ್ಲ ಅಂತ ಇಬ್ಬರೂ ಹರಿದ್ವಾರಕ್ಕೆ ಹೋದರಂತೆ. ಅಲ್ಲಿ ಹೋಮ ಮಾಡೋಕೆ ಶುರು ಹಚ್ಕಂಡ್ರಂತೆ. ಅದ್ಕೆ 'ನಕ್ಸಲ್ ಹೋಮ', 'ಭಯೋತ್ಪಾದಕ ಹೋಮ' ಅಂತ ಹೆಸರಿಟ್ಟಿದ್ದರೇನೋ ಗೊತ್ತಿಲ್ಲ. ಅಂತೂ ಹೋಮ ಮಾಡುವುದು ಸಕಲ ಸಂಕಷ್ಟಗಳಿಗೂ ಮದ್ದು ಅಂತ ತಿಳ್ದೋಯ್ತು!

ಹಂಗೇನೆ ನಂ ಮೈಸೂರಿನ ಜಂಟಿ ನಿರ್ದೇಶಕರು ಏನು ಮಾಡಿದರಪ್ಪ ಅಂದರೆ ಪುರೋಹಿತರ ಮಾರ್ಗದರ್ಶನದ ಮೇರೆಗೆ ಮೋಹಿನಿ ಕಾಟದಿಂದ ಮುಕ್ತರಾಗಲು ಹೋಮ ಮಾಡಿಸಿದರು. ಹೋಮ ಅಂದ ಮೇಲೆ ಅದಕ್ಕೆ ತಕ್ಕನಾದ ಸಮವಸ್ತ್ರ ಇರಬೇಕು. ಪ್ಯಾಂಟು ಶರಟು ಭೂಷಣ ಅಲ್ಲ, ಸಮಯ ಸಂದರ್ಭಕ್ಕೆ ತಕ್ಕಂತಹ ವೇಷಭೂಷಣಗಳೊಂದಿಗೆ ಹೋಮ ನಡೆಸಿ ಮೋಹಿನಿಗೆ ದಿಗ್ಬಂಧನ ಹಾಕಿಸಿದರು!

ಮೂಢನಂಬಿಕೆ ಹೋಗಲಾಡಿಸಬೇಕಾದ ಶಿಕ್ಷಣ ಇಲಾಖೆ ಮೌಢ್ಯದ ಆರಾಧನೆ ಮಾಡುತ್ತಿರುವುದು ಅಕ್ಷಮ್ಯ ಎನ್ನುವುದು ಕೆಲವರ ವಾದ.

ಅವರಿನ್ನೂ ಮೋಹಿನಿಕಾಟದ ರುಚಿ ನೋಡಿಲ್ಲ. ನೋಡಿದ್ದರೆ ಇಂತಹ ಮಾತು ಅವರ ಬಾಯಿಂದ ಹೊರಡುತ್ತಿರಲಿಲ್ಲ ಎಂದು ಜಂಟಿ ನಿರ್ದೇಶಕರ ಕಚೇರಿ ಹೇಳಿಕೆಯನ್ನು ಯಾಕೋ ಇನ್ನೂ ನೀಡಿಲ್ಲ.....

ಧರ್ಮವೇ ಪ್ರಭುತ್ವವಾಗತೊಡಗಿದಾಗ...

ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸಲು ಹೊರಟ ರೀತಿ ಅಥವಾ ತಾನೇ ಪ್ರಭುತ್ವವಾಗುವ ಅದರ ಹವಣಿಕೆ ರಾಜ್ಯ ರಾಜಕಾರಣದಲ್ಲಿ ಶುರುವಾಗಿದೆ. ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸುವುದೆಂದರೆ ಇಡೀ ಜನಸಮುದಾಯದ ಜೀವನದ ಮೇಲೆ ನಿಯಂತ್ರಣ ಸಾಧಿಸಿದಂತೆಯೇ. ಪ್ರಭುತ್ವವನ್ನು ನಿಯಂತ್ರಿಸುವ ಧರ್ಮ ಯಾವತ್ತೂ ಕ್ರಿಯಾಶೀಲತೆಯ ವಿರುದ್ಧವಾಗಿದ್ದು, ಜನತೆಯ ಹಕ್ಕುಗಳನ್ನು ನಿರಾಕರಿಸುತ್ತದೆ. ಕಳೆದ ವಿಧಾನಸಭಾ ಅಧಿವೇಶನದಲ್ಲಿ ಮಂಡನೆಯಾಗಿರುವ ಸಂಪೂರ್ಣ ಗೋಹತ್ಯೆ ನಿಷೇಧವೇ ಇದಕ್ಕೆ ಒಂದು ಉದಾಹರಣೆಯಾಗಿದೆ.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಜನರ ಸಮಸ್ಯೆಗಳಿಗೆ ಸ್ಪಂದಿಸದೇ, ಸಂಘ ಪರಿವಾರದ ಹಿಡನ್ ಅಜೆಂಡಾಗಳನ್ನು ಜಾರಿಗೆ ತರುತ್ತಿರುವ ಬಿಜೆಪಿ ಸರ್ಕಾರ, ಅದರ ಭಾಗವಾಗಿಯೇ ಈಗ ಸಂಪೂರ್ಣ ಗೋಹತ್ಯೆ ನಿಷೇಧ ಮಸೂದೆಗೆ ಕೈ ಹಾಕಿದೆ. ದನಕರುಗಳನ್ನು ಸಾಕಿ, ಪೋಷಿಸಿ ತಮ್ಮ ಕೃಷಿ ಕಾರ್ಯಗಳಿಗೆ ಅವುಗಳನ್ನು ಬಳಸಿಕೊಳ್ಳುವ ರೈತರು, ಅವು ಅನುಪಯುಕ್ತ ಎನಿಸಿದಾಗ ಮಾತ್ರ ಮಾರುತ್ತಾರೆ. ದನಕರುಗಳು ಸಾಕುವವರ ಸ್ವತ್ತಾಗಿವೆ. ಹಾಗೆಯೇ ದನದ ಮಾಂಸದ ಸೇವನೆ ದಲಿತ ಅಲ್ಪಸಂಖ್ಯಾತರ ಆಹಾರಕ್ರಮವೇ ಆಗಿದೆ. ಈಗ ದನಕರುಗಳನ್ನು 'ಗೋಮಾತೆ'ಯ ಹೆಸರಲ್ಲಿ ಎಳೆದುತಂದು ಅನಗತ್ಯವಾಗಿ ಸಾಮಾಜಿಕ ಕ್ಷೋಭೆಯುಂಟು ಮಾಡಲು ಹವಣಿಸುತ್ತಿರುವ ಬ್ರಾಹ್ಮಣ್ಯವನ್ನು ಸಮಸ್ತ ಸಮುದಾಯಗಳು ವಿರೋಧಿಸಬೇಕಿದೆ.

ಗೋಹತ್ಯೆ ನಿಷೇಧ ಕೇವಲ ಭಾವನಾತ್ಮಕ ವಿಷಯವಾಗಿರದೇ, ದೇಶದ ಆರ್ಥಿಕತೆಯ ಮೇಲೆ, ಅದರಲ್ಲೂ ಕೃಷಿ ಹಾಗೂ ಕೃಷಿ ಸಂಬಂಧಿ ಕ್ಷೇತ್ರಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡಲಿದೆ. ಗೋಹತ್ಯೆ ಎಂಬ ಪರಿಭಾಷೆಯೇ ಅಪಾಯಕಾರಿಯಾದದ್ದು. ಕುರಿ, ಕೋಳಿಗಳ ವಿಷಯದಲ್ಲಿ ಬಳಕೆಯಾಗದ 'ಹತ್ಯೆ' ಎಂಬ ಪದವನ್ನು ಕೇವಲ ದನದೊಂದಿಗೆ ಸಮೀಕರಿಸುವುದರ ಹಿಂದೆ ಸನಾತನ ಮನಸ್ಸುಗಳ ಸಂಚಿದೆ. ಹೀಗೆ ತನ್ನ ಬ್ರಾಹ್ಮಣ್ಯವನ್ನು ಇಡೀ ಸಮಾಜದ ಮೇಲೆ ಹೇರಲು ಹೊರಟಿರುವ ಫ್ಯಾಸಿಸ್ಟ್ ಸಂಘಪರಿವಾರ, ತನ್ನ ಬಲವನ್ನು ವೃದ್ಧಿಸಿಕೊಳ್ಳಲು ಹಳೆಯ ಕಲ್ಪಿತ ಪುರಾಣಗಳನ್ನು, ಸ್ಮೃತಿಗಳನ್ನು ವೈಭವೀಕರಿಸುತ್ತಿದೆ.

ಹೀಗೆ ಧರ್ಮವೊಂದು ಪ್ರಭುತ್ವದ ಮೇಲೆ ಹಿಡಿತ ಸಾಧಿಸಿದಾಗ ಉಂಟಾಗಬಹುದಾದ ಅಪಾಯಗಳನ್ನು ನಾವಿಂದು ಮನಗಂಡು ಧರ್ಮವನ್ನು ರಾಜಕೀಯದಿಂದ ದೂರವಿಟ್ಟು ಜೀವಪರ ರಾಜಕಾರಣಕ್ಕೆ ಮುಂದಾಗಬೇಕಿದೆ. ಬ್ರಾಹ್ಮಣ್ಯ ನಿರ್ನಾಮವಾಗದೇ ಸರ್ವಸಮಾನತೆಯ ಭಾರತದ ನಿರ್ಮಾಣ ಅಸಾಧ್ಯ. ಆದ್ದರಿಂದ ಸಮಾಜದ ಸಮಸ್ತರೆಲ್ಲ ಸೇರಿ ಇಡೀ ಭಾರತದಿಂದಲೇ ಈ ಬ್ರಾಹ್ಮಣ್ಯವನ್ನು ಹೊರಹಾಕಬೇಕಿದೆ.

-ಎಸ್. ಮಹದೇವ, ಗಾಯತ್ರಿನಗರ, ಬೆಂಗಳೂರು

ಹೊಗಳಿಕೆ ತೆಗಳಿಕೆ

ಹಳ್ಳಿಹೈದಂಗೆ ಹಾಡಿನ ಪ್ರಶಸ್ತಿ

"ಜಣ ಜಣ ಕಾಂಚಾಣದಲ್ಲಿ
ಅಮೆರಿಕಾದ ಲಾಂಛನದಲ್ಲಿ....
ಎಲ್ಲಾ ಮಾಯಾ
ನಾಳೆ ನಾವೂ ಮಾಯ...."

ಹೀಗೆ ಚಳವಳಿಯ ಹಾಡುಗಳನ್ನು ಬರೆಯುತ್ತ ಬಂದ ನಮ್ಮ ಕೋಲಾರದ ಹಳ್ಳಿಹೈದ ಗೊಲ್ಲಹಳ್ಳಿ ಶಿವಪ್ರಸಾದ್ 'ಮಾತಾಡ್ ಮಾತಾಡ್ ಮಲ್ಲಿಗೆ' ಚಿತ್ರಕ್ಕಾಗಿ 2007-08ರ ಅತ್ಯುತ್ತಮ ಗೀತರಚನಾಕಾರ ಪ್ರಶಸ್ತಿ ಪಡೆದಿದ್ದು ನನ್ನಲ್ಲಿ ಹಳೆಯ ನೆನಪುಗಳನ್ನು ಮರುಕಳಿಸುತ್ತಿದೆ.

ಕೋಲಾರ ಜಿಲ್ಲೆ ಅಥವಾ ದೇಶದ ಎಲ್ಲೇ ಆಗಲಿ ಬಡವರ ಗುಡಿಸಲು ಸುಟ್ಟರೆ, ಹೆಂಗೆಳೆಯರ ಮೇಲೆ ದೌರ್ಜನ್ಯ ನಡೆದರೆ ನಾಡಿನ ಮೂಲೆಮೂಲೆಯಿಂದ ಬರುತ್ತಿದ್ದ ದ.ಸಂ.ಸ ಕಾರ್ಯಕರ್ತರ ಮುಂದೆ ಶಿವಪ್ರಸಾದ್ ಹಾಡುತ್ತಿದ್ದ, ತಾನೇ ರಚಿಸಿದ ಜೀವಕಾವ್ಯವನ್ನು ಬೆಂಕಿಯಂತೆ ಹಾಡುತ್ತಿದ್ದ.

ಜಾಥಾ ಎಲ್ಲೇ ಇರಲಿ ಕಿಕ್ಕಿರಿದು ಸೇರುತ್ತಿದ್ದ ದಲಿತರು. ಅವು ದಸಂಸನ ಉಚ್ಛ್ರಾಯದ ದಿನಗಳು. ಬಂದ ಜನರೆಲ್ಲ ಅಲ್ಲೇ ಒಲೆ ಹೂಡಿ ಅಡುಗೆ ಮಾಡಿ ತಿಂದು ಘೋಷಣೆ ಹಾಕುತ್ತಿದ್ದರು. ಗದ್ದಂ ವೆಂಕಟೇಶ್, ರಾಮಣ್ಣ ಮಾಸ್ತರು, ಕವಿ ಕೆ. ರಾಮಯ್ಯ, ಲಕ್ಷ್ಮೀಪತಿ ಕೋಲಾರ- ಹೀಗೆ ಸಾವಿರಾರು ತರುಣರ ಗುಂಪುಗಳು ನೆರೆಯುತ್ತಿದ್ದವು. ಹೆಣ್ಣುಮಕ್ಕಳ ಸಂಖ್ಯೆಯೇನೂ ಕಡಿಮೆ ಇರುತ್ತಿರಲಿಲ್ಲ, ಹೀಗೆ ಸೇರಿದ ಸಮುದಾಯದ ಒಡಲಾಳದಿಂದ ಶಿವಪ್ರಸಾದನ ಹಾಡುಗಳು ತೇಲಿಬರುತ್ತಿದ್ದವು. ನಾವೆಲ್ಲ 'ಎಲ್ಲ ಮಾಯ' ಎಂದು ಸೊಲ್ಲಿಡುತ್ತಿದ್ದೆವು.

ಈಗ ಅದೇ ಹಾಡಿಗೆ ಶಿವಪ್ರಸಾದ್ ಪ್ರಶಸ್ತಿ ಸ್ವೀಕರಿಸಿದ್ದಾನೆ. ಟಿ.ವಿ.ಯಲ್ಲಿ ಅದನ್ನು ನೋಡಿ ನಾವು ಖುಷಿ ಪಟ್ಟಿದ್ದೇವೆ.

ಈ ಜಗದ ನೋವಿಗೆ ಮಿಡಿವ, ಈ ಜಗದ ಅನ್ಯಾಯವ ಬೆತ್ತಲುಗೊಳಿಸುವ ಗೊಲ್ಲಹಳ್ಳಿ ಶಿವಪ್ರಸಾದ್ ಇನ್ನಷ್ಟು ಬೆಳೆಯಲಿ....

-ಉತ್ತನೂರು ರಾಜಮ್ಮ ವಿ.ಶೆಟ್ಟಿ, ಚಿಂತಾಮಣಿ


ಬೇಸರ ತಂದ ಕವಿಯ ಸಾವು

ದಿನಾಂಕ 10.5.2009 ರಂದು ತುಮಕೂರು ಸಿದ್ದರಬೆಟ್ಟದಲ್ಲಿ ಆಯೋಜಿಸಿದ್ದ 'ಆದಿ ಜಂಬು ಸಂಸ್ಕೃತಿ' ಚಿಂತನ ಶಿಬಿರದಲ್ಲಿ ಭಾಗವಹಿಸಿದ್ದ ಎನ್.ಕೆ. ಹನುಮಂತಯ್ಯ- "ಶತಶತಮಾನಗಳಿಂದ ಉಳ್ಳವರ ದರ್ಪಕ್ಕೆ ಈಡಾಗಿ ವಿವಿಧ ಸಂಕೋಲೆಗಳಿಂದ ಬದುಕುತ್ತಿರುವ ನಿಕೃಷ್ಟ ಜಾತಿಗಳು, ಜನಗಳು ಎಚ್ಚರಗೊಂಡು ಜಾಗೃತರಾಗಿ ಸಂಘಟಿತರಾದರು. ಈ ಕಾರಣಕ್ಕಾಗಿ ಜಾತಿ ಸಂಘಟನೆಗಳು ಹುಟ್ಟಬೇಕು; ಆ ಜಾತಿಗಳ ಬುಡಮಟ್ಟದ ಚಾರಿತ್ರಿಕ ಮಹತ್ವವನ್ನು ಅರಿಯುವ ಕೆಲಸವಾಗಬೇಕು; ಇದರಿಂದ ಆಣತಿಗಳ ಜನಕ್ಕೆ ತಮ್ಮದೂ ಇಷ್ಟು ಅಗಾಧವಾದ ಸಾಂಸ್ಕೃತಿಕ ಪರಂಪರೆ ಹೊಂದಿದೆ-ಎಂಬುದು ತಿಳಿಯಬೇಕು; ಹಾಗೆ ತಿಳಿಯಬೇಕಾದರೆ ಆ ನೋವುಂಡ ಜನರನ್ನು ಒಗ್ಗೂಡಿಸಬೇಕು; ಜಾತಿಯ ಕೀಳರಿಮೆ ಬಿಡಿಸಬೇಕು; ಹಾಗೆ ಮಾಡುವ ಸಂದರ್ಭದಲ್ಲಿ ಅನ್ಯಜಾತಿಗಳು ಮುಜುಗರಕ್ಕೆ ಒಳಗಾಗದ ಹಾಗೆ ಅವರಿಗೆ ಅವಮಾನವಾಗದ ಹಾಗೆ ನಮ್ಮ ಸ್ವಾಭಿಮಾನದ ಬದುಕಿಗಾಗಿ ಒಗ್ಗೂಡಿಸುವ ಪ್ರಯತ್ನವಾಗಬೇಕು; ಈ ಒಗ್ಗೂಡುವಿಕೆ-ವೈಶಾಲ್ಯತೆಯ ಮನೋಭಾವದಿಂದ ಹುಟ್ಟದಂತಿರಬೇಕು. ಈಗ 'ಮಠಗಳು ಅಣೆಕಟ್ಟೆಗಳಾಗಿ' ಒಗ್ಗೂಡುವಿಕೆಯಲ್ಲಿ ಯಾವ ಪಾತ್ರ ವಹಿಸುತ್ತಿವೆಯೋ ಹಾಗೆ 'ಜಾತಿ ಒಗ್ಗೂಡಿ' ಅಭಿವೃದ್ಧಿ ಪಥದತ್ತ ಸಾಗಿ ಮುಖ್ಯವಾಹಿನಿಯಲ್ಲಿ ಮುಖ್ಯವಾಗಿ ನಿಲ್ಲಬೇಕು" ಎಂದಾಗ ನಾನು ಸಿಟ್ಟುಗೊಂಡು-"ಅಂದ್ರೆ ಯಾವುದನ್ನು ದೂರೀಕರಿಸಿ ಪರ್ಯಾಯವಾಗಿ ಆಲೋಚಿಸಿ ಸಮಾಜಕಟ್ಟುವ ಕೆಲಸ ಆಗಬೇಕು ಅನ್ನುತ್ತೀವೋ ಅಂಥವರು ಮಠ ಸಂಸ್ಕೃತಿಗೆ ಶರಣಾಗಬೇಕು ಅಂತೀರಾ...? ನಿಮ್ಮ ದೃಷ್ಟಿಯಲ್ಲಿ ಮಠ ಸಂಸ್ಕೃತಿ ಇರಲಿ ಅಂತೀರಾ...? ಮಠಗಳು ಸ್ವಾಮೀಜಿಗಳಿಗೆ ನಮ್ಮನ್ನು ಮಾರಿಕೊಳ್ಳಬೇಕು ಅಂತೀರಾ...." ಅಂದೆ.

ಅದಕ್ಕೇ ಅವರು "ಇಲ್ಲ ಇಲ್ಲ.... ನಾ ಹಾಗಂತ ಹೇಳಲಿಲ್ಲ, ಸುಮ್ಮನೆ ಝರಿಯಂತೆ ಕೆಳಭಾಗಕ್ಕೆ ಒಂಟಿಯಾಗಿ ಕವಲು ಕವಲು ಸಣ್ಣಗೆ ಹರಿದುಹೋಗುವ ನೀರಿಗೆ ಅನುಸರಿಸಿ ಅಣೆಕಟ್ಟು ಕಟ್ಟಿ ಆ ನೀರು ಸಂಗ್ರಹಣೆಯಾಗಿ ಮುಂದೆ ಹೇಗೆ ಅದು ಅನುಕೂಲಕರವಾಗಿ ಜೀವವಾಹಿನಿಯಾಗುತ್ತದೋ ಹಾಗೆ ಜಾತಿಯ ಸಾಂಸ್ಕೃತಿಕ ಪರಂಪರೆ ಮಹತ್ವವನ್ನು ತಿಳಿಯದೆ ದಿಕ್ಪಾಪಾಲು ಇರುವವರನ್ನು ಒಗ್ಗೂಡಿಸಿ ಅಂದರೆ ಇವತ್ತಿನ ಮಠಗಳು ಸ್ವಾಮೀಜಿಗಳ ಬಗ್ಗೆ ನಾ ಹೇಳ್ತಾ ಇಲ್ಲ, ಮಠ ಅನ್ನೋ ಕಲ್ಪನೆಯೇ ಬೇರೆ. ಅದರ ಮಹತ್ವವೇ ಬೇರೆ. ಇಂದು ಮಠಗಳು ಅಂದರೆ ವಾಕರಿಕೆ ಬರ್ತದೆ. ಸ್ವಾಮೀಜಿ ಅಂದರೆ ಕೆಟ್ಟ ವಾಸನೆ ಬರ್ತದೆ. ನಾನು ಹೇಳ್ತಾ ಇರೋದು ಅಲ್ಲಮನ ಮನಸ್ಸು ಧ್ಯಾನಸ್ಥ ಪರಂಪರೆ ಇದೆಯಲ್ಲಾ, ಬಸವಣ್ಣನ 12ನೇ ಶತಮಾನದ ಕ್ರಾಂತಿಯಾಯ್ತಲ್ಲ, ಅನುಭವ ಮಂಟಪದಂತಹ ಸಾಂಸ್ಕೃತಿಕ ಪರಂಪರೆಯ ಮಾದರಿ ರೀತಿಯಲ್ಲಿ ನೋವುಂಡಜಾತಿಗಳು ಸಂಘಟನೆಯಾಗಬೇಕು. ಇದರ ಹೊರತು ಸ್ವಾರ್ಥ, ಅಧಿಕಾರಲಾಲಸೆ, ಇಂಥವೇ ಇರುವ ಯಾವುದೇ ಸಂಘಟನೆ ತನ್ನ ಗುರಿಮುಟ್ಟಲು ಸಾಧ್ಯವಿಲ್ಲ, ಅಂಥವುಗಳಿಗೆ ಭವಿಷ್ಯವಿಲ್ಲ, ಈ ನಿಟ್ಟಿನಲ್ಲಿ ದಸಂಸದ ಕವಲುಗಳನ್ನು ನೋಡಿದರೆ ನನಗೆ ಹೀಗನ್ನಿಸಿದ್ದು ನಿಜ"-ಎಂದ ಸೃಜನಶೀಲ ಕವಿ, ಚಿಂತಕ ಎನ್.ಕೆ. ಹನುಮಂತಯ್ಯನವರ ಸಾವಿನ ವಿಚಾರ ಪತ್ರಿಕೆಗಳಲ್ಲಿ ನೋಡಿ ಬೇಸರವಾಯ್ತು.

ಇದು ನಿಜವೇ ಎಂದು ತಿಳಿದುಕೊಳ್ಳಲು ಕೆಲವು ಮಿತ್ರರಿಗೆ ಹಿತೈಷಿಗಳಿಗೆ ಫೋನಾಯಿಸಿದೆ. ಎಂಥ ಸುದ್ದಿ! 'ಹೊಲಗೇರಿ ಹಾದಿಯಲಿ ಸೋಬಾನೆ ದೀಪಗಳು' ಇದು ಅವರ ಸಂಕ್ಷಿಪ್ತ ಆತ್ಮಕಥೆ. ಕೋಟಿಗಾನಹಳ್ಳಿ ರಾಮಯ್ಯನವರ 'ತಲಪರಿಗೆ' ಸಿದ್ಧವಾಗುತ್ತಿದ್ದ ಸಂದರ್ಭದಲ್ಲಿ ಗಮನಿಸಿದ್ದೆ. 'ತಲಪರಿಗೆ'ಯಲ್ಲಿ ಸೇರ್ಪಡೆಗೊಂಡು ಗಮನ ಸೆಳೆದ ಬಹುಮುಖ್ಯ ಆತ್ಮಕಥನ; ಹುಟ್ಟನಿಂದಲೂ ಕಷ್ಟಗಳೇ ಪ್ರೀತಿಯಿಂದ ಹುಡುಕಿಕೊಂಡು ಬಂದು ಅವರನ್ನು ತಬ್ಬಿದಿದು ಅದುಮಿ ಹಿಸುಕಿ ಹಿಸುಕಿ ಸಾವಿನ ಕೂಪಕ್ಕೆ ನೂಕಿದಂತಿದೆ ಅನ್ನಿಸಿ ನೋವಾಗುತ್ತಿದೆ.

-ಎಂ. ಜವರಾಜ್, ಬೈರಾಪುರ



...ಜ್‌ಜಯಂತಿ... ...ಡ್ಡಿ ಪಾಲಿಟಿಕ್ಸ್!

...ಇದು ಸರಿನಾ? ತಪ್ಪಾ? ಗೊತ್ತಿಲ್ಲ, ಅಣ್ಣಾವ್ರ ಹುಟ್ಟಿದ ...ವನ್ನು ಅಧಿಕೃತವಾಗಿ ಈ ವರ್ಷದಿಂದಲೇ ರಾಜ್ಯ ಸರ್ಕಾರ ...ಸಲು ನಿರ್ಧರಿಸಿದೆ. ಹೀಗಾಗಿ ಬರುವ ಏಪ್ರಿಲ್ 24ರಂದು ...' ಜಯಂತಿ' ಎಂಬ ಕಾರ್ಯಕ್ರಮವನ್ನು ಸರ್ಕಾರ ...ಕೊಂಡಿದೆ. ಅಂದು ಬೆಳಗ್ಗೆ ಮುಖ್ಯಮಂತ್ರಿ ...ಯೂರಪ್ಪ ಕಂಠೀರವ ಸ್ಟುಡಿಯೋದಲ್ಲಿರುವ ... ಸಮಾಧಿಗೆ ಪುಷ್ಪಗುಚ್ಛವನ್ನು ಅರ್ಪಿಸಿ ...ರ್ಪಣೆ ಸಲ್ಲಿಸಲಿದ್ದಾರೆ. ಅಲ್ಲಿಂದ ಅಣ್ಣಾವ್ರ ...ಗೆ ಹೋಗಿ ಒಂದಿಷ್ಟು ಮಾತುಕತೆ. ...ಸಂಜೆ ಕಾಲ ರವೀಂದ್ರ ಕಲಾಕ್ಷೇತ್ರದಲ್ಲಿ ವಾರ್ತಾ ...ಇಲಾಖೆಯವರೇ ಸಾದರಪಡಿಸಿರುವ ಕಾರ್ಯ...ದಲ್ಲಿ ಮುಖ್ಯಮಂತ್ರಿ ಯಡ್ಡಿ ಭಾಗ...ಸಲಿದ್ದಾರೆ. ಆದರೆ ಮುಂದಿನ ವರ್ಷ ದಿಂದ ...ರೇ ಮುಖ್ಯಮಂತ್ರಿ ಸ್ಥಾನದಲ್ಲಿದ್ದರೂ, ಅವರೂ ... ಏಪ್ರಿಲ್ 24ರಂದು ರಾಜ್ ಸಮಾಧಿಗೆ ... ಗೌರವ ಸಲ್ಲಿಸಲೇ ಬೇಕಾಗುತ್ತದೆ.


...ಆದರೆ ಇದೆಲ್ಲ ಬೇಕಿತ್ತಾ? ಕಲಾವಿದನೊಬ್ಬನ ಹುಟ್ಟಿದ ...ವನ್ನು ಅಂಬೇಡ್ಕರ್ ಜಯಂತಿ, ಗಾಂಧಿ ಜಯಂತಿಯಂತೆ ...ಚರಿಸುವ ಅಗತ್ಯವಿತ್ತಾ? ಇದರಿಂದಾಗುವ ಪ್ರಯೋಜನವೇನು? ...ಸಾಮಾನ್ಯರಿಗೇನು ಉಪಯೋಗ? ಚಲನಚಿತ್ರೋದ್ಯಮಕ್ಕೆ ... ಲಭ?

...ಇದೆಲ್ಲದರ ಹಿಂದೆ ರಾಜ್ ಅವರ ಬಗ್ಗೆ ಯಡಿಯೂರಪ್ಪ ...ಅವರ ಬಿಜೆಪಿ ಪಕ್ಷಕ್ಕೆ ಇರುವ ಅಭಿಮಾನಕ್ಕಿಂತ 'ರಾಜ್ ...ಜಯಂತಿ'ಯನ್ನು ಆಚರಿಸುವ ಮೂಲಕ ರಾಜಕೀಯ ಲಾಭ ...ಪಡೆಯುವ ಉದ್ದೇಶವಂತೂ ಎದ್ದುಕಾಣುತ್ತದೆ.

...ಸುಮಾರು ಐದು ದಶಕಗಳ ಕಾಲ ಕನ್ನಡ ಸಿನಿಮಾ ಲೋಕದಲ್ಲಿ ...ಸಾರ್ವಭೌಮತ್ವವನ್ನು ಪ್ರದರ್ಶಿಸಿದ ಈ ನಟ, ತೆರೆಯ ಹೊರಗೂ ...ನಡೆ-ನುಡಿ ಮತ್ತು ಸಂಸ್ಕೃತಿಯಿಂದ ಎಲ್ಲರ ಮನಸ್ಸನ್ನು ಗೆದ್ದಿದ್ದರು. 'ಮಯೂರ', 'ಶ್ರೀಕೃಷ್ಣದೇವರಾಯ' ತರಹದ ಐತಿಹಾಸಿಕ ಚಿತ್ರಗಳು, 'ಭಕ್ತಕುಂಬಾರ', 'ಬೇಡರ ಕಣ್ಣಪ್ಪ' ತರಹದ ಭಕ್ತಿ ಪ್ರಧಾನ ಪಾತ್ರ ಪಾತ್ರಗಳ ಮೂಲಕ ಕನ್ನಡ ಜನರ ಮನಸ್ಸನ್ನು ಸೂರೆಗೊಂಡಿದ್ದರು ರಾಜ್. ಅನಂತರ ತನ್ನ ಮಾಧುರ್ಯಪೂರ್ಣ ಕಂಠದಲ್ಲಿ ಹಾಡುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದರು.

ಈ ಬೆಳ್ಳಿ ತೆರೆಯ ಪಾತ್ರಗಳ ವೈಭವ ಮತ್ತು ಪ್ರಭಾವದ ಹೊರತಾಗಿ ಡಾ.ರಾಜ್ ಕರ್ನಾಟಕದ ಜನಸಾಗರದ ಮನಗೆದ್ದದ್ದು ಗೋಕಾಕ್ ಚಳವಳಿಯ ಸಂದರ್ಭದಲ್ಲಿ. ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಪ್ರಾಮುಖ್ಯತೆ ಸಿಗಬೇಕು ಎಂದು ರಾಜ್ ನೇತೃತ್ವದಲ್ಲಿ ಕಲಾವಿದರು ಬೀದಿಗಿಳಿದಾಗ 'ಕನ್ನಡದ ಆಪತ್ಬಾಂಧವ'ನ ತರಹ ರಾಜ್ ಕಾಣಿಸಿಕೊಂಡರು. ಇಷ್ಟೆಲ್ಲಾ ಆದರೂ ಬೇರೆ ನಟನಟಿಯರಂತೆ ಯಾವುದೇ ರಾಜಕೀಯ ಪಕ್ಷದ ಕಡೆಗೆ ವಾಲದೆ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡಿದ್ದರು ರಾಜ್‌ಕುಮಾರ್.

ಇಂತಹ ಮೇರು ವ್ಯಕ್ತಿಯ ನೆನಪಿನಲ್ಲಿ 'ರಾಜ್ ಜಯಂತಿ' ಮಾಡುವ ಮೂಲಕ ಅವರ ಅಭಿಮಾನಿಗಳನ್ನು ತಮ್ಮ ಪಕ್ಷದತ್ತ ಸೆಳೆಯುವುದೇ ಯಡ್ಡಿಯ ರಾಜಕೀಯ ಲೆಕ್ಕಾಚಾರ! ಇದು ಆಧಾರ ರಹಿತ ಆರೋಪವೇನಲ್ಲ. ರಾಜ್ ಸಮಾಧಿಗೆ ಕಂಠೀರವದಲ್ಲಿ ಜಾಗವನ್ನು ನೀಡಿದ್ದು ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ. ಆದರೆ ಅಲ್ಲಿ ಸಮಾಧಿ ಕಟ್ಟಲು ಹಣವನ್ನು ಬಿಡುಗಡೆ ಮಾಡಲು ಕುಮಾರಸ್ವಾಮಿ ಮೀನಾ-ಮೇಷ ಮಾಡಿದ್ದರು. ಆದರೆ ಯಡ್ಡಿ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ ಕೂಡಲೇ ಅಲ್ಲಿ ಸಮಾಧಿ ಕಟ್ಟುವ ಕೆಲಸಕ್ಕೆ ಹಣವನ್ನು ನೀಡಿದರು. ಈಗ 'ರಾಜ್ ಜಯಂತಿ'ಯನ್ನು ಆಚರಿಸಿ ತಮ್ಮ 'ರಾಜ್' ನಿಷ್ಠೆಯನ್ನು ಪ್ರದರ್ಶಿಸಿ ಆ ಮೂಲಕ ರಾಜಕೀಯ ಲಾಭ ಪಡೆಯಲು ಯಡ್ಡಿ ಅಂಡ್ ಗ್ಯಾಂಗ್ ಸಿದ್ಧವಾಗುತ್ತಿದೆ.



ಸರ್ಕಾರ ರೂಪಿಸಿರುವ ಈ 'ರಾಜ್ ಜಯಂತಿ' ಕಾರ್ಯಕ್ರಮವಾದರೂ ಹೇಗಿದೆ ಎಂದು ನೋಡಿದರೆ ಬೇಸರವಾಗುತ್ತದೆ. ಯಡ್ಡಿ, ಕಟ್ಟಾ, ಅಶೋಕ್, ಹೇಮಚಂದ್ರ ಸಾಗರ್, ಮುಖ್ಯಮಂತ್ರಿ ಚಂದ್ರು, ಜಗ್ಗೇಶ್, ಶ್ರೀನಾಥ್, ಪಿ.ಸಿ.ಮೋಹನ್ ತರಹದ ರಾಜಕಾರಣಿಗಳಲ್ಲದೆ, ಚಿತ್ರರಂಗದಿಂದ ಪಾರ್ವತಮ್ಮ ಮತ್ತು ಜಯಮಾಲಾ ಹಾಗೂ ಸಾಹಿತಿ ನಿಸಾರ್ ಅಹಮದ್ ಅವರ ಉಪಸ್ಥಿತಿಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ರಾಜ್ ಅಭಿನಯದ ದೃಶ್ಯಾವಳಿಗಳ ಪ್ರದರ್ಶನ, ಹಾಡುಗಳ ಗಾಯನ ಮತ್ತು ಜನಪ್ರಿಯ ಗೀತೆಗಳ ನೃತ್ಯಪ್ರದರ್ಶನವಿದೆ.

ಇದೇನು ಓರ್ವ ಮೇರು ನಟನ ಜನ್ಮದಿನಾಚರಣೆಯೋ ಅಥವಾ ಯಾವುದೋ ಟಿವಿ ಚಾನೆಲ್ ನಡೆಸಿಕೊಡುವ ಕಳಪೆ ರಿಯಾಲಿಟೀ ಶೋನೋ ಗೊತ್ತಾಗುತ್ತಿಲ್ಲ.

ರಾಜ್‌ಕುಮಾರರ ನೆನಪಲ್ಲಿ ಇಂತಹ ಕಾರ್ಯಕ್ರಮ ಮಾಡುವುದು ಅವರಿಗೆ ಸಲ್ಲಿಸುವ ಗೌರವವಂತೂ ಅಲ್ಲ, ಬದಲಾಗಿ ಅವರ ಹೆಸರಲ್ಲಿ ರಾಜಕೀಯ ಲಾಭಕ್ಕಾಗಿ ಮಾಡುತ್ತಿರುವ ದುಷ್ಟ ಕೆಲಸ ಎಂಬುದಂತೂ ಸ್ಪಷ್ಟ. ಇದನ್ನು ಮೆಚ್ಚುವುದಕ್ಕಿಂತ ರಾಜ್ ಅಭಿಮಾನಿಗಳು ಬಿಜೆಪಿಗಳ ಈ ಕುತಂತ್ರವನ್ನು ಅರಿತು ಅದನ್ನು ಗಟ್ಟಿಯಾಗಿ ಖಂಡಿಸಬೇಕಿದೆ.

• ಶೆಣೈ

shenoylankesh@gmail.com

...ಕ್ಷಿತಾ 'ಸ್ವಯಂವರ'ದಲ್ಲಿ ನಕಲಿ ವಧುಗಳು!

...ವರ್ಣ ಟೀವಿಯಲ್ಲಿ ಬರುತ್ತಿರುವ ರಕ್ಷಿತಾಳ 'ಸ್ವಯಂವರ' ...ಹೋಗುವ ಸಾಧ್ಯತೆ ಕಾಣುತ್ತಿದೆ...

...ಆರಂಭದಲ್ಲಿ ಈ ಕಾರ್ಯಕ್ರಮದ ಬಗ್ಗೆ ಸಿಕ್ಕಾಪಟ್ಟೆ ...ಳಿದ್ದವು. ಕನ್ನಡದ ಮಟ್ಟಿಗೆ ಹೊಸ ಕಾನ್ಸೆಪ್ಟ್ ಹೊಂದಿದ್ದ ...ಯಾಲಿಟಿ ಪ್ರೋಗ್ರಾಂ ಬೇರೆಲ್ಲ ಕಾರ್ಯಕ್ರಮಗಳ ಟಿಆರ್‌ಪಿ ...ಬಹುದು ಎಂಬ ಲೆಕ್ಕ ಕಿರುತೆರೆಯಲ್ಲಿತ್ತು.

...ಕಲಿ ವಧುಗಳು...!




...ಕಾರ್ಯಕ್ರಮದ ಮೂಲಕ ...ಯಾಗಲು ಯಾವ ಹೆಣ್ಣುಮಕ್ಕಳೂ ... ಬರುತ್ತಿಲ್ಲ, ಹುಡುಗರು ಮಾತ್ರ ನಿಂತಿದ್ದಾರೆ. ಛಾನೆಲ್‌ನವರು ...ಕ್ರಮವನ್ನು ನಡೆಸಲೇಬೇಕಾದ ...ರ್ಯತೆಗಾಗಿ ಎಂಥಾ ಪಾಕಡಾ ...ಮಾಡಿದ್ದಾರೆ ಗೊತ್ತೆ? ಚಿತ್ರರಂಗದಲ್ಲಿ ...ವಾಗಿ ಸಿಗುವ ಜೂನಿಯರ್ ...ಗಳನ್ನೇ ಕಾರ್ಯಕ್ರಮಕ್ಕೆ ಕರೆತಂದು ... ಹೆಣ್ಣಿನಂತೆ ತೋರಿಸುತ್ತಿದ್ದಾರೆ. ...ಷ್ಟು ಕಲರ್‌ಫುಲ್ ಇತಿಹಾಸ ...ಸುಧಾ, ನವ್ಯಾ ಎಂಬ ಸಹನಟಿಯ ...ತಂದು ಇವರೇ ವಧುಗಳು ಎಂದು ...ದ್ದಾರೆ. ಇವರ ಹಿನ್ನೆಲೆ ಇತ್ಯಾದಿ ...ತಿಳಿಯದ ಹುಡುಗರು ಈಗ ಆ ...ಯರನ್ನು ಮದುವೆಯಾಗುವಂತೆ ...ದ್ದಾರಂತೆ... ಆದರೆ ಈ ಜೂನಿ...ಆರ್ಟಿಸ್ಟುಗಳು ಶೂಟಿಂಗ್ ಮುಗೀತಿದ್ದಂತೆ ...ಂದು ಎಸ್ಕೇಪ್ ಆಗುತ್ತಿದ್ದಾರೆ.

ನಮ್ಮ ಕನ್ನಡದ ಹೆಣ್ಣುಮಕ್ಕಳು ಚಾನೆಲ್ ಮುಂದೆ ಬಂದು ತಮಗಿಷ್ಟ ಬಂದ ಹುಡುಗರನ್ನು ಆಯ್ಕೆ ಮಾಡಿಕೊಳ್ಳಲು, ತಮ್ಮ ಖಾಸಗಿ ಬದುಕನ್ನು ಸಾರ್ವಜನಿಕಗೊಳಿಸಿಕೊಳ್ಳಲು ಹಿಂದೇಟು ಹಾಕುವುದರಿಂದ ಸದ್ಯಕ್ಕೆ ಈ ಕಾರ್ಯಕ್ರಮದಲ್ಲಿ ಹೆಣ್ಣುಗಳದ್ದೇ ಬರ.

ಅಂದಹಾಗೆ, ಈ ಕಾರ್ಯಕ್ರಮದಿಂದ ಸ್ವತಃ ರಕ್ಷಿತಾಳೇ ಹೊರಹೋಗುವ ಸಾಧ್ಯತೆಯಿದೆಯಂತೆ. ಬೆಳಗ್ಗೆ ಒಂಭತ್ತಕ್ಕೆ ಆರಂಭಗೊಳ್ಳುವ ಈ ಕಾರ್ಯಕ್ರಮದ ಚಿತ್ರೀಕರಣಕ್ಕೆ ರಕ್ಷಿತಾ ಮೇಡಮ್ಮು ಮಧ್ಯಾಹ್ನದ ಊಟದ ಸಮಯಕ್ಕೆ ಬರ್ತಾರಂತೆ. ಆಮೇಲೆ ಈಕೆಯ ಮೇಕಪ್ಪು, ಕಾಸ್ಟ್ಯೂಮು ಎಲ್ಲಾ ಮುಗಿಯುವ ಹೊತ್ತಿಗೆ ಮಧ್ಯಾಹ್ನದ ಬ್ರೇಕ್!

ಹೋಗಲಿ ಮಧ್ಯಾಹ್ನವಾದರೂ ಚಿತ್ರೀಕರಣ ಮಾಡಬಹುದು ಎಂದರೆ ಅಷ್ಟೊತ್ತಿಗೆ ಆಕೆಯ ಪತಿ ಪ್ರೇಮ್ ಮಗ ಸೂರ್ಯನ ಸಮೇತ ಸೆಟ್‌ಗೆ ಹಾಜರಾಗುತ್ತಾರಂತೆ. ಅಲ್ಲಿಗೆ ಮತ್ತೊಂದು ಶಾರ್ಟ್ ಬ್ರೇಕ್! ಇನ್ನು ಮೇಡಂ ಅವರಿಗೆ ಫೋನ್ ಬಂತೆಂದರೆ, ಗಂಟೆಗಟ್ಟಲೆ ನಾನ್‌ಸ್ಟಾಪ್ ಟಾಕಿಂಗ್...

ಹೀಗೆ ಬ್ರೇಕ್ ಮೇಲೆ ಬ್ರೇಕ್ ಬೀಳುತ್ತಿರುವುದರಿಂದ ಒಂದು ದಿನದಲ್ಲಿ ಚಿತ್ರೀಕರಣಗೊಳ್ಳಬೇಕಿರುವ ಎಪಿಸೋಡು ನಾಲ್ಕು ದಿನವಾದರೂ ಮುಗಿಯುತ್ತಿಲ್ಲವಂತೆ... ಹೀಗಾಗಿ ಸುವರ್ಣದವರು ತಲೆಮೇಲೆ ಕೈಹೊತ್ತು 'ಸಾಕಪ್ಪಾ ಸಾಕು ರಕ್ಷಿತಾ ಸಹವಾಸ' ಅಂತಾ ಗೋಳೋ ಎಂದು ಅಳುತ್ತಿದ್ದಾರಂತೆ.... •



ಜೋಗಯ್ಯ ಮುಂದೆ ಹೋಗಯ್ಯ

ಪ್ರೇಮ್ ನಿರ್ದೇಶನದ ಜೋಗಯ್ಯ ಇನ್ನೇನು ಆರಂಭವಾಗೇಬಿಡ್ತು, ಈ ಹಿಂದಿನ ಚಿತ್ರಗಳಲ್ಲಿ ಆದ ಯಡವಟ್ಟುಗಳು ಈ ಸಿನೆಮಾದಲ್ಲಿ ಆಗೋಲ್ಲ... ಎಂಬ ಪ್ರೇಮ್ ಬಗೆಗಿನ ಅನಿಸಿಕೆಗಳು ಸುಳ್ಳಾಗಿವೆ.

ಈಗಾಗಲೇ ಆರಂಭವಾಗಬೇಕಿದ್ದ 'ಜೋಗಯ್ಯ' ಸುಮಾರು ಮೂರು ತಿಂಗಳ ಕಾಲ ಮುಂದೆ ಹೋಗಿದ್ದಾನೆ. ಶಿವಣ್ಣ ಸದ್ಯ 'ಮೈಲಾರಿ' ಚಿತ್ರದಲ್ಲಿ ಬ್ಯುಸಿ ಆಗಿರುವುದನ್ನೇ ನೆಪ ಮಾಡಿಕೊಂಡು ಪ್ರೇಮ್ 'ಜೋಗಯ್ಯ'ನನ್ನು ಮುಂದಕ್ಕೆ ತಳ್ಳಿದ್ದಾರೆ.

'ಜೋಗಯ್ಯ'ದಲ್ಲಿ ಶಿವಣ್ಣ ನಾಲ್ಕು ವಿಭಿನ್ನ ಗೆಟಪ್‌ಗಳಲ್ಲಿ ಕಾಣಿಸಿಕೊಳ್ಳಬೇಕಂತೆ. ಹೀಗಾಗಿ 'ಜೋಗಯ್ಯನ ಚಿತ್ರೀಕರಣದ ಸಂದರ್ಭದಲ್ಲಿ ಸುಮಾರು ನಾಲ್ಕೈದು ತಿಂಗಳು ಬೇರೆ ಯಾವ ಚಿತ್ರಗಳಲ್ಲೂ ನಟಿಸಬಾರದು' ಎಂದು ಅಗ್ರಿಮೆಂಟ್ ಮಾಡಿಸಿಕೊಂಡಿದ್ದಾರಂತೆ.

ಅಲ್ಲದೇ ಈ ಚಿತ್ರದ ನಾಯಕಿಯ ಪಾತ್ರಕ್ಕೆ ಅನುಷ್ಕಾ ಶೆಟ್ಟಿ, ಇಲಿಯಾನಾ, ವಿದ್ಯಾ ಬಾಲನ್, ಮತ್ತು ಶೃತಿ ಹಾಸನ್ ಅವರಿಗಾಗಿ ಪ್ರಯತ್ನಿಸುತ್ತಿದ್ದು, ಯಾರ ಕಾಲ್ ಶೀಟೂ ಇನ್ನೂ ದೊರಕಿಲ್ಲವಂತೆ.

ಹೀಗಾಗಿ ಜೋಗಯ್ಯ ಸದ್ಯಕ್ಕೆ ಆರಂಭವಾಗುವುದಂತೂ ಡೌಟೋ ಡೌಟು...



● ನಿಧಿಯೀಗ ಸಖತ್ ಬ್ಯುಸಿ!

ಕೋಮಲ್ ಜೊತೆ 'ಚಮ್ಕಾಯ್ಸಿ ಚಿಂದಿ ಉಡಾಯ್ಸಿ'ದಲ್ಲಿ ನಟಿಸಿದ್ದ ನಿಧಿ ಸುಬ್ಬಯ್ಯ ಎಂಬ ಕೂರ್ಗಿ ಹುಡುಗಿ ಇತ್ತೀಚೆಗೆ ಶ್ಯಾನೆ ಬಿಜೀ ಆಗ್‌ಬುಟ್ಟ್ವಾಳೆ..

ಹಾಗೆಂದು ಈಕೆಯೇನು ಹತ್ತಾರು ಸಿನೆಮಾಗಳಿಗೆ ಬುಕ್ ಆಗಿಲ್ಲ, ಪರಭಾಷಾ ಚಿತ್ರಗಳತ್ತ ರೆಕ್ಕೆ ಬಿಚ್ಚಿ ಹಾರಿಹೋಗಿಲ್ಲ, ಸದ್ಯಕ್ಕೆ ಈಕೆ ನಟಿಸುತ್ತಿರುವುದು ಯೋಗರಾಜಭಟ್ಟರ 'ಪಂಚರಂಗಿ'ಯಲ್ಲಿ ಮಾತ್ರ.

ಆದರೆ ಯಾರಾದರೂ ಮಾಧ್ಯಮದವರು ಸಂದರ್ಶನ ಕೊಡಿ ಎಂದರೆ, 'ಐ ಯಾಮ್ ವೆರೀ ಬ್ಯುಸೀ. ಆಮೇಲೆ ಮಾಡಿ, ಈ-ಮೇಲ್ ಮಾಡಿ' ಎಂದು ಕಾಗೆಗಳನ್ನು ಹಾರಿಸುತ್ತಿದ್ದಾಳಂತೆ.

'ಇದೇನಪ್ಪಾ ಇದು, ಈ ಹುಡ್ಗಿ ಯಾವಾಗ್ಲೂ ಪುರುಸೊತ್ತೇ ಇಲ್ಲ ಅಂತಾಳೆ. ಅದ್ಯಾವ ಸಿನಿಮಾದಲ್ಲಿ ಆಕ್ಟ್ ಮಾಡ್ತಾ ಅವ್ಳೆ ಈಕೆ' ಎಂದು ವರದಿಗಾರನೊಬ್ಬ ಆಕೆಯನ್ನೇ ಫಾಲೋ ಮಾಡಿಕೊಂಡು ಹೋಗಿದ್ದಾನೆ.

ಆಗ ಈಕೆ ದಿನಕ್ಕೆ ಮೂರ್ನಾಲ್ಕು ಬಾರಿ ಪಿವಿಆರ್ ಥಿಯೇಟರಿಗೆ ಹೋಗುವುದು ಗೊತ್ತಾಗಿದೆ. 'ಹೇಗಾದರೂ ಸರಿ ಪಿವಿಆರ್‌ನಲ್ಲಿ ನನ್ನ ಸಿನಿಮಾ ಹೆಚ್ಚು ದಿನ ಓಡಬೇಕು' ಎಂದು ನಿಧಿ ತನ್ನ ಕೈಯಿಂದ ಹಣ ಖರ್ಚುಮಾಡಿ, ಸಿಕ್ಕಸಿಕ್ಕವರಿಗೆಲ್ಲಾ ಪಿಚ್ಚರ್ ತೋರಿಸ್ತಾ ಇದಾಳೆ ಅನ್ನೋದು ಆಮೇಲೆ ಗೊತ್ತಾದ ವಿವರ...

ಇದು ನಿಧಿಯ ಬ್ಯುಸೀ ಶೆಡ್ಯೂಲು...!




ರಿಯಾಲಿಟಿ ಡ್ರಾಮಾ... ●

ಈಗ ಪುರುಸೊತ್ತಿಲ್ಲದ ಸ್ಟಾರ್ ನಟರಿಗೂ ರಿಯಾಲಿಟಿ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುವ ಬಯಕೆ ಶುರುವಾಗಿಬಿಟ್ಟಿದೆ.

ಪುನೀತ್ ರಾಜ್‌ಕುಮಾರ್ 'ಥೀ' ಎನ್ನುವ ಡ್ಯಾನ್ಸ್ ರಿಯಾಲಿಟಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸುತ್ತಿದ್ದಾರೆ. ಕಿಚ್ಚ ಸುದೀಪ್ ಕೂಡಾ ತಾನೇನು ಕಮ್ಮಿ ಇಲ್ಲ ಎಂಬಂತೆ ರಿಯಾಲಿಟಿ ಕಾರ್ಯಕ್ರಮವೊಂದನ್ನು ನಡೆಸಿಕೊಡಲು ನಿರ್ಧರಿಸಿದ್ದಾರೆ. 'ವಿಲ್ಲ ಟು ವಿಲೇಜ್' ಎಂಬ ಈ ರಿಯಾಲಿಟಿ ಶೋನಲ್ಲಿ ನಗರದ ಲಲನಾಮಣಿಯರನ್ನು ಕರೆದುಕೊಂಡು ಹೋಗಿ ಹಳ್ಳಿಯಲ್ಲಿ ಮೈಬಗ್ಗಿಸಿ ಕೆಲಸ ಮಾಡಿಸುವುದು ಸುದೀಪ್ ಜವಾಬ್ದಾರಿಯಂತೆ...

ಮೊದಲೇ ಎದುರಿಗಿದ್ದವರ ಕಪಾಳಕ್ಕೆ ಹೊಡೆಯುವುದು ಕಿಚ್ಚನ ಅಭ್ಯಾಸ. ಇಂಥಾದರಲ್ಲಿ ಈ ರಿಯಾಲಿಟಿ ಶೋನಲ್ಲಿ ಭಾಗವಹಿಸುವ ಹುಡುಗಿಯರ ಕೆನ್ನೆ ಛಿದ್ರವಾಗದಿದ್ದರೆ ಅವರ ಪುಣ್ಯ.



● ನಾಗ್ತಿಯ ಪೇಜ್-ತ್ರೀ!

ಮೊನ್ನೆ ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್ ಅವರ ನಿರ್ದೇಶನದ 'ನೂರು ಜನ್ಮಕ್ಕೂ' ಚಿತ್ರದ ಆಡಿಯೋ ಬಿಡುಗಡೆ ಸಮಾರಂಭದಲ್ಲಿ ಮಿಂಚಿದ್ದು ಆ ಚಿತ್ರದ ತಂಡದವರಲ್ಲ, ಬದಲಾಗಿ ಎಂದೂ ಕನ್ನಡ ಸಿನಿಮಾಗಳನ್ನು ನೋಡದ, ಕನ್ನಡ ಕೂಡ ಮಾತನಾಡದ ಇಂಗ್ಲಿಷ್ ಪತ್ರಿಕೆಗಳ ಪೇಜ್ 3ಯಲ್ಲಿ ಮಿಂಚುವ ಶ್ರೀಮಂತವರ್ಗದ ತರುಣ-ತರುಣಿಯರು!

ಕ್ಯಾಸೆಟ್ ಬಿಡುಗಡೆಯ ನಂತರ ಬೆಂಗಳೂರಿನ ಸುಂದರಿಯರಿಂದ ಕ್ಯಾಟ್‌ವಾಕ್ ಎಂಬ ಮೈಮಾಟ ಪ್ರದರ್ಶಿಸುವ ಕಾರ್ಯಕ್ರಮವೂ ಇತ್ತು, ಜೊತೆಗೆ ಪಕ್ಕದ ರೂಮಿನಲ್ಲಿ 'ಗುಂಡಿನ' ಕಾರ್ಯಕ್ರಮವೂ ನಡೆಯುತ್ತಿತ್ತು, ಈ 'ಪೇಜ್ ತ್ರೀ' ಜನರಿಗೂ 'ನೂರು ಜನ್ಮಕ್ಕೂ' ಏನು ಸಂಬಂಧ ಎಂಬುದು ಮಾತ್ರ ಯಾರಿಗೂ ಗೊತ್ತಾಗಲಿಲ್ಲ.



ನೆನಪು ಮಾಡಲೊಂದು ಬರ್ತ್‌ಡೇ!

'ನೆನಪಿರಲಿ' ಖ್ಯಾತಿಯ ಪ್ರೇಮ್ ಈಗ ಪ್ರೇಕ್ಷಕರ ಮನಸ್ಸಿನಲ್ಲಾಗಲಿ, ನೆನಪಿನಲ್ಲಾಗಲಿ ಇಲ್ಲವೇ ಇಲ್ಲ! ಕಾರಣ ಕಳೆದ ವರ್ಷ ಆತ ನಟಿಸಿದ ಒಂದೇ ಒಂದು ಚಿತ್ರ ಕೂಡಾ ತೆರೆ ಕಂಡಿಲ್ಲ, ಹೊಸ ಚಿತ್ರ ಸೆಟ್ಟೇರಿದ ಸುದ್ದಿಯೂ ಕೇಳಿಬರಲಿಲ್ಲ. ಆದರೂ ಇತ್ತೀಚೆಗೆ ಈ ಪ್ರೇಮ್ ಭಾರೀ ಅದ್ದೂರಿಯಾಗಿ ತನ್ನ ಬರ್ತ್‌ಡೇ ಪಾರ್ಟಿಯನ್ನು ಹಮ್ಮಿಕೊಂಡಿದ್ದರು. ಈ ರೀತಿ ಪಾರ್ಟಿ ಮಾಡಿಯಾದರೂ ಸುದ್ದಿಯಲ್ಲಿರೋಣ ಎಂಬುದು ಅವರ ಅನಿಸಿಕೆಯೇನೋ?

ಈ ಜಮಾನದ ಹುಡುಗರೇ ಬೇರೆ ತರಹದವರು. ಹಳೇ ಕಾಲದ ನಾಯಕ-ನಾಯಕಿಯರು ತಮ್ಮ ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆಲ್ಲದೇ ಇದ್ದಲ್ಲಿ ಬರ್ತ್‌ಡೇಯನ್ನು ಖಾಸಗಿಯಾಗಿ ಮನೆಯಲ್ಲೇ ಗುಟ್ಟಾಗಿ ಆಚರಿಸಿಕೊಳ್ಳುತ್ತಿದ್ದರು. ಒಂದುವೇಳೆ ಚಿತ್ರ ಬಾಕ್ಸಾಫೀಸ್‌ನಲ್ಲಿ ಜಯಭೇರಿ ಬಾರಿಸಿದ್ದರೆ ಮಾತ್ರ ಬರ್ತ್‌ಡೇಯನ್ನು ಜಾತ್ರೆಯಂತೆ ನಡೆಸುತ್ತಿದ್ದರು. ಆದರೆ ಈಗಿನ ಹುಡುಗರು ಚಿತ್ರ ಸೆಟ್ಟೇರದಿದ್ದರೂ, ಬಿಡುಗಡೆಯಾಗದಿದ್ದರೂ ಅವರ ಬರ್ತ್‌ಡೇ ಅದ್ದೂರಿತನಕ್ಕೆ ಏನು ಕೊರತೆ ಮಾಡುವುದಿಲ್ಲ! ಇದಕ್ಕೆ ನೆನಪಿರಲಿ ಪ್ರೇಮ್ ಒಂದು ಪುಟ್ಟ ಉದಾಹರಣೆ.

Regd.No.KA/RNP/BGS/2036/2008-10 Posted at : GPO, Bangalore-01.
R B P LANKESH, Kannada Weekly Price Rs. 12/- 05-05-2010 RNI No. KARKAN2005/14

ಹುಲಿಗಳ ಕಪಿ ಚೇಷ್ಟೆ!



ರವಿ ಶ್ರೀವತ್ಸ ಎಂಬ ಅಧಿಕಪ್ರಸಂಗಿ ನಿರ್ದೇಶಕ ಮೊನ್ನೆ ಮದುವೆ ಮನೆಯೊಂದಕ್ಕೆ ನುಗ್ಗಿ ಲಾತಾ ತಿಂದದ್ದು ಕಳೆದ ವಾರ ದೊಡ್ಡ ಸುದ್ದಿಯಾಗಿತ್ತು. ಈಗ ಅಂಥದ್ದೇ ಮತ್ತೊಂದು ಪ್ರಸಂಗ ನಡೆದಿದೆ. ಇದರ ನಾಯಕ ಸದಾ ವಿವಾದಗಳಲ್ಲಿ, ಕಿತಾಪತಿಗಳಲ್ಲಿ ಮುಳುಗುವ ಕಮಂಗಿ ಡೈರೆಕ್ಟರ್ ಓಂಪ್ರಕಾಶ್.

ಸದ್ಯ 'ಹುಲಿ' ಚಿತ್ರವನ್ನು ನಿರ್ದೇಶಿಸುತ್ತಿರುವ ಓಂಪ್ರಕಾಶ್ ಇನ್ನೊಂದೆರಡು ದಿನ ಮೈಸೂರಿನಲ್ಲೇ ಇದ್ದಿದ್ದರೆ ಅಲ್ಲಿನ ಮಂದಿ ಈತನನ್ನು ಚಿತ್ರತಂಡದ ಸಮೇತ ಮೂಟೆಕಟ್ಟಿ ಬೆಂಗಳೂರಿಗೆ ಪಾರ್ಸಲ್ ಮಾಡುವ ಸಾಧ್ಯತೆ ಇತ್ತು.

ಅದಕ್ಕೆ ಕಾರಣ ಮತ್ತೆ ಈತನ ತಿಕ್ಕಲುತನವಷ್ಟೆ...

ಅದು ಮೈಸೂರಿನ ದೊಡ್ಡಕೆರೆ ಮೈದಾನ. ಮೊದಲೇ ಆ ಗ್ರೌಂಡು ವಿವಾದಾತ್ಮಕ ಸ್ಥಳ. ಈ ಹಿಂದೆ ಇಲ್ಲಿ ಸ್ಟೇಡಿಯಂ ನಿರ್ಮಿಸುವ ಕಾರಣಕ್ಕಾಗಿ ಸಾಕಷ್ಟು ಮಾರಾಮಾರಿ ನಡೆದಿದೆ. ಇಂಥ ಸ್ಥಳದಲ್ಲಿ ಮೊನ್ನೆ ಓಂಪ್ರಕಾಶ್ ರಾವ್ 'ಹುಲಿ' ಚಿತ್ರದ ಚಿತ್ರೀಕರಣ ನಡೆಸಿದ್ದರು. ಆದರೆ ಮಾರನೆ ದಿನ ಅಲ್ಲಿನ ಫುಟ್ ಬಾಲ್ ಅಸೋಸಿಯೇಷನ್‌ನವರು ಅದೇ ಮೈದಾನದಲ್ಲಿ ಟೂರ್ನಮೆಂಟ್ ಆಯೋಜಿಸಿದ್ದರಂತೆ. ಹಿಂದಿನ ದಿನವೇ ಅಸೋಸಿಯೇಶನ್‌ನವರು ಬಂದು ಓಂ ಪ್ರಕಾಶ್ ರಾವ್‌ಗೆ 'ನಾಳೆ ಟೂರ್ನಮೆಂಟ್ ಇದೆ. ನಮಗೆ ಜಾಗ ತೆರವು ಮಾಡಿಕೊಡಿ' ಎಂದು ಕೇಳಿದ್ದಾರೆ. ಆದರೆ ಮಾರನೆ ಬೆಳಗ್ಗೆ ಆಟಗಾರರೆಲ್ಲ ಬರುವ ಹೊತ್ತಿಗೆ ಗ್ರೌಂಡಿನಲ್ಲಿ 'ಹುಲಿ'ಗಳ ತಂಡ ಮತ್ತೆ ಬೇರುಬಿಟ್ಟಿದೆ. ಟೂರ್ನಮೆಂಟ್ ನಡೆಸಬೇಕಿದ್ದ ಜಾಗದಲ್ಲಿ ಮತ್ತೆ ಯೂನಿಟ್ಟು ಠಳಾಯಿಸುತ್ತಿರುವುದನ್ನು ಕಂಡು ಆಟಗಾರರು ಹೌಹಾರಿದ್ದಾರೆ. ತಕ್ಷಣ ಜಾಗ ಖಾಲಿ ಮಾಡಿ ಎಂದು ಆಜ್ಞಾಪಿಸಿದ್ದಾರೆ.

ಆಗ ಅದೆಲ್ಲಿದ್ದರೋ ನಾಯಕನಟ ಕಿಶೋರ್. ಹಿಂದೆ 'ಕಬಡ್ಡಿ' ಆಡಿ ಅಭ್ಯಾಸವಿರುವ ಈತ ಥೇಟು 'ಹುಲಿ'ಯಂತೆ ಆಟಗಾರರ ಮೇಲೆ ಎರಗಿದ್ದಾರೆ. ಆದರೆ ಅವರೋ ಫುಟ್‌ಬಾಲ್ ಆಟಗಾರರು. ಹುಲಿಯಾದರೇನು, ಇಲಿಯಾದರೇನು ಅವರೆಲ್ಲ ತಿರುಗಿಬಿದ್ದು ಚಿತ್ರತಂಡದವರಿಗೆ ಒದೆಯಲು ಮುಂದಾಗಿದ್ದಾರೆ. ಅಲ್ಲೇ ಬಚ್ಚಿಟ್ಟುಕೊಂಡಿದ್ದ ಓಂಪ್ರಕಾಶ್‌ನನ್ನು ದರದರನೆ ಎಳೆದುಕೊಂಡು ಬಂದು ಲೈಡ್‌ಲೈಡ್ ಅಂತಾ ನಾಲ್ಕು ಬಾರಿಸಿದ್ದಾರೆ. ಅಷ್ಟರಲ್ಲಾಗಲೇ ಕಿಶೋರ್ ಅವರ ಕಾರು, ಯೂನಿಟ್‌ನ ವ್ಯಾನುಗಳ ಗಾಜು ಪುಡಿಯಾಗಿದೆ.



ಇಷ್ಟೆಲ್ಲಾ ಆಗಿ ಪೊಲೀಸರು ಬರೋ ಹೊತ್ತಿಗೆ ಫುಟ್‌ಬಾಲ್ ಆಟಗಾರರು ಪರಾರಿಯಾಗಿದ್ದಾರೆ.

ಫುಟ್‌ಬಾಲ್ ಗ್ರೌಂಡ್‌ನ ಪರ್ಮಿಷನ್ ಇರಲಿ, ಪೊಲೀಸರಿಂದಲೂ ಸಣ್ಣ ಅನುಮತಿ ಪಡೆಯದೆ ಸಾರ್ವಜನಿಕ ಸ್ಥಳದಲ್ಲಿ ಚಿತ್ರೀಕರಣ ನಡೆಸುತ್ತಿದ್ದುದರಿಂದ ಓಂ ಪ್ರಕಾಶ್ ತಂಡ ಆಟಗಾರರ ವಿರುದ್ಧ ಯಾವ ದೂರನ್ನೂ ದಾಖಲಿಸದೆ ಸೈಲೆಂಟಾಗಿ ಬೆಂಗಳೂರಿಗೆ ವಾಪಸ್ ಬಂದಿದೆ. ಒಂದು ವೇಳೆ ಪೊಲೀಸ್ ಕಂಪ್ಲೇಂಟು ಕೊಟ್ಟಿದ್ದಲ್ಲಿ ಇವರೇ ಕಾನೂನಿಗೆ ಸಿಕ್ಕುಬೀಳುವ ಅಪಾಯ ಇದ್ದುದರಿಂದ 'ಹುಲಿ'ಗಳು ಇಲಿಗಳಂತೆ ಬಾಲ ಮುದುರಿಕೊಂಡಿವೆ.

ಮೊದಲ ಕಿರಿಕ್ಕು

'ಹುಲಿ' ಚಿತ್ರತಂಡ ಮೈಸೂರಿನಲ್ಲಿ ಮಾಡಿಕೊಂಡ ಎರಡನೇ ಕಿರಿಕ್ಕಿದು. ಫುಟ್‌ಬಾಲ್ ಆಟಗಾರರಿಂದ ಗೂಸಾ ತಿನ್ನುವ ಮುನ್ನ ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲೂ ಓಂ ಪ್ರಕಾಶ್ ತರಲೆ ಮಾಡಿಕೊಂಡಿದ್ದರು.



ಮೃಗಾಲಯದಲ್ಲಿ ಚಿತ್ರೀಕರಣಕ್ಕೆ ಹೆಚ್ಚಾಗಿ ಅನುಮತಿ ನೀಡುವುದಿಲ್ಲ. ತೀರಾ ಅವಶ್ಯಕತೆ ಇದ್ದಾಗ ಒಂದಷ್ಟು ಷರತ್ತುಗಳ ಮೇರೆಗೆ, ಮಂಗಳವಾರದ ರಜೆಯ ದಿನದಂದು ಶೂಟಿಂಗ್‌ಗೆ ಅವಕಾಶ ಕೊಡುತ್ತಾರೆ. ಮೃಗಾಲಯದ ಒಳಗೆ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಪ್ರವೇಶಿಸುವಂತಿಲ್ಲ. ವಾಹನಗಳ ಶಬ್ದ ಮತ್ತು ಹೊಗೆಯಿಂದಾಗಿ ಅಲ್ಲಿನ ಪ್ರಾಣಿಗಳ ಆರೋಗ್ಯ ಹದಗೆಡುತ್ತದೆ ಎಂಬ ಕಾರಣಕ್ಕೆ. ಈ ಕಾರಣಕ್ಕಾಗಿಯೇ ಮೃಗಾಲಯಕ್ಕೆ ಬರುವ ಟೂರಿಸ್ಟ್‌ಗಳ ಓಡಾಟಕ್ಕೂ ಎಲೆಕ್ಟ್ರಿಕಲ್ ವೆಹಿಕಲ್‌ಗಳನ್ನು ಬಳಸಲಾಗುತ್ತದೆ. ಪ್ರವಾಸಿಗರ ರಂಜನೆಗಾಗಿ ಪ್ರಪಂಚದ ಯಾವ್ಯಾವುದೋ ಮೂಲೆಗಳ ಪ್ರಾಣಿಗಳನ್ನು ತಂದು ಅಲ್ಲಿ ಸಾಕಲಾಗುತ್ತದೆ. ಆ ಪ್ರಾಣಿಗಳು ಇಲ್ಲಿನ ವಾತಾವರಣಕ್ಕೆ ಹೊಂದಿಕೊಂಡು ಬದುಕುವುದೇ ದೊಡ್ಡ ವಿಚಾರ. ಅಂಥದರಲ್ಲಿ ಈ ಸಿನಿಮಾ ಮಂದಿಯ ಮೃಗೀಯ ವರ್ತನೆಗಳನ್ನು ಆ ಮುಗ್ಧ ಜೀವಿಗಳು ಹೇಗೆ ತಾನೆ ಸಹಿಸಲು ಸಾಧ್ಯ?

ಆದರೆ ಷರತ್ತುಗಳ ಮೇಲೆ ಅನುಮತಿಯನ್ನು ಪಡೆದ ಓಂ ಪ್ರಕಾಶ್ ಜೂ ಒಳಗೆ ಮನಸೋ ಇಚ್ಛೆ ವಾಹನಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಅಷ್ಟಕ್ಕೂ ಸುಮ್ಮನಾಗದೆ ಪ್ರಾಣಿಗಳ ಮೇಲೆ ಪವರ್‌ಫುಲ್ ಆದ ಹಾಲೊಜೆನ್ ಲೈಟುಗಳನ್ನು ಬಿಟ್ಟಿದ್ದಾರೆ. ಓಂ ಪ್ರಕಾಶ್ ತನಗಿಷ್ಟ ಬಂದಂತೆ ಕೋತ್‌ಕೋತಿಯ ಹಾಗೆ ಮೃಗಾಲಯದ ಹುಲಿಯ ಮೇಲೆ ಲೈಟುಗಳನ್ನು ಫೋಕಸ್ ಮಾಡಿದ ಕೂಡಲೇ ಅಲ್ಲಿದ್ದ ಹುಲಿಯೊಂದು ಕೆರಳಿಹೋಗಿದೆ. ಕೋಪ ಮತ್ತು ಭಯದಿಂದ ಆರ್ಭಟಿಸಿ ದಾಳಿ ಮಾಡಲು ಮುಂದಾಗಿದೆ.

ಕಡೆಗೆ ಓಂಪ್ರಕಾಶನ ಕಪಿ ಚೇಷ್ಟೆ ಮೃಗಾಲಯದ ಕಾರ್ಯ ನಿರ್ವಾಹಕ ಯತೀಶ್ ಕುಮಾರ್ ಮತ್ತು ನಿರ್ದೇಶಕ ಬೆಳ್ಳಿಯಪ್ಪ ಅವರಿಗೆ ತಿಳಿದು ಚಿತ್ರತಂಡವನ್ನು ಮೃಗಾಲಯದಿಂದ ಹೊರಗಟ್ಟಿದ್ದಾರೆ.

ಸಿಕ್ಕ ಅನುಮತಿಯನ್ನು ದುರುಪಯೋಗಮಾಡಿಕೊಳ್ಳುವ ಓಂ ಪ್ರಕಾಶ್‌ರಂಥ ನಿರ್ದೇಶಕರಿಂದ ಮುಂದೆ ಇಲ್ಲಿ ಶೂಟಿಂಗ್‌ಗೆ ಪರ್ಮಿಷನ್ ದೊರೆಯುವುದೇ ಅಸಾಧ್ಯ ಎನ್ನುವಂತಾಗಿದೆ..

● ಅರುಣ್‌ಕುಮಾರ್ ಜಿ.
arunodayagc@gmail.com



ಚಿತ್ರರಂಗಕ್ಕೆ ಆಪ್ತರಕ್ಷಕ...

'ಆಪ್ತರಕ್ಷಕ' ಅರವತ್ತು ದಿನಗಳ ಕಾಲ ತುಂಬಿದ ಪ್ರದರ್ಶನ ಕಂಡು ನೂರರತ್ತ ದಾಪುಗಾಲು ಇಡುತ್ತಿದೆ. ಅದೂ ರಾಜ್ಯಾದ್ಯಂತ ಸುಮಾರು 60 ಕೇಂದ್ರಗಳಲ್ಲಿ. ಅಂದರೆ ವಾರಕ್ಕೊಂದು ಕನ್ನಡ ಚಿತ್ರ ಥಿಯೇಟರ್‌ನಿಂದ ಮತ್ತೆ ಡಬ್ಬಾದೊಳಗೆ ಸೇರಿಕೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಕನ್ನಡ ಚಿತ್ರವೊಂದು 60 ಕೇಂದ್ರಗಳಲ್ಲಿ 100 ದಿನದತ್ತ ಸಾಗುತ್ತಿರುವುದು ಸಂತೋಷದ ವಿಷಯ. ಅದೂ ಐಪಿಎಲ್ ಕ್ರಿಕೆಟ್ ಸಂಭ್ರಮದಲ್ಲಿ ಬಾಲಿವುಡ್ ಚಿತ್ರಗಳೇ ತತ್ತರಿಸುತ್ತಿರುವಾಗ 'ಆಪ್ತರಕ್ಷಕ'ನ ಇಂತಹ ಯಶಸ್ಸನ್ನು ಮೆಚ್ಚಬೇಕಾದ್ದೇ. ಇದರ ಅರ್ಥ ಗುಣಾತ್ಮಕ ಚಿತ್ರಗಳಿಗೆ ಎಂದೂ ಕ್ರಿಕೆಟ್, ಬರ ಪ್ರವಾಹ ಇತ್ಯಾದಿಗಳು ಅಡ್ಡಿಯಾಗುವುದಿಲ್ಲ. ಇದನ್ನು 'ಆಪ್ತರಕ್ಷಕ' ಸಾಬೀತುಪಡಿಸಿದೆ.

ಈ ಚಿತ್ರದ ಯಶಸ್ಸಿಗೆ ವಿಷ್ಣುವರ್ಧನ್ ಅವರ ಅಮೋಘ ನಟನೆ ಎಷ್ಟು ಮುಖ್ಯ ಕಾರಣವೋ, ವಾಸು ಅವರ ನಿರ್ದೇಶನದ ಜಾಣ್ಮೆಯೂ ಅಷ್ಟೇ ಕಾರಣ. ಹಾಗೆಯೇ ಚಿತ್ರದ ಗಳಿಕೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ಭಾರೀ ಮೊತ್ತವನ್ನು ತೊಡಗಿಸಿದ ನಿರ್ಮಾಪಕ ಕೃಷ್ಣಕುಮಾರ್ ಅವರ ಧೈರ್ಯವನ್ನು ಶ್ಲಾಘಿಸಬೇಕು.

ಒಂದು ಕ್ಷಣ ಸುಮ್ಮನೆ ಆಲೋಚಿಸಿ... ಈ ಅರವತ್ತು ಕೇಂದ್ರಗಳಲ್ಲಿ 'ಆಪ್ತರಕ್ಷಕ' ಹೀಗೆ ಪ್ರದರ್ಶನವಾಗುತ್ತಿರದಿದ್ದರೆ ಆ ಕೇಂದ್ರಗಳಲ್ಲಿ ಹಾಕಲು ಬೇರೆ ಸಿನಿಮಾಗಳು ಕೂಡಾ ಥಿಯೇಟರ್ ಮಾಲೀಕರಿಗೆ ಸಿಗುತ್ತಿರಲಿಲ್ಲ. ಯಾಕೆಂದರೆ ಇತ್ತೀಚಿಗಿನ ಹೊಸ ಚಿತ್ರಗಳ ಗತಿ ಹೇಗಿದೆಯೆಂದರೆ ಶುಕ್ರವಾರ ಬಿಡುಗಡೆಯಾದ ಚಿತ್ರಗಳನ್ನು ಸೋಮವಾರವೇ ಥಿಯೇಟರ್ ಮಾಲೀಕರು ಎತ್ತಂಗಡಿ ಮಾಡುತ್ತಿದ್ದಾರೆ. ಈ ಎಲ್ಲ ಕಾರಣದಿಂದಾಗಿಯೇ ಅತ್ಯಂತ ದುಸ್ಥಿತಿಯಲ್ಲಿದ್ದ ಕನ್ನಡ ಚಿತ್ರರಂಗದ ಪಾಲಿಗೆ ನಿಜವಾದ ಅರ್ಥದಲ್ಲಿ ಈ ಚಿತ್ರ ಆಪ್ತ ರಕ್ಷಕನಾಗಿದೆ. ವಿಷ್ಣು ಅವರ ಕೊನೆಯ ಚಿತ್ರ 'ಆಪ್ತರಕ್ಷಕ' ಅವರ ಮೊದಲ ಚಿತ್ರ 'ನಾಗರಹಾವಿ'ನ ತರಹ ಅನೇಕಾನೇಕ ದಾಖಲೆಗಳತ್ತ ಮುನ್ನುಗ್ಗುತ್ತಿರುವುದು ಒಂದು ರೀತಿಯ ವಿಶೇಷ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore